
# ಸ್ತುತಿಪುಷ್ಪಾಂಜಲಿ



ಸಂಸ್ಥಾಪಕರು :

ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳು




ಬರೆದವರು :

ಅಧ್ಯಾತ್ಮವಿದ್ಯಾಪ್ರವೀಣ

ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿ



ಅಧ್ಯಾತ್ಮಪ್ರಕಾಶ ಕಾರ್ಯಾಲಯ

ಹೊಳೆನರಸೀಪುರ - 573 211

ದೂರವಾಣಿ: 08175 273820

www.adhyatmaprakasha.org.

e-mail: secretary@adhyatmaprakasha.org.

## ಇದೇ ಗ್ರಂಥಕರ್ತರಿಂದ ಪ್ರಕಾಶನಗೊಂಡಿರುವ ಗ್ರಂಥಗಳು


ಪುಟಗಳು

**1. ವೇದಸಾಹಿತ್ಯಪ್ರಿಯರಿಗೆ : (ಕರ್ಮಕಾಂಡದಲ್ಲಿ ಶ್ರದ್ಧಾವಂತರಿಗೆ)**

1. ರುದ್ರಭಾಷ್ಯಪ್ರಕಾಶ : (ನಮಸ್ತೇ ರುದ್ರ - ಎಂಬ ವೇದಭಾಗದ ಲಲಿತವಾದ ಕನ್ನಡ ವಿವರಣೆ) 156
2. ಚಮಕಾಧ್ಯಾಯಭಾಷ್ಯ : (ಚಮೇ - ಎಂಬ ವೇದಭಾಗದ ಸರಳ ವ್ಯಾಖ್ಯಾನ) 80
3. ಪುರುಷಸೂಕ್ತಭಾಷ್ಯ : (ಸಹಶ್ರಶೀರ್ಷಾ - ಎಂಬ ಸೂಕ್ತದ ಅರ್ಥ ವಿವರಣೆ) 107
4. ಶ್ರೀಸೂಕ್ತಭಾಷ್ಯ : (ಹಿರಣ್ಯವರ್ಣಾಂ - ಎಂಬ ಸೂಕ್ತದ ಅರ್ಥ) 62
5. ವಿಷ್ಣುಸೂಕ್ತಭಾಷ್ಯ : (ಋಗ್ವೇದದ ವಿಷ್ಣುಸೂಕ್ತದ 45 ಋಕ್ಕುಗಳ ಅರ್ಥ ವಿವರಣೆ - ನಾರಾಯಣಸೂಕ್ತ ಭಾಷ್ಯ ಸಮೇತ) 107
6. ಸೌರಸೂಕ್ತಭಾಷ್ಯ : (ಋಗ್ವೇದದ ಸೌರಸೂಕ್ತದ 64 ಋಕ್ಕುಗಳ ಅರ್ಥ ವಿವರಣೆ) 104

**2. ಪುರಾಣ ಸ್ತೋತ್ರ ಪ್ರಿಯರಿಗೆ (ಭಕ್ತಿಪ್ರಧಾನರಾದ ಸಾಧಕರಿಗೆ)**

7. ಅಧ್ಯಾತ್ಮ ರಾಮಾಯಣ : (ಸಂಪೂರ್ಣ ಮೂಲ, ಭಾವಾರ್ಥ ಸಹಿತ) 612
8. ಅಧ್ಯಾತ್ಮಶಂಕರವಿಜಯ : (ಶಂಕರರ ಜೀವನಚರಿತ್ರೆ) 188
9. ಶ್ರೀಗುರುಚರಿತಾಮೃತ : (ಶ್ರೀ ಶ್ರೀಗಳವರ ಜೀವನ ಚರಿತ್ರೆ ಮತ್ತು ಕಾರ್ಯಾಲಯದ ಇತಿಹಾಸ) 234
10. ಸ್ತೋತ್ರಮಾಲಾ - ಭಾಗ 1, ಪಂಚರತ್ನಗಳು: (1) ಭೀಷ್ಮಸ್ತವರಾಜ (2) ಹರಿಶರಣಾಷ್ಟಕ (3) ಅನುಸ್ಮೃತಿ (4) ಗಜೇಂದ್ರಮೋಕ್ಷ (5) ಆದಿತ್ಯಹೃದಯ 103
11. ಸ್ತೋತ್ರಮಾಲಾ - ಭಾಗ -2 : ಗಣಪತಿ ಸ್ತೋತ್ರಗಳು, 11 ಶಿವಸ್ತೋತ್ರಗಳು, 2 ವಿಷ್ಣುಸ್ತೋತ್ರಗಳು - ಪಾಂಡವಗೀತೆ ಸಹಿತ) 84
12. ಶಿವಾಪರಾಧಕ್ಷಮಾಪಣಾ ಸ್ತೋತ್ರ : (ವಿವರಣೆ ಸಹಿತ) 38
13. ಭಗವನ್ನಾಮಚಂದ್ರಿಕೆ : (ಅಷ್ಟೋತ್ತರ ಸಂಗ್ರಹ) 52
14. ಸನತ್ಸುಜಾತೀಯಮ್ : (ಪ್ರಕರಣಗಳು ಸಂಪುಟ 7) ಮಹಾಭಾರತಾಂತರ್ಗತ ಸನಸ್ತುಜಾತೀಯ ಶಾಂಕರಭಾಷ್ಯ ಅನುವಾದ ಸಹಿತ 254


ರಕ್ಷಾಕವಚದ ಮರು ಹಾಳೆಯಲ್ಲಿ ಮುಂದುವರೆದಿದೆ.

ಅಧ್ಯಾತ್ಮಗ್ರಂಥಾವಳಿ

# ಸ್ತುತಿಪುಷ್ಪಾಂಜಲಿ

ಸಂಪಾದಕರು :
ಅಧ್ಯಾತ್ಮವಿದ್ಯಾಪ್ರವೀಣ
**ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿ**

ಕ್ರಮಾಂಕ: 178

ಪ್ರಕಾಶಕರು :
ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ- 573211
ದೂರವಾಣಿ: 08175-273820
www.adhyatmaprakasha.Org.
Email: secretary@adhyatmaprakasha.Org.
**ಬೆಂಗಳೂರು ಶಾಖೆ :**
ನಂ.68, (ಹೊಸ ನಂ. 6) ಎ.ಪಿ.ಕೆ.ರಸ್ತೆ, 2ನೇ ಬ್ಲಾಕ್
ತ್ಯಾಗರಾಜನಗರ, ಬೆಂ .28 ; ದೂ.–26765548
Email: shankara.bhaskara@gmail.com
**2013**

**STUTHIPUSHANJALI** -
Written by **H.S. Lakshminarasimhamurthy**, Published by
Adhyatma Prakasha Karyalaya, (Public Charitable Trust)
Holenarasipur - 573211 (INDIA) ☎ : **08175-273820**
website : www adhyatmaprakasha.org.

| | | | |
|---|---|---|---|
| ಮೊದಲನೆಯ ಮುದ್ರಣ | I | 1972 | 1000 ಪ್ರತಿಗಳು |
| ಎರಡನೆಯ ಮುದ್ರಣ | II | 1981 | 1000 ಪ್ರತಿಗಳು |
| ಮೂರನೆಯ ಮುದ್ರಣ | III | 1989 | 2000 ಪ್ರತಿಗಳು |
| ನಾಲ್ಕನೆಯ ಮುದ್ರಣ | IV | 1999 | 2000 ಪ್ರತಿಗಳು |
| ಐದನೆಯ ಮುದ್ರಣ | V | 2010 | 3000 ಪ್ರತಿಗಳು |
| ಆರನೆಯ ಮುದ್ರಣ | VI | 2013 | 3000 ಪ್ರತಿಗಳು |

**ಪುಟಗಳು : 4+ 68 = 72**

**ಬೆಲೆ : ರೂ. 15/-**

**ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು**
**All Rights Reserved**

**ಅಕ್ಷರ ಜೋಡಣೆ :**
ಪ್ರಶಾಂತ್ ಎಂಟರ್‌ಪ್ರೈಸಸ್
ನಂ. 45, 3ನೇ ಮುಖ್ಯರಸ್ತೆ, ಟಿ.ಆರ್.ನಗರ ಪೋಸ್ಟ್,
ನಾಗಸಂದ್ರ, ಬೆಂಗಳೂರು - 560 028,
ದೂರವಾಣಿ : 94809 20749

**ಮುದ್ರಣಸ್ಥಾನ :**
ಶ್ರೀರಾಮ ಪ್ರಿಂಟರ್‍ಸ್
ನಂ. 25, 15ನೇ ಅಡ್ಡರಸ್ತೆ, 5ನೇ ಮುಖ್ಯರಸ್ತೆ
ಶ್ರೀನಿಧಿ ಬಡಾವಣೆ, ಬೆಂಗಳೂರು - 560 062
ದೂರವಾಣಿ : 98453 46197

# ಮುನ್ನುಡಿ
## (ಏಳನೆಯ ಮುದ್ರಣಕ್ಕೆ)

ಬಾಲಕರಿಗೆ ಬಾಯಿಪಾಠಕ್ಕೆ ಯೋಗ್ಯವಾಗಿಯೂ ಹಿರಿಯರಿಗೆ ಅರ್ಥಾನುಸಂಧಾನಕ್ಕೆ ತಕ್ಕದ್ದಾಗಿಯೂ ಭಾರತೀಯರ ಬಾಯಲ್ಲಿ ವಂಶಪಾರಂಪರ್ಯವಾಗಿ ಬೆಳೆದುಬಂದಿದ್ದು ಸನಾತನಧಾರ್ಮಿಕಸಂಸ್ಕೃತಿಯನ್ನು ಪ್ರತಿಬಿಂಬಿಸುವಂಥದೂ ಆಗಿರುವ ಕೆಲವು ಪ್ರಾರ್ಥನಾಪದ್ಯಗಳು, ಆರಿಸಿದ ಕೆಲವು ಸೂಕ್ತಿಗಳು, ಹಾಗೂ ಮಂತ್ರಗಳನ್ನು ಪ್ರತಿಪದಾರ್ಥಸಮೇತ ಈ ಗ್ರಂಥದಲ್ಲಿ ಬರೆದು ವಾಚಕರಿಗೆ ಅರ್ಪಿಸಲಾಗಿದೆ.

ಈ ಕಾರ್ಯಕ್ಕೆ 1972ರಲ್ಲಿ ಮೊದಲು ಪ್ರೇರಕರಾದವರು ಶ್ರೀ ಹೆಚ್. ವಿ. ಹಿರಣ್ಯಗೌಡರು. ಅವರು ಈಗ ನಿವೃತ್ತ ಸೂಪರಿಟೆಂಡಿಂಗ್ ಎಂಜಿನಿಯರರಾಗಿ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಶ್ರೀಯುತರ ಪ್ರೋತ್ಸಾಹದಿಂದ 2008ರಲ್ಲಿ **ಆರನೆಯ** ಬಾರಿಗೆ ಮುದ್ರಿಸಿ ಜನಪ್ರಿಯಾಗಿದ್ದ ಎಲ್ಲಾ ಪುಸ್ತಕಗಳು ಕೇವಲ 4-5 ವರ್ಷಗಳಲ್ಲಿ ಮಾರಾಟವಾದ್ದರಿಂದ ಭಕ್ತವೃಂದದವರ ಅಪೇಕ್ಷೆಯಂತೆ **ಏಳನೆಯ** ಬಾರಿಗೆ ಮುದ್ರಣವಾಗಿ ಹೊರಬಂದಿದೆ. ಗ್ರಂಥ ಶರೀರದಲ್ಲಿ ಯಾವಬದಲಾವಣೆಯೂ ಇಲ್ಲದೆ ಮುದ್ರಣದ ತಪ್ಪುಗಳನ್ನು ಮಾತ್ರ ತಿದ್ದಿ ಮುದ್ರಿಸಲಾಗಿದೆ. ಈ ಪುಸ್ತಕಕ್ಕೆ ಕೆಳಕಂಡ ಮಹನೀಯರುಗಳು ಉದಾರವಾಗಿ ಧನಸಹಾಯ ಮಾಡಿರುತ್ತಾರೆ.

| | |
|---|---|
| 1) ವಿ.ಬಿ. ಜೋಷಿ, ಧಾರವಾಡ | ರೂ. 10000-00 |
| 2) ಎಮ್.ವಿ. ಶ್ರೀಧರ್ ಮೈಸೂರು | ರೂ. 2000-00 |
| 3) ವೀರಜ್, ಬೆಂಗಳೂರು | ರೂ. 2000-00 |
| 4) ಹೆಚ್.ವಿ. ಹಿರಣ್ಯ ಗೌಡರು, ಬೆಂಗಳೂರು | ರೂ. 1100-00 |
| 6) ಅಶೋಕ ಎಮ್. ಬೆಳಗಾಮ್ | ರೂ. 500-00 |

ಶ್ರೀಯುತರೆಲ್ಲರಿಗೂ ಮತ್ತು ಪುಸ್ತಕವನ್ನು ಹೊರತರಲು ಪ್ರತ್ಯಕ್ಷ ಮತ್ತುಪರೋಕ್ಷವಾಗಿ ಸಹಕರಿಸಿದ ಎಲ್ಲಾಭಕ್ತರಿಗೂ ಕಾರ್ಯಾಲಯದ ಪರವಾಗಿ ಕೃತಜ್ಞತಾಪೂರ್ವಕವಾದ ವಂದನೆಗಳು. ಭಾರತೀಯ ಸಂಸ್ಕೃತಿಯ ಅಭಿಮಾನಿಗಳಾದ ವಾಚಕರು ಈ ಗ್ರಂಥವನ್ನು ಆದರದಿಂದ ಬರಮಾಡಿಕೊಳ್ಳುವರೆಂದು ಆಶಿಸಲಾಗಿದೆ.

**ವಿಜಯನಾಮಸಂವತ್ಸರಮಾರ್ಗಶಿರ ಬಹುಳ ಅಷ್ಟಮಿ**
**ಶ್ರೀಶ್ರೀಗಳವರ 133ನೆಯ ಜಂಯತಿ**
**ತಾ. 26.12.2013**

**ಪ್ರಕಾಶಕರು**

# ಮುನ್ನುಡಿ

## (ಒಂದನೆಯ ಮುದ್ರಣಕ್ಕೆ )

ಹೊಳೆನರಸೀಪುರದಲ್ಲಿರುವ ಧರ್ಮಾಭಿಮಾನಿಮಿತ್ರರಾದ ಶ್ರೀ|| ಹೆಚ್. ವಿ. ಹಿರಣ್ಯಗೌಡರು ''ಸ್ತುತಿಪುಷ್ಪಾಂಜಲಿ'' ಎಂಬ ಈ ಸ್ತೋತ್ರಸಂಗ್ರಹವನ್ನು ಪ್ರಕಟಿಸಲು ಯೋಚಿಸಿರುವದು ತುಂಬ ಸಂತೋಷದ ಸಂಗತಿ. ಬೆಳಗಾಗ ಏಳುತ್ತ ದೇವರನ್ನು ನೆನೆದು ಸುಪ್ರಭಾತವನ್ನು ಹಾಡುವದು, ಬಿಡುವಾದ ಎಲ್ಲವೇಳೆ ದೇವರ ಸ್ತುತಿಯ ಪದ್ಯವನ್ನೋ ಹಾಡನ್ನೋ ಹೇಳಿಕೊಳ್ಳುವದು, ಹಾಸಿಗೆಯಲ್ಲಿ ಮಲಗಿ ನಿದ್ರಿಸುವ ಮುನ್ನ ಒಂದು ಮಂಗಳಶ್ಲೋಕವನ್ನು ಮನಸ್ಸಿನಲ್ಲಿ ನೆನೆಯುವದು - ಇದು ನಮ್ಮ ಹಿರಿಯರು ಬೆಳೆಸಿಕೊಂಡುಬಂದ ಒಂದು ಸಂಪ್ರದಾಯ. ಇದನ್ನು ಅನುಸರಿಸಿ ಅವರು ಜೀವನದಲ್ಲಿ ಸುಂದರತಮವಾದ ಶಾಂತಿಯನ್ನು ಸಾಧಿಸಿದರು. ಈ ಶಾಂತಿಯು ನಮಗೂ ಬೇಕು. ಅದನ್ನು ಸಾಧಿಸಲು ಹಿರಿಯರ ಈ ದಾರಿ ಬಹು ಒಳ್ಳೆಯ ದಾರಿ. ಈ ದಾರಿಯನ್ನು ಹಿಡಿಯಲು ಇಂಥ ಪುಸ್ತಕವು ನೆರವಾಗುತ್ತದೆ. ಸ್ತೋತ್ರಗಳ, ಶ್ಲೋಕಗಳ ಜೊತೆಗೆ ಅರ್ಥವನ್ನೂ ಕೊಟ್ಟಿರುವದು ಭಾವ ಮೂಡುವದಕ್ಕೆ ತುಂಬ ಸಹಾಯಕವಾಗಿದೆ. ಈ ಸಂಗ್ರಹವನ್ನು ಪ್ರಕಟಿಸುತ್ತಿರುವ ಬಗ್ಗೆ ನಾನು ಪ್ರಕಾಶಕಮಿತ್ರರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

16- 3- 1972 **ಮಾಸ್ತಿ ವೆಂಕಟೇಶ ಅಯ್ಯಂಗಾರ್**

# ಓದುಗರಿಗೆ

ನಿಮಗೆ ಮೆಚ್ಚಾದ ಕೆಲವೇ ಪದ್ಯಗಳನ್ನು ಆರಿಸಿಕೊಂಡು ಚಿಕ್ಕಮಕ್ಕಳಿಗೆ ಅಕ್ಷರಸ್ಖಾಲಿತ್ಯವಿಲ್ಲದಂತೆ ಶುದ್ಧವಾಗಿ ಬಾಯಿಪಾಠಮಾಡಿಸಿರಿ. ಅನಂತರ ಆಯಾ ಶ್ಲೋಕಗಳ ಅಭಿಪ್ರಾಯವನ್ನು ಸರಳಭಾಷೆಯಲ್ಲಿ ಹೇಳಿರಿ. ಶಾಲೆ-ಕಾಲೇಜುಗಳಲ್ಲಿ ಹಾಗೂ ದೇವಾಲಯಗಳಲ್ಲಿ ನಡೆಯುವ ಸಮಾರಂಭಗಳಲ್ಲಿ ಈ ಪದ್ಯಗಳನ್ನು ಮಕ್ಕಳು ಕಂಠಪಾಠಮಾಡಿ ಪಠಿಸುವಂತೆ ಪ್ರೋತ್ಸಾಹಿಸಿರಿ. ಸಂಗೀತಜ್ಞಾನವುಳ್ಳವರು ರಾಗ ಬದ್ಧವಾಗಿಯೇ ಕಲಿಸಿದರೆ ಇನ್ನೂ ರುಚಿಕರವಾಗಿರುವದು. ಮುಂದಿನ ಪೀಳಿಗೆಗೆ ಧಾರ್ಮಿಕಸಂಸ್ಕೃತಿಯ ಆಸ್ತಿಯನ್ನು ಕಾಪಾಡುವದು ಎಲ್ಲ ಮಾತಾಪಿತೃಗಳ ಆದ್ಯ ಕರ್ತವ್ಯವಾಗಿದೆ.

**- ಸಂಪಾದಕ**

॥ ಓಂ ॥

# ಸ್ತುತಿಪುಷ್ಪಾಂಜಲಿ

## ಗಣಪತಿಯ ಪ್ರಾರ್ಥನೆ

**ಅಗಜಾನನಪದ್ಮಾರ್ಕಂ ಗಜಾನನಮಹರ್ನಿಶಮ್ ।**
**ಅನೇಕದಂ ತಂ ಭಕ್ತಾನಾಮೇಕದನ್ತಮುಪಾಸ್ಮಹೇ ॥ ೧॥**

**ಅರ್ಥ** : ಅಗಜಾನನಪದ್ಮಾರ್ಕಂ - ಪಾರ್ವತೀದೇವಿಯ ಮುಖಕಮಲಕ್ಕೆ ಸೂರ್ಯನಂತಿರುವ, ಗಜಾನನಂ - ಆನೆಯ ಮುಖವುಳ್ಳ, ಭಕ್ತಾನಾಂ - ಭಕ್ತರಿಗೆ, ಅನೇಕದಂ - ಅನೇಕ ಇಷ್ಟಾರ್ಥಗಳನ್ನು ಕೊಡುವ, ಏಕದನ್ತಂ - ಒಂದು ಕೋರೆಹಲ್ಲುಳ್ಳ ತಂ - (ಆ ಗಣಪತಿಯನ್ನು) ಅಹರ್ನಿಶಂ - ಹಗಲೂ ರಾತ್ರಿಯೂ, ಉಪಾಸ್ಮಹೇ - ಚಿಂತಿಸುತ್ತೇವೆ.

**ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಮ್ ।**
**ಪ್ರಸನ್ನವದನಂ ಧ್ಯಾಯೇತ್ ಸರ್ವವಿಘ್ನೋಪಶಾಂತಯೇ ॥ ೨ ॥**

**ಅರ್ಥ** : ಶುಕ್ಲಾಂಬರಧರಂ - ಬಿಳುಪಾದ ಬಟ್ಟೆಯನ್ನುಟ್ಟಿರುವ, ವಿಷ್ಣುಂ - ಸರ್ವವ್ಯಾಪಕನಾದ, ಶಶಿವರ್ಣಂ - ಚಂದ್ರನಂತೆ ಕಾಂತಿಯುಳ್ಳ, ಚತುರ್ಭುಜಂ - ನಾಲ್ಕು ತೋಳುಗಳುಳ್ಳ, ಪ್ರಸನ್ನವದನಂ - ಪ್ರಸನ್ನವಾದ ಮುಖವುಳ್ಳ ಗಣಪತಿಯನ್ನು, ಸರ್ವವಿಘ್ನೋಪಶಾಂತಯೇ - ಎಲ್ಲಾ ವಿಧವಾದ ಅಡ್ಡಿಗಳ ಪರಿಹಾರಕ್ಕಾಗಿ, ಧ್ಯಾಯೇತ್ - ಧ್ಯಾನಿಸಬೇಕು.

**ವಕ್ರತುಂಡ ಮಹಾಕಾಯ ಕೋಟಿಸೂರ್ಯಸಮಪ್ರಭ ।**
**ಅವಿಘ್ನಂ ಕುರು ಮೇ ದೇವ ಸರ್ವಕಾರ್ಯೇಷು ಸರ್ವದಾ ॥ ೩॥**

**ಅರ್ಥ** : ವಕ್ರತುಂಡ - ಡೊಂಕಾದ ಕೋರೆದಾಡೆಗಳುಳ್ಳವನೆ, ಮಹಾಕಾಯ - ದಪ್ಪ ಶರೀರವುಳ್ಳವನೆ, ಕೋಟಿಸೂರ್ಯಸಮಪ್ರಭ - ಕೋಟಿಸೂರ್ಯರಿಗೆ ಸಮಾನವಾದ ತೇಜಸ್ಸುಳ್ಳವನೆ, ದೇವ - ಮಹಾಗಣಪತಿಸ್ವಾಮಿಯೆ, ಮೇ -

ನನಗೆ, ಸದಾ - ಯಾವಾಗಲೂ, ಸರ್ವಕಾರ್ಯೇಷು - ಎಲ್ಲಾ ಕೆಲಸಗಳಲ್ಲಿಯೂ, ಅವಿಘ್ನಂ - ಅಡ್ಡಿಯಿಲ್ಲದಿರುವಿಕೆಯನ್ನು, ಕುರು - ಉಂಟುಮಾಡು.

**ಗಜಾನನಂ ಭೂತಗಣಾಧಿಸೇವಿತಂ**
**ಕಪಿತ್ಥಜಂಬೂಫಲಸಾರಭಕ್ಷಕಮ್ ।**
**ಉಮಾಸುತಂ ಶೋಕವಿನಾಶಕಾರಣಂ**
**ನಮಾಮಿ ವಿಘ್ನೇಶ್ವರಪಾದಪಂಕಜಮ್ ॥ ೪ ॥**

**ಅರ್ಥ** : ಗಜಾನನಂ - ಆನೆಯ ಮುಖವುಳ್ಳ, ಭೂತಗಣಾಧಿಸೇವಿತಂ - ಪ್ರಮಥಾದಿಭೂತಗಳಿಂದ ಪೂಜಿತನಾದ, ಕಪಿತ್ಥ...... ಭಕ್ಷಕಮ್ - ಬೇಲದಹಣ್ಣು, ನೇರಳೇಹಣ್ಣುಗಳ ರಸವನ್ನು ಸವಿಯುವ, ಉಮಾಸುತಂ - ಪಾರ್ವತಿಯ ಮಗನಾದ, ಶೋಕವಿನಾಶಕಾರಣಂ - ದುಃಖವನ್ನು ನಾಶಮಾಡುವವನಾದ, ವಿಘ್ನೇಶ್ವರಪಾದಪಂಕಜಮ್ - ವಿಘ್ನರಾಜನಾದ ಗಣಪತಿಯ ಪಾದಕಮಲಗಳನ್ನು, ನಮಾಮಿ - ನಮಸ್ಕರಿಸುತ್ತೇನೆ.

## ಸರಸ್ವತಿಯ ಪ್ರಾರ್ಥನೆ

**ಸರಸ್ವತಿ ನಮಸ್ತುಭ್ಯಂ ವರದೇ ಕಾಮರೂಪಿಣಿ ।**
**ವಿದ್ಯಾರಂಭಂ ಕರಿಷ್ಯಾಮಿ ಸಿದ್ಧಿರ್ಭವತು ಮೇ ಸದಾ ॥ ೫ ॥**

**ಅರ್ಥ** : ಕಾಮರೂಪಿಣಿ - ಭಕ್ತರಿಗೆ ಇಷ್ಟವಾದಂಥ ರೂಪವನ್ನು ಧರಿಸಿರುವ, ವರದೇ - ವರಪ್ರದಳಾದ, ಸರಸ್ವತಿ - ಎಲೈ ಸರಸ್ವತಿಯೆ, ತುಭ್ಯಂ - ನಿನಗೆ, ನಮಃ - ನಮಸ್ಕಾರವು. ವಿದ್ಯಾರಂಭಂ - (ನಾನು) ವಿದ್ಯಾಭ್ಯಾಸದ ಆರಂಭ ವನ್ನು, ಕರಿಷ್ಯಾಮಿ - ಮಾಡುವೆನು, ಮೇ - ನನಗೆ, ಸದಾ - ಯಾವಾಗಲೂ, ಸಿದ್ಧಿಃ - ವಿದ್ಯಾಪ್ರಾಪ್ತಿಯು, ಭವತು - ಆಗಲಿ.

**ನಮಸ್ತೇ ಶಾರದಾದೇವಿ ಕಾಶ್ಮೀರಪುರವಾಸಿನಿ ।**
**ತ್ವಾಮಹಂ ಪ್ರಾರ್ಥಯೇ ನಿತ್ಯಂ ವಿದ್ಯಾದಾನಂ ಚ ದೇಹಿ ಮೇ ॥ ೬ ॥**

**ಅರ್ಥ** : ಕಾಶ್ಮೀರಪುರವಾಸಿನಿ - ಕಾಶ್ಮೀರಪುರದಲ್ಲಿ ವಾಸವಾಗಿರುವ, ಶಾರದಾದೇವಿ - ಎಲೈ ಶಾರದಾದೇವಿಯೆ, ತೇ - ನಿನಗೆ, ನಮಃ - ನಮಸ್ಕಾರವು.

ಅಹಂ - ನಾನು, ತ್ವಾಂ - ನಿನ್ನನ್ನು, ನಿತ್ಯಂ - ಯಾವಾಗಲೂ, ಪ್ರಾರ್ಥಯೇ ಬೇಡುವೆನು. ಮೇ - ನನಗೆ, ವಿದ್ಯಾದಾನಂ -ವಿದ್ಯಾದಾನವನ್ನು, (ವಿದ್ಯೆಯ ಪ್ರಾಪ್ತಿಯನ್ನು) ದೇಹಿ - ಕೊಡು.

**ಯಾ ಕುಂದೇಂದುತುಷಾರಹಾರಧವಳಾ ಯಾ ಶುಭ್ರವಸ್ತ್ರಾನ್ವಿತಾ ।**
**ಯಾ ವೀಣಾವರದಂಡಮಂಡಿತಕರಾ ಯಾ ಶ್ವೇತಪದ್ಮಾಸನಾ ॥**
**ಯಾ ಬ್ರಹ್ಮಾಚ್ಯುತಶಂಕರಪ್ರಭೃತಿಭಿರ್ದೇವೈಃ ಸದಾ ಪೂಜಿತಾ ।**
**ಸಾ ಮಾಂ ಪಾತು ಸರಸ್ವತೀ ಭಗವತೀ ನಿಶ್ಶೇಷಜಾಡ್ಯಾಪಹಾ ॥ ೭ ॥**

**ಅರ್ಥ** : ಯಾ - ಯಾವ ದೇವಿಯು, ಕುಂದೇಂದು .... ಧವಳಾ - ಮಲ್ಲಿಗೆ, ಚಂದ್ರ, ಹಿಮಗಳಂತೆ ಬಿಳುಪಾದ ಹಾರಗಳಿಂದ ಶುಭ್ರಳಾಗಿ ಅಲಂಕೃತ ಳಾಗಿರುವಳೋ, ಯಾ - ಯಾವಾಕೆಯು, ಶುಭ್ರವಸ್ತ್ರಾನ್ವಿತಾ - ಸ್ವಚ್ಛವಾದ ಬಿಳಿಯ ಬಟ್ಟೆಯನ್ನುಟ್ಟಿರುವಳೋ, ಯಾ - ಯಾವಳು, ವೀಣಾವರದಂಡ ಮಂಡಿತಕರಾ - ಶ್ರೇಷ್ಠವಾದ ವೀಣೆಯ ಕೋಲಿನಿಂದ ಅಲಂಕೃತವಾದ ಕೈಯುಳ್ಳವಳೋ, ಯಾ- ಯಾವಳು, ಶ್ವೇತಪದ್ಮಾಸನಾ - ಬಿಳುಪಾದ ಕಮಲದ ಮೇಲೆ ಕುಳಿತಿರುವಳೋ, ಯಾ - ಯಾವಳು, ಬ್ರಹ್ಮಾ ... ಪ್ರಭೃತಿಭಿಃ - ಬ್ರಹ್ಮ, ವಿಷ್ಣು, ಶಿವ - ಮುಂತಾದ, ದೇವೈಃ - ದೇವತೆಗಳಿಂದ, ಸದಾ - ಯಾವಾಗಲೂ, ಪೂಜಿತಾ - ಪೂಜಿಸಲ್ಪಡುವಳೋ, ಸಾ ಭಗವತೀ - ಆ ಪೂಜ್ಯಳಾದ, ಸರಸ್ವತೀ - ಸರಸ್ವತಿಯು, ನಿಶ್ಶೇಷಜಾಡ್ಯಾಪಹಾ - ಆಲಸ್ಯವನ್ನು ಸಂಪೂರ್ಣವಾಗಿ ಕಳೆಯುವವಳಾಗಿ, ಮಾಂ - ನನ್ನನ್ನು, ಪಾತು - ಕಾಪಾಡಲಿ.

## ಗುರುಪ್ರಾರ್ಥನೆ

**ಗುರವೇ ಸರ್ವಲೋಕಾನಾಂ ಭಿಷಜೇ ಭವರೋಗಿಣಾಮ್ ।**
**ನಿಧಯೇ ಸರ್ವವಿದ್ಯಾನಾಂ ದಕ್ಷಿಣಾಮೂರ್ತಯೇ ನಮಃ ॥ ೮ ॥**

**ಅರ್ಥ** : ಸರ್ವಲೋಕಾನಾಂ - ಎಲ್ಲಾ ಲೋಕಗಳಿಗೂ, ಗುರವೇ - ದೊಡ್ಡವನಾದ, ಭವರೋಗಿಣಾಮ್ - ಸಂಸಾರವೆಂಬ ರೋಗವುಳ್ಳವರಿಗೆ ಭಿಷಜೇ - ವೈದ್ಯನಾದ, ಸರ್ವವಿದ್ಯಾನಾಂ - ಎಲ್ಲಾ ವಿದ್ಯೆಗಳಿಗೂ, ನಿಧಯೇ - ಭಂಡಾರ

ದಂತಿರುವ, ದಕ್ಷಿಣಾಮೂರ್ತಯೇ - ದಕ್ಷಿಣಾಭಿಮುಖವಾಗಿ ಕುಳಿತುಕೊಂಡಿರುವ ಗುರುವಿಗೆ, ನಮಃ - ನಮಸ್ಕಾರವು.

**ಗುರುರ್ಬ್ರಹ್ಮಾ ಗುರುರ್ವಿಷ್ಣುಃ ಗುರುರೇವ ಮಹೇಶ್ವರಃ ।**
**ಗುರುಸ್ಸಾಕ್ಷಾದ್ ಪರಂ ಬ್ರಹ್ಮ ತಸ್ಮೈ ಶ್ರೀಗುರವೇ ನಮಃ ॥ ೯ ॥**

**ಅರ್ಥ** : ಗುರುಃ - ಗುರುವು, ಬ್ರಹ್ಮಾ - ಸೃಷ್ಟಿಕರ್ತನು. ಗುರುಃ - ಗುರುವು, ವಿಷ್ಣುಃ - ಪಾಲಕನು, ಗುರುರೇವ - ಗುರುವೇ, ಮಹೇಶ್ವರಃ - ಸಂಹಾರಕರ್ತನು, ಗುರುಃ - ಗುರುವು, ಸಾಕ್ಷಾದ್ - ಪ್ರತ್ಯಕ್ಷನಾದ, ಪರಂ ಬ್ರಹ್ಮ- ಪರಬ್ರಹ್ಮವು. ತಸ್ಮೈ - ಆ, ಶ್ರೀಗುರವೇ - ಶ್ರೀಗುರುವಿಗೆ, ನಮಃ - ನಮಸ್ಕಾರವು.

## ಶಿವಪ್ರಾರ್ಥನೆ

**ಹರ ಶಂಭೋ ಮಹಾದೇವ ವಿಶ್ವೇಶಾಮರವಲ್ಲಭ ।**
**ಶಿವ ಶಂಕರ ಸರ್ವಾತ್ಮನ್ ನೀಲಕಂಠ ನಮೋಽಸ್ತು ತೇ ॥ ೧೦ ॥**

**ಅರ್ಥ** : ಹರ - ಸರ್ವಪಾಪಪರಿಹಾರಕನೆ, ಶಂಭೋ - ಸುಖವನ್ನುಂಟುಮಾಡುವವನೆ, ಮಹಾದೇವ - ದೇವತೆಗಳಲ್ಲೆಲ್ಲ ದೊಡ್ಡವನೆ, ವಿಶ್ವೇಶ - ಜಗತ್ತಿಗೆಲ್ಲ ಪ್ರಭುವೆ, ಅಮರವಲ್ಲಭ - ದೇವತೆಗಳ ಯಜಮಾನನೆ, ಶಿವ - ಮಂಗಳಸ್ವರೂಪನೆ, ಶಂಕರ - ಸುಖವನ್ನುಂಟುಮಾಡುವವನೆ, ಸರ್ವಾತ್ಮನ್ - ಎಲ್ಲರ ಆತ್ಮನಾದವನೆ, ನೀಲಕಂಠ - ಕಪ್ಪಾದ ಕುತ್ತಿಗೆಯುಳ್ಳ ಪರಮೇಶ್ವರನೆ, ತೇ - ನಿನಗೆ, ನಮಃ - ನಮಸ್ಕಾರವು, ಅಸ್ತು - ಆಗಲಿ.

**ನಮೋ ಯಜ್ಞಜಗನ್ನಾಥ ನಮಸ್ತ್ರಿಭುವನೇಶ್ವರ ।**
**ಪೂಜಾಂ ಗೃಹಾಣ ಮದ್ದತ್ತಾಂ ಮಹೇಶ ಪ್ರಥಮೇ ಪದೇ ॥ ೧೧ ॥**

**ಪೂರ್ವೇ ನಂದೀಮಹಾಕಾಲೌ ಗಣಶ್ಶೃಂಗೀ ಚ ದಕ್ಷಿಣೇ ।**
**ಪಶ್ಚಿಮೇ ಚ ವೃಷಸ್ಕಂದೌ ದೇಶಕಾಲೌ ತಥೋತ್ತರೇ ॥ ೧೨ ॥**

**ಗಂಗಾ ಚ ಯಮುನಾ ಚೈವ ಪಾರ್ಶ್ವೇ ಶಂಭೋರ್ವ್ಯವಸ್ಥಿತಾಃ ।**
**ನಮೋಽವ್ಯಕ್ತಾಯ ಸೂಕ್ಷ್ಮಾಯ ನಮಸ್ತೇ ತ್ರಿಪುರಾಂತಕ ॥**
**ಪೂಜಾಂ ಗೃಹಾಣ ದೇವೇಶ ಯಥಾಶಕ್ತ್ಯುಪಪಾದಿತಮ್ ॥ ೧೩ ॥**

**ಅರ್ಥ** : ಯಜ್ಞ ಜಗನ್ನಾಥ - ಯಜ್ಞರೂಪನಾದವನೆ, ಜಗನ್ನಾಥನೆ, ತ್ರಿಭುವನೇಶ್ವರ - ಮೂರುಲೋಕಗಳೊಡೆಯನೆ, ತೇ - ನಿನಗೆ, ನಮಃ - ನಮಸ್ಕಾರವು. ಮಹೇಶ - ಎಲೈ ಈಶ್ವರನೆ, ಪ್ರಥಮೇ ಪದೇ - ಮೊದಲನೆಯ ಯಾಮದಲ್ಲಿ, ಮದ್ದತ್ತಾಂ - ನಾನು ಸಮರ್ಪಿಸಿದ, ಪೂಜಾಂ - ಪೂಜೆಯನ್ನು, ಗೃಹಾಣ - ಸ್ವೀಕರಿಸು. ಪೂರ್ವೇ - ಪೂರ್ವದಿಕ್ಕಿನಲ್ಲಿ, ನಂದೀಮಹಾಕಾಲೌ - ನಂದಿ ಮತ್ತು ಮಹಾಕಾಲರೂ, ದಕ್ಷಿಣೇ - ದಕ್ಷಿಣದಿಕ್ಕಿನಲ್ಲಿ, ಗಣಶೃಂಗೀ - ಗಣಪತಿ ಮತ್ತು ಶೃಂಗಿಯೂ, ಪಶ್ಚಿಮೇ - ಪಶ್ಚಿಮದಿಕ್ಕಿನಲ್ಲಿ, ವೃಷಸ್ಕಂದೌ - ಬಸವನೂ ಹಾಗೂ ಷಣ್ಮುಖನೂ, ತಥಾ - ಹಾಗೆಯೇ, ಉತ್ತರೇ - ಉತ್ತರ ದಿಕ್ಕಿನಲ್ಲಿ, ದೇಶಕಾಲೌ - ದೇಶ ಮತ್ತು ಕಾಲದೇವತೆಗಳೂ, ಚ - ಮತ್ತು, ಶಂಭೋಃ - ಈಶ್ವರನ ಮಗ್ಗುಲಲ್ಲಿ, ಗಂಗಾ ಯಮುನಾ ಚ - ಗಂಗೆಯಮುನೆ ಯರು, ವ್ಯವಸ್ಥಿತಾಃ - ಇದ್ದುಕೊಂಡಿರುವರು. ಅವ್ಯಕ್ತಾಯ - ಇಂದ್ರಿಯ ಗೋಚರನಲ್ಲದವನೂ, ಸೂಕ್ಷ್ಮಾಯ - ಸೂಕ್ಷ್ಮನೂ ಆದ, ತ್ರಿಪುರಾಂತಕ - ತ್ರಿಪುರ ಸಂಹಾರಕನೆ, ತೇ - ನಿನಗೆ, ನಮಃ - ನಮಸ್ಕಾರವು. ದೇವೇಶ - ದೇವತೆಗಳೊಡೆಯನೆ, ಯಥಾಶಕ್ತಿ - ಯೋಗ್ಯತೆಯಿದ್ದಷ್ಟು, ಉಪಪಾದಿತಾಂ - ಮಾಡಿದಂಥ, ಪೂಜಾಂ - ಪೂಜೆಯನ್ನು, ಗೃಹಾಣ - ಸ್ವೀಕರಿಸು.

## ಮೃತ್ಯುಂಜಯಪ್ರಾರ್ಥನೆ

**ಮೃತ್ಯುಂಜಯಾಯ ರುದ್ರಾಯ ನೀಲಕಂಠಾಯ ಶಂಭವೇ ।**
**ಅಮೃತೇಶಾಯ ಶರ್ವಾಯ ಮಹಾದೇವಾಯ ತೇ ನಮಃ ॥೧೪॥**

**ಅರ್ಥ** : ಮೃತ್ಯುಂಜಯಾಯ - ಯಮನನ್ನು ಜಯಿಸಿದ, ರುದ್ರಾಯ - ದುಃಖವನ್ನು ಹೋಗಲಾಡಿಸುವ, ನೀಲಕಂಠಾಯ - ಕಪ್ಪುಕಂಠವುಳ್ಳ, ಶಂಭವೇ - ಸುಖಕರನಾದ, ಅಮೃತೇಶಾಯ - ಅಮೃತಕ್ಕೊಡೆಯನಾದ, ಶರ್ವಾಯ - ಜಗತ್ತನ್ನು ನಾಶಗೊಳಿಸುವವನಾದ, ಮಹಾದೇವಾಯ - ಮಹಾದೇವನಾದ, ತೇ - ನಿನಗೆ, ನಮಃ - ನಮಸ್ಕಾರವು.

## ಪಾರ್ವತೀಪರಮೇಶ್ವರ ಪ್ರಾರ್ಥನೆ

**ಯಶ್ಶಿವೋ ನಾಮರೂಪಾಭ್ಯಾಂ ಯಾ ದೇವೀ ಸರ್ವಮಂಗಳಾ ।**
**ತಯೋಸ್ಸಂಸ್ಮರಣಾತ್ ಪುಂಸಾಂ ಸರ್ವತೋ ಜಯಮಂಗಳಮ್॥ ೧೫॥**

**ಅರ್ಥ** : ನಾಮರೂಪಾಭ್ಯಾಂ - ನಾಮರೂಪಗಳಿಂದ ತೋರಿಕೊಳ್ಳುತ್ತಿರುವ, ಯಃ - ಯಾವ, ಶಿವಃ - ಶಿವನು, ಸರ್ವಮಂಗಳಾ - ಸರ್ವಮಂಗಳೆಯಾದ, ಯಾ - ಯಾವ, ದೇವೀ - ತಾಯಿಯಾದ ಪಾರ್ವತಿಯು, ತಯೋಃ- ಅವರಿಬ್ಬರ, ಸಂಸ್ಮರಣಾತ್ - ನೆನೆಸಿಕೊಳ್ಳುವಿಕೆಯಿಂದ, ಪುಂಸಾಂ - ಮನುಷ್ಯರಿಗೆ, ಸರ್ವತಃ - ಎಲ್ಲೆಲ್ಲೂ, ಜಯಮಂಗಳಮ್ - ಜಯವೂ ಮಂಗಳವೂ (ಉಂಟಾಗುವವು).

## ಗೌರೀಪ್ರಾರ್ಥನೆ

**ನಮಸ್ತೇ ಗಿರಿಜಾದೇವಿ ನಮಸ್ತ್ರೈಲೋಕ್ಯನಾಯಕಿ ।**
**ನಮಸ್ತೇ ಸರ್ವಪಾಪಘ್ನಿ ಸ್ವರ್ಣಗೌರಿ ನಮೋಽಸ್ತು ತೇ ॥೧೬॥**

**ಅರ್ಥ** : ಗಿರಿಜಾದೇವಿ - ಪರ್ವತರಾಜನ ಮಗಳಾದ ದೇವಿಯೆ, ತ್ರೈಲೋಕ್ಯನಾಯಕಿ - ಮೂರು ಲೋಕಕ್ಕೂ ಒಡೆಯಳೆ, ಸರ್ವಪಾಪಘ್ನಿ - ಎಲ್ಲಾ ಪಾಪಗಳನ್ನೂ ಪರಿಹರಿಸುವವಳೆ, ಸ್ವರ್ಣಗೌರಿ - ಚಿನ್ನದಂತೆ ಹೊಳೆಯುವ ಹಳದಿಯ ಬಣ್ಣದ ಗೌರಿಯೆ, ತೇ - ನಿನಗೆ, ನಮಃ - ನಮಸ್ಕಾರವು, ಅಸ್ತು - ಆಗಲಿ.

**ಸರ್ವಮಂಗಳಮಾಂಗಲ್ಯೇ ಶಿವೇ ಸರ್ವಾರ್ಥಸಾಧಿಕೇ ।**
**ಶರಣ್ಯೇ ತ್ರ್ಯಂಬಕೇ ಗೌರಿ ನಾರಾಯಣಿ ನಮೋಽಸ್ತು ತೇ ॥೧೭॥**

**ಅರ್ಥ** : ಸರ್ವಮಂಗಳಮಾಂಗಲ್ಯೇ - ಎಲ್ಲಾ ಶುಭಪರಂಪರೆಗಳ ಮಂಗಳವನ್ನು ಕೊಡುವವಳೆ, ಶಿವೇ - ಶಿವನ ಪತ್ನಿಯೆ, ಸರ್ವಾರ್ಥಸಾಧಿಕೇ - ಎಲ್ಲಾ ಕಾರ್ಯಸಿದ್ಧಿಗಳನ್ನೂ ದಯಪಾಲಿಸುವವಳೆ, ಶರಣ್ಯೇ - ಶರಣಾಗತರಕ್ಷಕಳೆ, ತ್ರ್ಯಂಬಕೇ - ಮುಕ್ಕಣ್ಣನ ಮಡದಿಯೆ, ಗೌರಿ - ಗೌರವರ್ಣದವಳೆ, ನಾರಾಯಣಿ - ನಾರಾಯಣನ ಸಹೋದರಿಯೆ, ತೇ - ನಿನಗೆ, ನಮಃ - ನಮಸ್ಕಾರವು, ಅಸ್ತು ....ಆಗಲಿ.

## ಸುಬ್ರಹ್ಮಣ್ಯಪ್ರಾರ್ಥನೆ

**ದೇವಸೇನಾಪತೇ ದೇವ ತಾರಕಾಸುರಮರ್ದನ ।**
**ಶ್ರೀಕಾರ್ತಿಕೇಯ ವಲ್ಲೀಶ ಸುಬ್ರಹ್ಮಣ್ಯ ನಮೋಽಸ್ತು ತೇ ॥ ೧೮ ॥**

**ಅರ್ಥ** : ದೇವಸೇನಾಪತೇ - ದೇವತೆಗಳ ಸೈನ್ಯಕ್ಕೆ ಒಡೆಯನೆ, ತಾರಕಾಸುರಮರ್ದನ - ತಾರಕನೆಂಬ ರಾಕ್ಷಸನನ್ನು ಕೊಂದಾತನೆ, ಶ್ರೀಕಾರ್ತಿಕೇಯ - ಕೃತ್ತಿಕಾದೇವತೆಗಳ ಪುತ್ರನೆ, ವಲ್ಲೀಶ - ವಲ್ಲೀದೇವಿಯ ಪತಿಯೆ, ಸುಬ್ರಹ್ಮಣ್ಯ - ಸುಬ್ರಹ್ಮಣ್ಯನೆ, ದೇವ - ಎಲೈ ಸ್ವಾಮಿಯೆ, ತೇ - ನಿನಗೆ, ನಮೋಽಸ್ತು ನಮಸ್ಕಾರವು.

## ವಿಷ್ಣುಪ್ರಾರ್ಥನೆ

**ನಮಃ ಸಮಸ್ತಭೂತಾನಾಮಾದಿಭೂತಾಯ ಭೂಭೃತೇ ।**
**ಅನೇಕರೂಪರೂಪಾಯ ವಿಷ್ಣವೇ ಸರ್ವಜಿಷ್ಣವೇ ॥ ೧೯ ॥**

**ಅರ್ಥ** : ಸಮಸ್ತಭೂತಾನಾಂ - ಎಲ್ಲಾ ಪ್ರಾಣಿಗಳಿಗೂ, ಆದಿಭೂತಾಯ - ಮೊದಲನೆಯವನಾದ, ಭೂಭೃತೇ - ಭೂಮಿಯನ್ನು ಧರಿಸಿರುವ, ಅನೇಕ ರೂಪರೂಪಾಯ - ನಾನಾರೂಪಗಳುಳ್ಳವನಾದ, ಸರ್ವಜಿಷ್ಣವೇ - ಎಲ್ಲವನ್ನೂ ಜಯಿಸಿರುವ, ವಿಷ್ಣವೇ - ವಿಷ್ಣುವಿಗೆ, ನಮಃ - ನಮಸ್ಕಾರವು.

**ಶಾಂತಾಕಾರಂ ಭುಜಗಶಯನಂ ಪದ್ಮನಾಭಂ ಸುರೇಶಂ**
**ವಿಶ್ವಾಧಾರಂ ಗಗನಸದೃಶಂ ಮೇಘವರ್ಣಂ ಶುಭಾಂಗಮ್ ।**
**ಲಕ್ಷ್ಮೀಕಾಂತಂ ಕಮಲನಯನಂ ಯೋಗಿಹೃದ್ಧ್ಯಾನಗಮ್ಯಂ**
**ವಂದೇ ವಿಷ್ಣುಂ ಭವಭಯಹರಂ ಸರ್ವಲೋಕೈಕನಾಥಮ್ ॥ ೨೦ ॥**

**ಅರ್ಥ** : ಶಾಂತಾಕಾರಂ - ಶಾಂತವಾದ ಸ್ವರೂಪವುಳ್ಳ, ಭುಜಗಶಯನಂ - ಹಾವಿನ (ಶೇಷನ) ಮೇಲೆ ಮಲಗಿರುವ, ಪದ್ಮನಾಭಂ - ಹೊಕ್ಕುಳಲ್ಲಿ ತಾವರೆಯುಳ್ಳ, ಸುರೇಶಂ - ದೇವತೆಗಳಿಗೆ ಒಡೆಯನಾದ, ವಿಶ್ವಾಧಾರಂ - ಜಗತ್ತಿಗೆ ಆಧಾರನಾದ, ಗಗನಸದೃಶಂ - ಆಕಾಶಕ್ಕೆ ಸಮಾನನಾದ, ಮೇಘವರ್ಣಂ - ಮೋಡದಂತೆ ಕಪ್ಪಾದ ಕಾಂತಿಯುಳ್ಳ, ಶುಭಾಂಗಮ್ - ಮಂಗಳಕರವಾದ

ಶರೀರವುಳ್ಳ, ಲಕ್ಷ್ಮೀಕಾಂತಂ -ಲಕ್ಷ್ಮಿಯ ಪತಿಯಾದ, ಕಮಲನಯನಂ - ಕಮಲದಂತೆ ಕಣ್ಣುಳ್ಳ, ಯೋಗಿಹೃದ್ಧ್ಯಾನಗಮ್ಯಂ - ಯೋಗಿಗಳಿಗೆ ಹೃದಯದಲ್ಲಿ ಧ್ಯಾನಕ್ಕೆ ಸಿಗುವ, ಭವಭಯಹರಂ - ಸಂಸಾರಭಯವನ್ನು ಪರಿಹರಿಸುವ, ಸರ್ವಲೋಕೈಕನಾಥಮ್ - ಎಲ್ಲಾ ಲೋಕಕ್ಕೂ ಒಬ್ಬನೇ ಒಡೆಯನಾದ, ವಿಷ್ಣುಂ - ಶ್ರೀಮಹಾವಿಷ್ಣುವನ್ನು, ವಂದೇ - ನಮಸ್ಕರಿಸುವೆನು.

## ಮಹಾಲಕ್ಷ್ಮೀಪ್ರಾರ್ಥನೆ

**ನಮಸ್ತೇಽಸ್ತು ಮಹಾಮಾಯೇ ಶ್ರೀಪೀಠೇ ಸುರಪೂಜಿತೇ ।**
**ಶಂಖಚಕ್ರಗದಾಹಸ್ತೇ ಮಹಾಲಕ್ಷ್ಮಿ ನಮೋಽಸ್ತು ತೇ ॥ ೨೧ ॥**

**ಅರ್ಥ** : ಮಹಾಮಾಯೆ - ಮಹಾಮಾಯಾಸ್ವರೂಪಿಣಿಯೆ, ಶ್ರೀಪೀಠೇ - ಶ್ರೀಚಕ್ರಪೀಠವುಳ್ಳವಳೆ, ಸುರಪೂಜಿತೇ - ದೇವತೆಗಳಿಂದ ಪೂಜಿಸಲ್ಪಟ್ಟವಳೆ, ಶಂಖಚಕ್ರಗದಾಹಸ್ತೇ - ಕೈಗಳಲ್ಲಿ ಶಂಖಚಕ್ರಗದೆಗಳನ್ನು ಧರಿಸಿದವಳೆ, ಮಹಾಲಕ್ಷ್ಮಿ - ಮಹಾಲಕ್ಷ್ಮಿಯೆ, ತೇ -ನಿನಗೆ, ನಮೋಽಸ್ತು - ನಮಸ್ಕಾರವು.

**ಕರದ್ವಯೇನ ಕಮಲೇ ಧಾರಯನ್ತೀಂ ಸ್ವಲೀಲಯಾ ।**
**ಹಾರನೂಪುರಸಂಯುಕ್ತಾಂ ಲಕ್ಷ್ಮೀದೇವೀಂ ನಮಾಮ್ಯಹಮ್ ॥ ೨೨ ॥**

**ಅರ್ಥ** : ಕರದ್ವಯೇನ - ಎರಡು ಕೈಗಳಿಂದಲೂ, ಕಮಲೇ - ಎರಡು ತಾವರೆಗಳನ್ನು, ಸ್ವಲೀಲಯಾ - ತನ್ನ ಆಟಕ್ಕಾಗಿ, ಧಾರಯಂತೀಂ - ಹಿಡಿದುಕೊಂಡಿರುವ, ಹಾರ.....ಸಂಯುಕ್ತಾಂ - ಕತ್ತಿನಹಾರ, ಕಾಲುಗೆಜ್ಜೆಗಳಿಂದ ಕೂಡಿರುವ, ಲಕ್ಷ್ಮೀದೇವೀಂ - ಲಕ್ಷ್ಮೀದೇವಿಯನ್ನು, ಅಹಂ - ನಾನು, ನಮಾಮಿ - ನಮಸ್ಕರಿಸುವೆನು.

## ಭೂಮಿದೇವೀಪ್ರಾರ್ಥನೆ

**ಪೃಥ್ವಿ ತ್ವಯಾ ಧೃತಾ ಲೋಕಾಃ ದೇವಿ ತ್ವಂ ವಿಷ್ಣುನಾ ಧೃತಾ ।**
**ತ್ವಂ ಚ ಧಾರಯ ಮಾಂ ದೇವಿ ವಿಷ್ಣುಪತ್ನಿ ನಮೋಽಸ್ತು ತೇ ॥ ೨೩ ॥**

**ಅರ್ಥ** : ಪೃಥ್ವಿ - ಎಲೈ ಭೂಮಿಯೆ, ತ್ವಯಾ - ನಿನ್ನಿಂದ, ಲೋಕಾಃ - ಲೋಕಗಳು, ಧೃತಾಃ - ಧರಿಸಲ್ಪಟ್ಟಿವೆ, ದೇವಿ - ಎಲೈ ದೇವಿಯೆ, ತ್ವಂ- ನೀನು,

ವಿಷ್ಣುನಾ - ವಿಷ್ಣುವಿನಿಂದ, ಧೃತಾ - ಎತ್ತಿ ಧರಿಸಲ್ಪಟ್ಟಿರುವೆ, ತ್ವಂ - ನೀನು, ಮಾಂ ಚ - ನನ್ನನ್ನು ಕೂಡ, ಧಾರಯ - ಎತ್ತಿಕೊ, ವಿಷ್ಣುಪತ್ನಿ - ವಿಷ್ಣುವಿನ ಹೆಂಡತಿಯೆ, ತೇ - ನಿನಗೆ, ನಮೋಽಸ್ತು - ನಮಸ್ಕಾರವು.

## ಗರುಡಪ್ರಾರ್ಥನೆ

**ವೈನತೇಯ ನಮಸ್ತುಭ್ಯಂ ಛಂದೋಮಯ ಮಹಾಬಲ ।**
**ಪಕ್ಷಿರಾಜ ಖಗಶ್ರೇಷ್ಠ ವಿಷ್ಣುಭಕ್ತಶಿರೋಮಣೇ ॥ ೨೪ ॥**

**ಅರ್ಥ :** ವೈನತೇಯ - ವಿನತೆಯ ಪುತ್ರನೆ, ಛಂದೋಮಯ - ವೇದ ಸ್ವರೂಪನೆ, ಮಹಾಬಲ - ತುಂಬ ಬಲಶಾಲಿಯೆ, ಪಕ್ಷಿ ರಾಜ -ಪಕ್ಷಿಗಳ ಒಡೆಯನೆ ಖಗಶ್ರೇಷ್ಠ - ಹಕ್ಕಿಗಳಲ್ಲಿ ಉತ್ತಮನೆ, ವಿಷ್ಣುಭಕ್ತಶಿರೋಮಣೇ - ವಿಷ್ಣುಭಕ್ತರಲ್ಲಿ ಮುಖ್ಯನಾದವನೆ, ತುಭ್ಯಂ - ನಿನಗೆ, ನಮಃ - ನಮಸ್ಕಾರವು.

**ಕುಂಕುಮಾಂಕಿತವರ್ಣಾಯ ಕುಂದೇಂದುಧವಳಾಯ ಚ ।**
**ವಿಷ್ಣುವಾಹ ನಮಸ್ತುಭ್ಯಂ ಪಕ್ಷಿರಾಜಾಯ ತೇ ನಮಃ ॥ ೨೫ ॥**

**ಅರ್ಥ :** ಕುಂಕುಮಾಂಕಿತವರ್ಣಾಯ - ಕುಂಕುಮದಂತೆ ಅಲಂಕರಿಸಿದ ಕೆಂಪು ಬಣ್ಣವುಳ್ಳ, ಚ - ಮತ್ತು, ಕುಂದೇಂದುಧವಳಾಯ - ಮಲ್ಲಿಗೆ, ಚಂದ್ರ - ಇವರಂತೆ ಬಿಳುಪಾದ ಕಾಂತಿಯುಳ್ಳ, ವಿಷ್ಣುವಾಹ - ವಿಷ್ಣುವಿನ ವಾಹನನಾದವನೆ, ತುಭ್ಯಂ - ನಿನಗೆ, ನಮಃ - ನಮಸ್ಕಾರವು, ಪಕ್ಷಿರಾಜಾಯ - ಹಕ್ಕಿಗಳಿಗೆ ರಾಜನಾದ, ತೇ - ನಿನಗೆ, ನಮಃ - ನಮಸ್ಕಾರವು.

## ದಶಾವತಾರಸ್ತುತಿ

**ಮತ್ಸ್ಯಃ ಕೂರ್ಮೋ ವರಾಹಶ್ಚ ನಾರಸಿಂಹಶ್ಚ ವಾಮನಃ ।**
**ರಾಮೋ ರಾಮಶ್ಚ ಕೃಷ್ಣಶ್ಚ ಬುದ್ಧಃ ಕಲ್ಕಿಶ್ಚ ವೈ ನಮಃ ॥ ೨೬ ॥**

**ಅರ್ಥ :** ಮತ್ಸ್ಯಃ - ಮೀನಿನ ಅವತಾರನಾದ, ಕೂರ್ಮಃ - ಆಮೆಯ ಅವತಾರನಾದ, ವರಾಹಶ್ಚ - ಮತ್ತು ಹಂದಿಯ ಅವತಾರನಾದ, ನಾರಸಿಂಹಶ್ಚ - ನರಮೃಗಾವತಾರಿಯಾದ, ವಾಮನಃ-ವಾಮನಾವತಾರಿಯಾದ, ರಾಮಃ - ಪರಶುರಾಮಾವತಾರನಾದ, ರಾಮಶ್ಚ - ಮತ್ತು ಶ್ರೀರಾಮಾವತಾರನಾದ,

ಕೃಷ್ಣಶ್ಚ - ಮತ್ತು ಕೃಷ್ಣಾವತಾರನಾದ ಬುದ್ಧಃ - ಬುದ್ಧನ ಅವತಾರನಾದ, ಕಲ್ಕಿಃ - ಕಲ್ಕಿಯ ಅವತಾರನಾದ, ವೈ - ಪ್ರಸಿದ್ಧನಾದ ಆ ಮಹಾವಿಷ್ಣುವಿಗೆ, ನಮಃ - ನಮಸ್ಕಾರವು.

**ತ್ವಮೇವ ಮಾತಾ ಚ ಪಿತಾ ತ್ವಮೇವ**
**ತ್ವಮೇವ ಬಂಧುಶ್ಚ ಸಖಾ ತ್ವಮೇವ ।**
**ತ್ವಮೇವ ವಿದ್ಯಾ ದ್ರವಿಣಂ ತ್ವಮೇವ**
**ತ್ವಮೇವ ಸರ್ವಂ ಮಮ ದೇವ ದೇವ ॥ ೨೭ ॥**

**ಅರ್ಥ :** ತ್ವಮೇವ - ನೀನೇ, ಮಾತಾ - ತಾಯಿಯು, ಪಿತಾ ಚ - ತಂದೆಯೂ, ತ್ವಮೇವ - ನೀನೇ. ಬಂಧುಃ - ಬಂಧುವು, ತ್ವಮೇವ - ನೀನೇ. ಸಖಾ - ಸ್ನೇಹಿತನೂ, ತ್ವಮೇವ - ನೀನೇ. ವಿದ್ಯಾ - ವಿದ್ಯೆಯು, ದ್ರವಿಣಂ - ಹಣವು, ತ್ವಮೇವ - ನೀನೇ. ದೇವದೇವ - ಎಲ್ಲೈ ದೇವದೇವನೆ, ಮಮ - ನನಗೆ, ತ್ವಮೇವ -ನೀನೇ, ಸರ್ವಂ - ಎಲ್ಲವೂ ಆಗಿದ್ದೀಯೆ.

## ನರಸಿಂಹಸ್ತುತಿ

**ಪ್ರಹ್ಲಾದವರದಃ ಶ್ರೀಮಾನ್ ಶಂಖಚಕ್ರಗದಾಧರಃ ।**
**ನರಕಂಠೀರವಾಕಾರಃ ನಾರಸಿಂಹೋ ಮುದೇಽಸ್ತು ನಃ ॥ ೨೮ ॥**

**ಅರ್ಥ :** ಪ್ರಹ್ಲಾದವರದಃ - ಪ್ರಹ್ಲಾದನಿಗೆ ವರವನ್ನು ಕೊಟ್ಟ, ಶ್ರೀಮಾನ್ - ಲಕ್ಷ್ಮೀಸಮೇತನಾದ, ಶಂಖಚಕ್ರಗದಾಧರಃ - ಶಂಖಚಕ್ರಗದೆಗಳನ್ನು ಧರಿಸಿದ, ನರಕಂಠೀರವಾಕಾರಃ - ಮನುಷ್ಯ ಮತ್ತು ಸಿಂಹರೂಪಿಯಾದ, ನಾರಸಿಂಹಃ - ನರಸಿಂಹಸ್ವಾಮಿಯು, ನಃ - ನಮ್ಮಗಳಿಗೆ, ಮುದೇ - ಆನಂದಕ್ಕೆ ಅಸ್ತು - ಕಾರಣನಾಗಲಿ.

## ಶ್ರೀರಾಮಸ್ತುತಿ

**ಶ್ರೀರಾಮಚಂದ್ರಃ ಶ್ರಿತಪಾರಿಜಾತಃ**
**ಸಮಸ್ತಕಲ್ಯಾಣಗುಣಾಭಿರಾಮಃ ।**
**ಸೀತಾಮುಖಾಂಭೋರುಹಚಂಚರೀಕಃ**
**ನಿರನ್ತರಂ ಮಂಗಳಮಾತನೋತು ॥ ೨೯ ॥**

**ಅರ್ಥ** : ಶ್ರಿತಪಾರಿಜಾತಃ - ಆಶ್ರಯಿಸಿದವರಿಗೆ ಪಾರಿಜಾತಮರದಂತಿರುವನಾದ, ಸಮಸ್ತಕಲ್ಯಾಣಗುಣಾಭಿರಾಮಃ - ಎಲ್ಲಾ ಕಲ್ಯಾಣಗುಣಗಳಿಂದ ಅಲಂಕೃತನಾದ, ಸೀತಾಮುಖಾಂಭೋರುಹಚಂಚರೀಕಃ - ಸೀತಾದೇವಿಯ ಮುಖವೆಂಬ ಕಮಲಕ್ಕೆ ದುಂಬಿಯಂತಿರುವ, ಶ್ರೀರಾಮಚಂದ್ರಃ - ಶ್ರೀರಾಮಚಂದ್ರನು, ನಿರನ್ತರಂ - ಯಾವಾಗಲೂ, ಮಂಗಳಂ - ಮಂಗಳವನ್ನು, ಆತನೋತು - ವೃದ್ಧಿಗೊಳಿಸಲಿ.

**ಮಾತಾ ರಾಮೋ ಮತ್ಪಿತಾ ರಾಮಚಂದ್ರೋ**
**ಭ್ರಾತಾ ರಾಮೋ ಮತ್ಸಖಾ ರಾಘವೇಶಃ ।**
**ಸರ್ವಸ್ವಂ ಮೇ ರಾಮಚಂದ್ರೋ ದಯಾಳುಃ**
**ನಾನ್ಯಂ ದೈವಂ ನೈವ ಜಾನೇ ನ ಜಾನೇ ॥ ೩೦ ॥**

**ಅರ್ಥ** : ರಾಮಃ - ರಾಮನೇ, ಮಾತಾ - ತಾಯಿಯು, ರಾಮಚಂದ್ರಃ - ರಾಮಚಂದ್ರನು, ಮತ್ಪಿತಾ - ನನ್ನ ತಂದೆಯು, ರಾಮಃ - ರಾಮನು, ಭ್ರಾತಾ - ಸಹೋದರನು. ರಾಘವೇಶಃ - ರಘುವಂಶಕ್ಕೆ ಒಡೆಯನಾದವನು, ಮತ್ಸಖಾ - ನನ್ನ ಸ್ನೇಹಿತನು, ಮೇ - ನನಗೆ, ದಯಾಳುಃ - ಕರುಣಾಶಾಲಿಯಾದ, ರಾಮಚಂದ್ರಃ - ರಾಮಚಂದ್ರನು, ಸರ್ವಸ್ವಂ - ಎಲ್ಲವೂ ಆಗಿರುವನು. ಅನ್ಯಂ - ಬೇರೆಯ, ದೈವಂ - ದೇವರನ್ನು, ನೈವ ಜಾನೇ - ಎಂದೂ ಅರಿಯೆನು. ನ ಜಾನೇ - ತಿಳಿಯೆನು.

**ರಾಮಾಯ ರಾಮಭದ್ರಾಯ ರಾಮಚಂದ್ರಾಯ ವೇಧಸೇ ।**
**ರಘುನಾಥಾಯ ನಾಥಾಯ ಸೀತಾಯಾಃ ಪತಯೇ ನಮಃ ॥ ೩೧ ॥**

**ಅರ್ಥ** : ರಾಮಾಯ - ರಾಮನಿಗೆ, ರಾಮಭದ್ರಾಯ - ಮಂಗಳಕರನಾದ ರಾಮನಿಗೆ, ರಾಮಚಂದ್ರಾಯ - ಚಂದ್ರನಂತೆ ಆಹ್ಲಾದಕರನಾದ ರಾಮನಿಗೆ, ವೇಧಸೇ - ಬ್ರಹ್ಮನೇ ಆಗಿರುವ ರಾಮನಿಗೆ, ರಘುನಾಥಾಯ - ರಘುವಂಶದ ಯಜಮಾನನಾದ ರಾಮನಿಗೆ, ನಾಥಾಯ - ಒಡೆಯನಾದ ರಾಮನಿಗೆ, ಸೀತಾಯಾಃ ಪತಯೇ - ಸೀತೆಯ ಗಂಡನಾದ ರಾಮನಿಗೆ, ನಮಃ - ನಮಸ್ಕಾರವು.

## ಸೀತಾಸ್ತುತಿ

**ಶ್ರೀರಾಮಸೇವಾನಿರತಾ ರಾಮರಾಮೇತಿ ಭಾಷಿಣೀ ।**
**ಮಹಾಪತಿವ್ರತಾ ಸಾಧ್ವೀ ಜಾನಕೀ ಶಂ ತನೋತು ನಃ ॥ ೩೨ ॥**

**ಅರ್ಥ** : ಶ್ರೀರಾಮಸೇವಾನಿರತಾ - ಶ್ರೀರಾಮಸೇವೆಯಲ್ಲಿ ಮಗ್ನಳಾಗಿರುವ, ರಾಮರಾಮೇತಿ ಭಾಷಿಣೀ -ರಾಮರಾಮ ಎಂದು ಉಚ್ಚರಿಸುತ್ತಿರುವ, ಮಹಾಪತಿವ್ರತಾ - ಮಹಾಪತಿವ್ರತೆಯಾದ, ಸಾಧ್ವೀ - ಕುಲಗೌರವಸಂಪನ್ನೆಯಾದ, ಜಾನಕೀ - ಜನಕರಾಜನ ಮಗಳಾದ ಸೀತೆಯು, ನಃ - ನಮ್ಮಗಳಿಗೆ, ಶಂ ತನೋತು - ಸುಖವನ್ನುಂಟುಮಾಡಲಿ.

## ಆಂಜನೇಯಸ್ತುತಿ

**ಆಂಜನೇಯಮತಿಪಾಟಲಾನನಂ**
**ಕಾಂಚನಾದ್ರಿಕಮನೀಯವಿಗ್ರಹಮ್ ।**
**ಪಾರಿಜಾತತರುಮೂಲವಾಸಿನಂ**
**ಭಾವಯಾಮಿ ಪವಮಾನನಂದನಮ್ ॥ ೩೩ ॥**

**ಅರ್ಥ** : ಅತಿಪಾಟಲಾನನಂ - ತುಂಬ ಕೆಂಪುಮುಖವುಳ್ಳ, ಕಾಂಚನಾದ್ರಿಕಮನೀಯವಿಗ್ರಹಮ್ - ಚಿನ್ನದ ಬೆಟ್ಟದಂತೆ ರಮಣೀಯವಾದ ಶರೀರವುಳ್ಳ, ಪಾರಿಜಾತತರುಮೂಲವಾಸಿನಂ - ಪಾರಿಜಾತಮರದ ಬುಡದಲ್ಲಿ ವಾಸಿಸುವ, ಪವಮಾನನಂದನಂ - ವಾಯುದೇವನ ಮಗನಾದ, ಆಂಜನೇಯಂ - ಆಂಜನೇಯನನ್ನು, ಭಾವಯಾಮಿ - ಧ್ಯಾನಿಸುತ್ತೇನೆ.

**ಮನೋಜವಂ ಮಾರುತತುಲ್ಯವೇಗಂ**
**ಜಿತೇಂದ್ರಿಯಂ ಬುದ್ಧಿಮತಾಂ ವರಿಷ್ಠಮ್ ।**
**ವಾತಾತ್ಮಜಂ ವಾನರಯೂಥಮುಖ್ಯಂ**
**ಶ್ರೀರಾಮದೂತಂ ಶಿರಸಾ ನಮಾಮಿ ॥ ೩೪ ॥**

**ಅರ್ಥ** : ಮನೋಜವಂ - ಮನಸ್ಸಿನಂತೆ ವೇಗವುಳ್ಳ, ಮಾರುತತುಲ್ಯವೇಗಂ - ಗಾಳಿಗೆ ಸಮನಾದ ಓಟವುಳ್ಳ, ಜಿತೇಂದ್ರಿಯಂ - ಇಂದ್ರಿಯಗಳನ್ನು

ಗೆದ್ದಿರುವ, ಬುದ್ದಿಮತಾಂ - ಬುದ್ಧಿವಂತರಲ್ಲಿ, ವರಿಷ್ಠಂ - ಅತ್ಯಂತಮಿಗಿಲಾದ, ವಾತಾತ್ಮಜಂ - ವಾಯುವಿನ ಮಗನಾದ, ವಾನರಯೂಥಮುಖ್ಯಂ - ಕಪಿಗಳ ಹಿಂಡಿನ ಮುಖ್ಯಸ್ಥನಾದ, ಶ್ರೀರಾಮದೂತಂ - ಶ್ರೀರಾಮಸೇವಕನಾದ ಹನುಮಂತ ನನ್ನು, ಶಿರಸಾ - ತಲೆಬಾಗಿ, ನಮಾಮಿ - ನಮಸ್ಕರಿಸುವೆನು.

## ಕೃಷ್ಣಸ್ತುತಿ

**ಕೃಷ್ಣಾಯ ವಾಸುದೇವಾಯ ಹರಯೇ ಪರಮಾತ್ಮನೇ ।**
**ಪ್ರಣತಕ್ಲೇಶನಾಶಾಯ ಗೋವಿಂದಾಯ ನಮೋ ನಮಃ ॥ ೩೫ ॥**

**ಅರ್ಥ** : ವಾಸುದೇವಾಯ - ವಸುದೇವನ ಮಗನಾದ, ಹರಯೇ - ಪಾಪ ಪರಿಹಾರಕನಾದ, ಪರಮಾತ್ಮನೇ - ಪರಮಾತ್ಮನಾದ, ಪ್ರಣತಕ್ಲೇಶನಾಶಾಯ - ನಮಸ್ಕರಿಸಿದವರ ಸಂಕಟವನ್ನು ನಾಶಗೊಳಿಸುವ, ಗೋವಿಂದಾಯ - ಗೋವಿಂದ ನಾದ, ಕೃಷ್ಣಾಯ - ಕೃಷ್ಣನಿಗೆ, ನಮೋ ನಮಃ - ನಮಸ್ಕಾರಗಳು.

**ಜಾತಃ ಕಂಸವಧಾರ್ಥಾಯ ಭೂಭಾರೋತ್ತಾರಣಾಯ ಚ ।**
**ಪಾಂಡವಾನಾಂ ಹಿತಾರ್ಥಾಯ ಧರ್ಮಸಂಸ್ಥಾಪನಾಯ ಚ ॥**
**ಕೌರವಾಣಾಂ ವಿನಾಶಾಯ ವಸುದೇವಕುಲೋದ್ಭವಃ ॥ ೩೬ ॥**

**ಅರ್ಥ** : ಕಂಸವಧಾರ್ಥಾಯ - ಕಂಸನ ಸಂಹಾರಕ್ಕಾಗಿ, ಭೂಭಾರೋತ್ತಾರಣಾಯ ಚ - ಭೂಮಿಯ ಭಾರವನ್ನು ಕಡಿಮೆಮಾಡುವದಕ್ಕಾಗಿ, ಪಾಂಡವಾನಾಂ - ಪಾಂಡವರ, ಹಿತಾರ್ಥಾಯ - ಕ್ಷೇಮಕ್ಕಾಗಿ, ಧರ್ಮಸಂಸ್ಥಾಪನಾಯ ಚ - ಮತ್ತು ಧರ್ಮವನ್ನು ನೆಲೆಗೊಳಿಸುವದಕ್ಕಾಗಿ, ಜಾತಃ - ಹುಟ್ಟಿದಂಥ, ಕೌರವಾಣಾಂ - ಕೌರವರ, ವಿನಾಶಾಯ - ನಾಶಕ್ಕಾಗಿ, ವಸುದೇವಕುಲೋದ್ಭವಃ - ವಸುದೇವನ ವಂಶದಲ್ಲಿ ಜನ್ಮವೆತ್ತಿದ ಕೃಷ್ಣನಿಗೆ ನಮಸ್ಕಾರ.

## ಪಾಂಡವರ ಸ್ತುತಿ

**ಧರ್ಮೋ ವಿವರ್ಧತಿ ಯುಧಿಷ್ಠಿರಕೀರ್ತನೇನ**
**ಪಾಪಂ ಪ್ರಣಶ್ಯತಿ ವೃಕೋದರಕೀರ್ತನೇನ ।**

**ಶತ್ರುರ್ವಿನಶ್ಯತಿ ಧನಂಜಯಕೀರ್ತನೇನ**
**ಮಾದ್ರೀಸುತೌ ಕಥಯತಾಂ ನ ಭವನ್ತಿ ರೋಗಾಃ ॥ ೩೭॥**

**ಅರ್ಥ** : ಯುಧಿಷ್ಠಿರಕೀರ್ತನೇನ - ಧರ್ಮರಾಜನನ್ನು ಸ್ತುತಿಸುವದರಿಂದ, ಧರ್ಮಃ - ಧರ್ಮವು, ವಿವರ್ಧತಿ - ಹೆಚ್ಚುತ್ತದೆ, ವೃಕೋದರಕೀರ್ತನೇನ- ಭೀಮನನ್ನು ಸ್ತುತಿಸುವದರಿಂದ, ಪಾಪಂ - ಪಾಪವು, ಪ್ರಣಶ್ಯತಿ - ನಾಶವಾಗುತ್ತದೆ. ಧನಂಜಯಕೀರ್ತನೇನ - ಅರ್ಜುನನನ್ನು ಸ್ತುತಿಸುವದರಿಂದ್ಮ, ಶತ್ರುಃ ವಿನಶ್ಯತಿ - ಶತ್ರುವು ನಾಶವಾಗುತ್ತಾನೆ. ಮಾದ್ರೀಸುತೌ - ಮಾದ್ರೀಪುತ್ರರಾದ ನಕುಲ ಸಹದೇವರನ್ನು, ಕಥಯತಾಂ - ಸ್ತುತಿಸುವವರಿಗೆ, ರೋಗಾಃ - ರೋಗಗಳು, ನ ಭವನ್ತಿ - ಉಂಟಾಗುವದಿಲ್ಲ.

## ಸೂರ್ಯಸ್ತುತಿ

**ಉದಯೇ ಬ್ರಹ್ಮರೂಪೋಽಸೌ ಮಧ್ಯಾಹ್ನೇ ತು ಮಹೇಶ್ವರಃ ।**
**ಅಸ್ತಮಾನೇ ಸ್ವಯಂ ವಿಷ್ಣುಃ ತ್ರಯೀಮೂರ್ತಿರ್ದಿವಾಕರಃ ॥ ೩೮ ॥**

**ಅರ್ಥ** : ಅಸೌ - ಈ ಸೂರ್ಯನು, ಉದಯೇ - ಉದಯಕಾಲದಲ್ಲಿ, ಬ್ರಹ್ಮರೂಪಃ - ಬ್ರಹ್ಮಸ್ವರೂಪನೂ, ಮಧ್ಯಾಹ್ನೇ - ಮಧ್ಯಾಹ್ನಕಾಲದಲ್ಲಿ, ಮಹೇಶ್ವರಃ - ಈಶ್ವರಸ್ವರೂಪನೂ, ಅಸ್ತಮಾನೇ - ಮುಳುಗುವ ಸಮಯದಲ್ಲಿ, ಸ್ವಯಂ - ತಾನೇ, ವಿಷ್ಣುಃ - ವಿಷ್ಣುಸ್ವರೂಪನೂ ಆಗಿರುವನು. ದಿವಾಕರಃ - ಸೂರ್ಯನು, ತ್ರಯೀ ಮೂರ್ತಿಃ - ವೇದಸ್ವರೂಪನು.

## ನವಗ್ರಹಸ್ತುತಿ

**ನಮಃ ಸೂರ್ಯಾಯ ಚಂದ್ರಾಯ ಮಂಗಳಾಯ ಬುಧಾಯ ಚ ।**
**ಗುರುಶುಕ್ರಶನಿಭ್ಯಶ್ಚ ರಾಹವೇ ಕೇತವೇ ನಮಃ ॥ ೩೯ ॥**

**ಅರ್ಥ** : ಸೂರ್ಯಾಯ - ಸೂರ್ಯನಿಗೆ, ಚಂದ್ರಾಯ - ಚಂದ್ರನಿಗೆ, ಮಂಗಳಾಯ - ಅಂಗಾರಕನಿಗೆ, ಬುಧಾಯ ಚ - ಮತ್ತು ಬುಧನಿಗೆ, ಗುರುಶುಕ್ರ ಶನಿಭ್ಯಶ್ಚ - ಗುರು, ಶುಕ್ರ ಮತ್ತು ಶನಿಗಳಿಗೆ, ರಾಹವೇ - ರಾಹುವಿಗೆ, ಕೇತವೇ - ಕೇತುವಿಗೆ, ನಮಃ - ನಮಸ್ಕಾರವು.

## ಶನೈಶ್ಚರ ಸ್ತುತಿ

**ನಮಸ್ತೇ ಕೋಣಸಂಸ್ಥಾಯ ಪಿಂಗಲಾಯ ನಮೋಽಸ್ತು ತೇ ।**
**ನಮಸ್ತೇ ಬಭ್ರುರೂಪಾಯ ಕೃಷ್ಣಾಯ ಚ ನಮೋಽಸ್ತು ತೇ ॥ ೪೦ ॥**

**ಅರ್ಥ** : ಕೋಣಸಂಸ್ಥಾಯ - ಕೋನಮಂಡಲದಲ್ಲಿರುವ, ಪಿಂಗಳಾಯ - ಕಂದುಬಣ್ಣದವನಾದ, ಕೃಷ್ಣಾಯ - ಕಪ್ಪುವರ್ಣದವನಾದ, ಬಭ್ರುರೂಪಾಯ - ವಿಷ್ಣುರೂಪನಾದ, ತೇ - ನಿನಗೆ, ನಮಃ -ನಮಸ್ಕಾರವು, ಅಸ್ತು - ಆಗಲಿ.

## ವೆಂಕಟೇಶ್ವರ ಸ್ತುತಿ

**ಶ್ರಿಯಃ ಕಾಂತಾಯ ಕಲ್ಯಾಣನಿಧಯೇ ನಿಧಯೇಽರ್ಥಿನಾಮ್ ।**
**ಶ್ರೀವೇಂಕಟನಿವಾಸಾಯ ಶ್ರೀನಿವಾಸಾಯ ಮಂಗಳಮ್ ॥ ೪೧ ॥**

**ಅರ್ಥ** : ಶ್ರಿಯಃ ಕಾಂತಾಯ- ಲಕ್ಷ್ಮೀಪತಿಯಾದ, ಕಲ್ಯಾಣನಿಧಯೇ - ಮಂಗಳನಿಧಿಯಾದ, ಅರ್ಥಿನಾಂ - ಬೇಡುವವರಿಗೆ, ನಿಧಯೇ - ಭಂಡಾರವಾಗಿರುವ, ಶ್ರೀವೇಂಕಟನಿವಾಸಾಯ - ವೆಂಕಟಾಚಲದಲ್ಲಿ ವಾಸವಾಗಿರುವ, ಶ್ರೀನಿವಾಸಾಯ - ಶ್ರೀನಿವಾಸನಿಗೆ, ಮಂಗಳಮ್ - ಮಂಗಳವು.

## ಭಾಗವತರ ಸ್ತುತಿ

**ಪ್ರಹ್ಲಾದನಾರದಪರಾಶರಪುಂಡರೀಕ -**
**ವ್ಯಾಸಾಂಬರೀಷಶುಕಶೌನಕಭೀಷ್ಮದಾಲ್ಭ್ಯಾನ್ ।**
**ರುಕ್ಮಾಂಗದಾರ್ಜುನವಸಿಷ್ಠವಿಭೀಷಣಾದೀನ್**
**ಪುಣ್ಯಾನಿಮಾನ್ ಪರಮಭಾಗವತಾನ್ ಸ್ಮರಾಮಿ ॥ ೪೨ ॥**

**ಅರ್ಥ** : ಪ್ರಹ್ಲಾದ....ದಾಲ್ಭ್ಯಾನ್, ಪ್ರಹ್ಲಾದ, ನಾರದ, ಪರಾಶರ, ಪುಂಡರೀಕ, ವ್ಯಾಸ, ಅಂಬರೀಷ, ಶುಕ, ಶೌನಕ, ಭೀಷ್ಮ, ದಾಲ್ಭ್ಯ - ಇವರುಗಳನ್ನು, ರುಕ್ಮಾಂಗದಾ .....ವಿಭೀಷಣಾದೀನ್ - ರುಕ್ಮಾಂಗದ, ಅರ್ಜುನ, ವಸಿಷ್ಠ, ವಿಭೀಷಣನೇ ಮೊದಲಾದ, ಪುಣ್ಯಾನ್ - ಪುಣ್ಯವಂತರಾದ, ಇಮಾನ್ - ಈ, ಪರಮಭಾಗವತಾನ್ - ಪರಮಭಾಗವತೋತ್ತಮರನ್ನು, ಸ್ಮರಾಮಿ - ನೆನೆಯುತ್ತೇನೆ.

## ಸಪ್ತರ್ಷಿಸ್ತುತಿ

**ಗೌತಮೋಽತ್ರಿರ್ಭರದ್ವಾಜಃ ವಿಶ್ವಾಮಿತ್ರಶ್ಚ ಕಾಶ್ಯಪಃ ।**
**ಜಮದಗ್ನಿರ್ವಸಿಷ್ಠಶ್ಚ ಸಪ್ತೈತೇ ಋಷಯಃ ಸ್ಮೃತಾಃ ॥ ೪೩ ॥**

**ಅರ್ಥ** : ಗೌತಮಃ - ಗೌತಮನು, ಅತ್ರಿಃ - ಅತ್ರಿಯು, ಭರದ್ವಾಜಃ - ಭರದ್ವಾಜನು, ವಿಶ್ವಾಮಿತ್ರಶ್ಚ - ಮತ್ತು ವಿಶ್ವಾಮಿತ್ರನು, ಕಾಶ್ಯಪಃ - ಕಾಶ್ಯಪನು, ಜಮದಗ್ನಿಃ - ಜಮದಗ್ನಿಯು, ವಸಿಷ್ಠಶ್ಚ - ಮತ್ತು ವಸಿಷ್ಠನು, ಏತೇ - ಈ, ಸಪ್ತ - ಏಳುಮಂದಿಯು, ಋಷಯಃ - ಋಷಿಗಳೆಂದು, ಸ್ಮೃತಾಃ - ಸ್ಮರಿಸಲ್ಪಟ್ಟಿದ್ದಾರೆ.

## ಚಿರಂಜೀವಿಸ್ತುತಿ (ಎಣ್ಣೆ ಸ್ನಾನಮಾಡುವಾಗ)

**ಅಶ್ವತ್ಥಾಮಾ ಬಲಿರ್ವ್ಯಾಸಃ ಹನೂಮಾಂಶ್ಚ ವಿಭೀಷಣಃ**
**ಕೃಪಃ ಪರಶುರಾಮಶ್ಚ ಸಪ್ತೈತೇ ಚಿರಜೀವಿನಃ ॥ ೪೪ ॥**

**ಅರ್ಥ** : ಅಶ್ವತ್ಥಾಮಾ - ಅಶ್ವತ್ಥಾಮನು, ಬಲಿಃ - ಬಲಿಚಕ್ರವರ್ತಿಯು, ವ್ಯಾಸಃ - ವ್ಯಾಸಮಹರ್ಷಿಯು, ಹನೂಮಾನ್ - ಹನುಮಂತನು, ವಿಭೀಷಣಃ - ವಿಭೀಷಣನು, ಕೃಪಃ - ಕೃಪನು, ಪರಶುರಾಮಶ್ಚ - ಮತ್ತು ಪರಶುರಾಮನು, ಏತೇ - ಈ, ಸಪ್ತ - ಏಳುಜನರು, ಚಿರಜೀವಿನಃ - ಚಿರಂಜೀವಿಗಳು.

## ಪತಿವ್ರತಾಸ್ತುತಿ

**ಅಹಲ್ಯಾ ದ್ರೌಪದೀ ಸೀತಾ ತಾರಾ ಮಂಡೋದರೀ ತಥಾ ।**
**ಪಂಚಕಂ ನಾ ಸ್ಮರೇನ್ನಿತ್ಯಂ ಮಹಾಪಾತಕನಾಶನಮ್ ॥ ೪೫ ॥**

**ಅರ್ಥ** : ಅಹಲ್ಯಾ - ಅಹಲ್ಯೆಯು, ದ್ರೌಪದೀ - ದ್ರೌಪದಿಯು, ಸೀತಾ - ಸೀತೆಯು, ತಾರಾ - ತಾರಾದೇವಿಯು, ತಥಾ - ಹಾಗೆಯೇ, ಮಂಡೋದರೀ - ಮಂಡೋದರೀಯು (ಈ), ಪಂಚಕಂ - ಐದು ಸ್ತ್ರೀಯರನ್ನು, ನಾ-ಮನುಷ್ಯನು, ನಿತ್ಯಂ - ಯಾವಾಗಲೂ, ಸ್ಮರೇತ್ - ಸ್ಮರಿಸಬೇಕು. ಮಹಾಪಾತಕನಾಶನಮ್ - ಇದರಿಂದ, ಮಹಾಪಾಪಗಳು ಪರಿಹಾರವಾಗುವವು.

## ದೀಪಸ್ತುತಿ

**ದೀಪಂ ಜ್ಯೋತಿಃ ಪರಂ ಬ್ರಹ್ಮ ದೀಪಂ ಜ್ಯೋತಿಃ ಜನಾರ್ದನಃ ।**
**ದೀಪೇನ ಹ್ರಿಯತೇ ಪಾಪಂ ಸಂಧ್ಯಾದೀಪ ನಮೋಽಸ್ತು ತೇ ॥ ೪೬ ॥**

**ಅರ್ಥ** : ದೀಪಂ - ದೀಪವು, ಜ್ಯೋತಿಃ - ಬೆಳಕು, ಪರಂ ಬ್ರಹ್ಮ - ಪರಬ್ರಹ್ಮಸ್ವರೂಪವು, ದೀಪಂ ಜ್ಯೋತಿಃ - ಬೆಳಕಾದ ದೀಪವು, ಜನಾರ್ದನಃ - ವಿಷ್ಣುರೂಪವು, ದೀಪೇನ - ದೀಪವನ್ನು ನೋಡುವದರಿಂದ, ಪಾಪಂ - ಪಾಪವು, ಹ್ರಿಯತೇ - ಪರಿಹಾರವಾಗುವದು. ಸಂಧ್ಯಾದೀಪ - ಎಲೈ ಸಂಧ್ಯಾಕಾಲದ ದೀಪದೇವತೆಯೆ, ತೇ - ನಿನಗೆ, ನಮಃ ಅಸ್ತು - ನಮಸ್ಕಾರವು.

## ಅಶ್ವತ್ಥ ಸ್ತುತಿ

**ಮೂಲತೋ ಬ್ರಹ್ಮರೂಪಾಯ ಮಧ್ಯತೋ ವಿಷ್ಣುರೂಪಿಣೇ ।**
**ಅಗ್ರತಃ ಶಿವರೂಪಾಯ ವೃಕ್ಷರಾಜಾಯ ತೇ ನಮಃ ॥ ೪೭ ॥**

**ಅರ್ಥ** : ಮೂಲತಃ - ಬುಡದಲ್ಲಿ, ಬ್ರಹ್ಮರೂಪಾಯ -ಬ್ರಹ್ಮನ ರೂಪವಾಗಿರುವ, ಮಧ್ಯತಃ - ಮಧ್ಯಭಾಗದಲ್ಲಿ, ವಿಷ್ಣುರೂಪಿಣೇ - ವಿಷ್ಣುರೂಪ ವಾದ, ಅಗ್ರತಃ - ತುದಿಯಲ್ಲಿ, ಶಿವರೂಪಾಯ - ಶಿವಸ್ವರೂಪನಾದ, ವೃಕ್ಷರಾಜಾಯ - ಮರಗಳಿಗೆ ಒಡೆಯನಾದ (ಅಶ್ವತ್ಥನೆ), ತೇ - ನಿನಗೆ, ನಮಃ - ನಮಸ್ಕಾರವು.

## ತುಳಸೀಸ್ತುತಿ

**ವೃಂದಾಂ ವೃಂದಾವನೀಂ ವಿಶ್ವಪಾವನೀಂ ವಿಶ್ವಪೂಜಿತಾಮ್ ।**
**ಪುಷ್ಪಸಾರಾಂ ನಂದಿನೀಂ ಚ ತುಲಸೀಂ ಕೃಷ್ಣಜೀವನೀಮ್ ॥ ೪೮ ॥**

**ಅರ್ಥ** : ವೃಂದಾಂ - ವೃಂದಾ ಎಂಬ ಹೆಸರಿನ, ವೃಂದಾವನೀಂ - ವೃಂದಾವನರೂಪಳಾದ, ವಿಶ್ವಪಾವನೀಮ್ - ಜಗತ್ ಪವಿತ್ರಳಾದ, ವಿಶ್ವಪೂಜಿತಾಂ - ಲೋಕಪೂಜ್ಯಳಾದ, ಪುಷ್ಪಸಾರಾಂ - ಹೂವುಗಳ ಸಾರಳಾದ, ನಂದಿನೀಂ ಚ - ಮತ್ತು ಆನಂದಕರಳಾದ, ಕೃಷ್ಣಜೀವನೀಂ - ಕೃಷ್ಣನನ್ನೇ ಪ್ರಾಣವಾಗಿ ಉಳ್ಳ, ತುಲಸೀಂ - ತುಲಸೀದೇವಿಯನ್ನು, (ನಮಾಮಿ - ನಮಸ್ಕರಿಸುತ್ತೇನೆ).

## ಗೋ ಸ್ತುತಿ

**ಗವಾಮಂಗೇಷು ತಿಷ್ಠನ್ತಿ ಭುವನಾನಿ ಚತುರ್ದಶ ।**
**ಗಾವೋ ಹಿ ಭುವನಾಧಾರಾಃ ಗಾವೋ ವಿಶ್ವಸ್ಯ ಮಾತರಃ ॥ ೪೯ ॥**
**ಪ್ರದಕ್ಷಿಣಂ ಕರೋಮಿ ತ್ವಾಂ ಸರ್ವದೇವಸ್ವರೂಪಿಣೀಮ್ ।**
**ಸರ್ವಪಾಪಪ್ರಶಮನೀಂ ಸರ್ವಮಂಗಲದಾಯಿನೀಮ್ ॥ ೫೦ ॥**

**ಅರ್ಥ** : ಗವಾಂ - ಗೋವುಗಳ, ಅಂಗೇಷು - ಶರೀರಾವಯವಗಳಲ್ಲಿ, ಚತುರ್ದಶ - ಹದಿನಾಲ್ಕು, ಭುವನಾನಿ - ಲೋಕಗಳು, ತಿಷ್ಠಂತಿ - ಇದ್ದುಕೊಂಡಿವೆ. ಗಾವೋ ಹಿ - ಗೋವುಗಳೇ, ಭುವನಾಧಾರಾಃ - ಪ್ರಪಂಚಕ್ಕೆ ಆಶ್ರಯವು. ಗಾವಃ - ಗೋವುಗಳು, ವಿಶ್ವಸ್ಯ - ಜಗತ್ತಿಗೆ, ಮಾತರಃ - ತಾಯಂದಿರು.

ಸರ್ವದೇವಸ್ವರೂಪಿಣೀಮ್ - ಎಲ್ಲಾ ದೇವತೆಗಳ ಸ್ವರೂಪಳಾದ, ಸರ್ವಪಾಪಪ್ರಶಮನೀಂ - ಸಕಲಪಾಪಗಳನ್ನೂ ತೊಡೆದುಹಾಕುವ, ಸರ್ವಮಂಗಲದಾಯಿನೀಂ - ಸಕಲಸನ್ಮಂಗಳವನ್ನುಂಟುಮಾಡುವ, ತ್ವಾಂ - ನಿನ್ನನ್ನು, ಪ್ರದಕ್ಷಿಣಂ ಕರೋಮಿ - ಪ್ರದಕ್ಷಿಣೆಮಾಡುತ್ತೇನೆ.

## ಮಹಾನದೀಸ್ತುತಿ

**ಗಂಗೇ ಚ ಯಮುನೇ ಚೈವ ಗೋದಾವರಿ ಸರಸ್ವತಿ ।**
**ನರ್ಮದೇ ಸಿಂಧು ಕಾವೇರಿ ಪಾಪಂ ಹರ ಸದಾ ಮಮ ॥ ೫೧ ॥**

ಅರ್ಥ : ಗಂಗೇ - ಎಲೈ ಗಂಗೆಯೆ, ಯಮುನೇ - ಯಮುನೆಯೆ, ಗೋದಾವರಿ - ಗೋದಾವರಿಯೆ, ಸರಸ್ವತಿ - ಸರಸ್ವತಿಯೆ, ನರ್ಮದೇ - ನರ್ಮದೆಯೆ, ಸಿಂದು - ಸಿಂಧೂಮಾತೆಯೆ, ಕಾವೇರಿ - ಕಾವೇರಿಯೆ, ಸದಾ - ಯಾವಾಗಲೂ, ಮಮ - ನನ್ನ, ಪಾಪಂ - ಪಾಪವನ್ನು, ಹರ - ನಾಶಪಡಿಸು.

## ಧನ್ವಂತರಿಸ್ತುತಿ

**ನಮಾಮಿ ಧನ್ವಂತರಿಮಾದಿದೇವಂ**
**ಸುರಾಸುರೈರ್ವಂದಿತಪಾದಪದ್ಮಮ್ ।**

**ಲೋಕೇ ಜರಾರುಗ್ಭಯಮೃತ್ಯುನಾಶಂ**
**ದಾತಾರಮೀಶಂ ವಿವಿಧೌಷಧೀನಾಮ್ ॥ ೫೨ ॥**

**ಅರ್ಥ** : ಆದಿದೇವಂ - ಆದಿದೇವನಾದ, ಸುರಾಸುರೈಃ - ದೇವದಾನವರಿಂದ, ವಂದಿತಪಾದಪದ್ಮಂ - ನಮಸ್ಕರಿಸಲ್ಪಟ್ಟ ಪಾದಕಮಲವುಳ್ಳ, ಲೋಕೇ - ಜಗತ್ತಿನಲ್ಲಿ, ಜರಾರುಗ್ಭಯಮೃತ್ಯುನಾಶಂ - ಮುಪ್ಪು, ರೋಗ, ಭಯ, ಮರಣಗಳನ್ನು ನಾಶಮಾಡುವ, ವಿವಿಧೌಷಧೀನಾಂ - ನಾನಾವಿಧವಾದ ಔಷಧಿಗಳನ್ನು, ದಾತಾರಂ - ಕೊಡುವವನಾದ, ಧನ್ವಂತರಿಂ - ಧನ್ವಂತರಿಯನ್ನು, ನಮಾಮಿ - ನಮಸ್ಕರಿಸುತ್ತೇನೆ.

## ಸತ್ಯನಾರಾಯಣಸ್ತುತಿ

**ಸತ್ಯನಾರಾಯಣಂ ದೇವಂ ವನ್ದೇಽಹಂ ಕಾಮದಂ ಪ್ರಭುಮ್ ।**
**ಲೀಲಯಾ ವಿತತಂ ವಿಶ್ವಂ ಯೇನ ತಸ್ಮೈ ನಮೋ ನಮಃ ॥ ೫೩ ॥**

**ಅರ್ಥ** : ದೇವಂ - ಪ್ರಕಾಶರೂಪನಾದ, ಕಾಮದಂ - ಇಷ್ಟಾರ್ಥಗಳನ್ನು ಕೊಡುವ, ಪ್ರಭುಂ - ಒಡೆಯನಾದ, ಸತ್ಯನಾರಾಯಣಂ - ಸತ್ಯನಾರಾಯಣನನ್ನು, ಅಹಂ - ನಾನು, ವಂದೇ - ನಮಸ್ಕರಿಸುತ್ತೇನೆ. ಯೇನ - ಯಾವನಿಂದ, ವಿಶ್ವಂ - ಈ ಪ್ರಪಂಚವು, ಲೀಲಯಾ - ಕ್ರೀಡಾರ್ಥವಾಗಿ, ವಿತತಂ - ಹರಡಲ್ಪಟ್ಟತೋ (ಉಂಟುಮಾಡಲ್ಪಟ್ಟಿತೋ), ತಸ್ಮೈ - ಅವನಿಗೆ, ನಮೋ ನಮಃ - ನಮಸ್ಕಾರವು.

## ಮಾರ್ಕಂಡೇಯಸ್ತುತಿ

**ಮಾರ್ಕಂಡೇಯ ಮಹಾಬಾಹೋ ಸಪ್ತಕಲ್ಪಾಂತಜೀವನ ।**
**ಆಯುರಾರೋಗ್ಯಮೈಶ್ವರ್ಯಂ ಆಯುರ್ವೃದ್ಧಿಂ ಚ ದೇಹಿ ಮೇ ॥ ೫೪ ॥**

**ಅರ್ಥ** : ಮಹಾಬಾಹೋ - ಮಹಾಬಾಹುವಾದ, ಸಪ್ತಕಲ್ಪಾಂತಜೀವನ- ಏಳುಕಲ್ಪಗಳವರೆಗೂ ಜೀವಿಸಿರುವ, ಮಾರ್ಕಂಡೇಯ - ಮಾರ್ಕಂಡೇಯನೆ, ಮೇ - ನನಗೆ, ಆಯು.....ಮೈಶ್ವರ್ಯಂ - ಆಯಸ್ಸು, ಆರೋಗ್ಯ, ಐಶ್ವರ್ಯವನ್ನು, ಆಯುರ್ವೃದ್ಧಿಂ ಚ - ಮತ್ತು ಆಯುಷ್ಯಾಭಿವೃದ್ಧಿಯನ್ನೂ, ದೇಹಿ - ಕೊಡು.

## ಕಾರ್ತವೀರ್ಯಾರ್ಜುನಸ್ತುತಿ

**ಕಾರ್ತವೀರ್ಯಾರ್ಜುನೋ ನಾಮ ರಾಜಾ ಬಾಹುಸಹಸ್ರವಾನ್ ।**
**ತಸ್ಯ ಸ್ಮರಣಮಾತ್ರೇಣ ಹೃತಂ ನಷ್ಟಂ ಚ ಲಭ್ಯತೇ ॥ ೫೫ ॥**

**ಅರ್ಥ :** ಕಾರ್ತವೀರ್ಯಾರ್ಜುನೋ ನಾಮ - ಕಾರ್ತವೀರ್ಯಾರ್ಜುನನೆಂಬ ಹೆಸರಿನ, ಬಾಹುಸಹಸ್ರವಾನ್ - ಸಾವಿರತೋಳುಗಳುಳ್ಳ, ರಾಜಾ - ರಾಜನಿದ್ದನು. ತಸ್ಯ - ಅವನ, ಸ್ಮರಣಮಾತ್ರೇಣ - ನೆನಪಿನ ಮಾತ್ರದಿಂದ, ಹೃತಂ - ಕದಿಯಲ್ಪಟ್ಟದ್ದು, ನಷ್ಟಂ ಚ - ಕೈಬಿಟ್ಟುಹೋದದ್ದು ಸಹ, ಲಭ್ಯತೇ - ದೊರಕುತ್ತದೆ.

## ಅಗ್ನಿದೇವನ ಸ್ತುತಿ

**ಕಾಂಡದ್ವಯೋಪಪಾಧ್ಯಾಯ ಕರ್ಮಬ್ರಹ್ಮಸ್ವರೂಪಿಣೇ ।**
**ಸ್ವರ್ಗಾಪವರ್ಗದಾತ್ರೇ ಚ ಯಜ್ಞೇಶಾಯ ನಮೋ ನಮಃ ॥ ೫೬ ॥**

**ಅರ್ಥ** : ಕಾಂಡದ್ವಯೋಪಪಾಧ್ಯಾಯ - ಕರ್ಮಕಾಂಡ, ಜ್ಞಾನಕಾಂಡಗಳೆರಡರಿಂದಲೂ ಹೊಗಳಲ್ಪಟ್ಟ, ಕರ್ಮಬ್ರಹ್ಮಸ್ವರೂಪಿಣೇ - ಕರ್ಮಬ್ರಹ್ಮಸ್ವರೂಪನಾದ, ಸ್ವರ್ಗಾಪವರ್ಗದಾತ್ರೇ ಚ - ಸ್ವರ್ಗ ಮತ್ತು ಮೋಕ್ಷಗಳನ್ನು ಕೊಡುವ, ಯಜ್ಞೇಶಾಯ - ಯಜ್ಞೇಶ್ವರನಿಗೆ, ನಮೋ ನಮಃ - ನಮಸ್ಕಾರವು.

## ಶಂಕರಾಚಾರ್ಯಸ್ತುತಿ

**ಶ್ರುತಿಸ್ಮೃತಿಪುರಾಣಾನಾಮಾಲಯಂ ಕರುಣಾಲಯಮ್ ।**
**ನಮಾಮಿ ಭಗವತ್ಪಾದಶಂಕರಂ ಲೋಕಶಂಕರಮ್ ॥ ೫೭ ॥**

**ಅರ್ಥ** : ಶ್ರುತಿಸ್ಮೃತಿಪುರಾಣಾನಾಂ - ವೇದಗಳು, ಸ್ಮೃತಿಗಳು, ಪುರಾಣಗಳಿಗೆ, ಆಲಯಂ - ವಾಸಸ್ಥಾನನಾದ, ಕರುಣಾಲಯಂ - ದಯಾನಿಧಿಯಾದ, ಲೋಕಶಂಕರಮ್ - ಲೋಕಕ್ಕೆಲ್ಲ ಸುಖವನ್ನುಂಟುಮಾಡುವ, ಭಗವತ್ಪಾದ ಶಂಕರಂ - ಪೂಜ್ಯರಾದ ಶಂಕರನನ್ನು, ನಮಾಮಿ - ನಮಸ್ಕರಿಸುತ್ತೇನೆ.

**ಶಂಕರಂ ಶಂಕರಾಚಾರ್ಯಂ ಕೇಶವಂ ಬಾದರಾಯಣಮ್ ।**
**ಸೂತ್ರಭಾಷ್ಯಕೃತೌ ವನ್ದೇ ಭಗವನ್ತೌ ಪುನಃ ಪುನಃ ॥ ೫೮ ॥**

**ಅರ್ಥ** : ಸೂತ್ರಭಾಷ್ಯಕೃತೌ - ಬ್ರಹ್ಮಸೂತ್ರಗಳನ್ನೂ ಅವುಗಳ ಭಾಷ್ಯವನ್ನೂ ರಚಿಸಿದ, ಭಗವನ್ತೌ - ಪೂಜ್ಯರಾದ, ಶಂಕರಂ - ಪರಮೇಶ್ವರರೂಪರಾದ, ಶಂಕರಾಚಾರ್ಯಂ - ಶಂಕರಾಚಾರ್ಯರನ್ನೂ, ಕೇಶವಂ - ನಾರಾಯಣ ಸ್ವರೂಪರಾದ, ಬಾದರಾಯಣಮ್ - ಬಾದರಾಯಣರನ್ನೂ, ಪುನಃ ಪುನಃ - ಮತ್ತೆ ಮತ್ತೆ, ವಂದೇ - ನಮಸ್ಕರಿಸುತ್ತೇನೆ.

## ರಾಮಾನುಜಾಚಾರ್ಯರ ಸ್ತುತಿ

**ತಸ್ಮೈ ರಾಮಾನುಜಾರ್ಯಾಯ ನಮಃ ಪರಮಧೀಮತೇ ।**
**ಯಃ ಶ್ರುತಿಸ್ಮೃತಿಸೂತ್ರಾಣಾಮನ್ತರ್ಜ್ವರಮಶೀಶಮತ್ ॥ ೫೯ ॥**

**ಅರ್ಥ** : ಯಃ - ಯಾವನು, ಶ್ರುತಿಸ್ಮೃತಿಸೂತ್ರಾಣಾಂ - ವೇದಸ್ಮೃತಿ ಸೂತ್ರಗಳ, ಅಂತರ್ಜ್ವರಂ ಒಳಗಿನ ಬೇಗೆಯನ್ನು (ಅಪಾರ್ಥಗಳನ್ನು), ಅಶೀಶಮತ್ - ಶಾಂತಗೊಳಿಸಿದನೋ, ಪರಮಧೀಮತೇ - ಅತಿಬುದ್ಧಿವಂತರಾದ, ತಸ್ಮೈ - ಆ ರಾಮಾನುಜಾರ್ಯಾಯ - ರಾಮಾನುಜಾಚಾರ್ಯರಿಗೆ, ನಮಃ ನಮಸ್ಕಾರವು.

## ಮಧ್ವಾಚಾರ್ಯರ ಸ್ತುತಿ

**ಪ್ರಥಮೋ ಹನುಮನ್ನಾಮ ದ್ವಿತೀಯೋ ಭೀಮ ಏವ ಚ ।**
**ಪೂರ್ಣಪ್ರಜ್ಞಸ್ತೃತೀಯಸ್ತು ಭಗವತ್ಕಾರ್ಯಸಾಧಕಃ ॥ ೬೦ ॥**

**ಅರ್ಥ** : ಪ್ರಥಮಃ - ಮೊದಲನೆಯದು, ಹನುಮನ್ನಾಮ - ಹನುಮಂತನೆಂಬ ಹೆಸರು, ದ್ವಿತೀಯಃ - ಎರಡನೆಯದು, ಭೀಮ ಏವ ಚ - ಭೀಮನೆಂಬ ಹೆಸರು. ತೃತೀಯಸ್ತು - ಮೂರನೆಯದಾದರೊ, ಪೂರ್ಣಪ್ರಜ್ಞಃ - ಪೂರ್ಣ ಪ್ರಜ್ಞರೆಂದು ಇರುವದೋ ಅಂಥ, ಭಗವತ್ಕಾರ್ಯಸಾಧಕಃ - ಭಗವಂತನ ಕೆಲಸವನ್ನು ನೆರವೇರಿಸುವ (ಮಧ್ವಾಚಾರ್ಯರಿಗೆ ನಮಸ್ಕಾರಗಳು)

## ವಿಖನಸಾಚಾರ್ಯಸ್ತುತಿ

**ನಾರಾಯಣಃ ಪಿತಾ ಯಸ್ಯ ಯಸ್ಯ ಮಾತಾ ಹರಿಪ್ರಿಯಾ ।**
**ಭೃಗ್ವಾದಿಮುನಯಃ ಪುತ್ರಾಃ ತಸ್ಮೈ ಶ್ರೀವಿಖನಸೇ ನಮಃ ॥ ೬೧ ॥**

**ಅರ್ಥ** : ಯಸ್ಯ - ಯಾವನಿಗೆ, ಪಿತಾ - ತಂದೆಯು, ನಾರಾಯಣಃ - ನಾರಾಯಣನೋ, ಹರಿಪ್ರಿಯಾ - ಮಹಾಲಕ್ಷ್ಮಿಯು, ಮಾತಾ - ತಾಯಿಯೋ, ಭೃಗ್ವಾದಿಮುನಯಃ ಭೃಗು ಮುಂತಾದ ಋಷಿಗಳು, ಪುತ್ರಾಃ - ಮಕ್ಕಳೋ, ತಸ್ಮೈ - ಆ, ಶ್ರೀವಿಖನಸೇ - ವಿಖನಸಾಚಾರ್ಯರಿಗೆ, ನಮಃ - ನಮಸ್ಕಾರವು.

## ರಾಘವೇಂದ್ರ ಗುರುಸ್ತುತಿ

**ಪೂಜ್ಯಾಯ ರಾಘವೇಂದ್ರಾಯ ಸತ್ಯಧರ್ಮರತಾಯ ಚ ।**
**ಭಜತಾಂ ಕಲ್ಪವೃಕ್ಷಾಯ ನಮತಾಂ ಕಾಮಧೇನವೇ ॥ ೬೨ ॥**

**ಅರ್ಥ** : ಸತ್ಯಧರ್ಮರತಾಯ - ಸತ್ಯಧರ್ಮನಿರತನಾದ, ಭಜತಾಂ - ಭಜಿಸುವವರಿಗೆ, ಕಲ್ಪವೃಕ್ಷಾಯ - ಕಲ್ಪವೃಕ್ಷದಂತೆ ವರಪ್ರದನಾದ, ನಮತಾಂ - ನಮಸ್ಕರಿಸುವವರಿಗೆ, ಕಾಮಧೇನವೇ - ಕಾಮಧೇನುವಿನಂತೆ ಇರುವ, ಪೂಜ್ಯಾಯ - ಪೂಜ್ಯನಾದ, ರಾಘವೇಂದ್ರಾಯ - ರಾಘವೇಂದ್ರಗುರುವಿಗೆ, ನಮಃ - ನಮಸ್ಕಾರವು.

## ಹಯಗ್ರೀವಸ್ತುತಿ

**ಜ್ಞಾನಾನಂದಮಯಂ ದೇವಂ ನಿರ್ಮಲಸ್ಫಟಿಕಾಕೃತಿಮ್ ।**
**ಆಧಾರಂ ಸರ್ವವಿದ್ಯಾನಾಂ ಹಯಗ್ರೀವಮುಪಾಸ್ಮಹೇ ॥ ೬೩ ॥**

**ಅರ್ಥ** : ಜ್ಞಾನಾನಂದಮಯಂ - ಜ್ಞಾನಾನಂದಸ್ವರೂಪನಾದ, ದೇವಂ - ಪ್ರಕಾಶಸ್ವರೂಪನಾದ, ನಿರ್ಮಲಸ್ಫಟಿಕಾಕೃತಿಮ್ - ಶುಭ್ರವಾದ ಸ್ಫಟಿಕದಂತೆ ಶರೀರವುಳ್ಳ, ಸರ್ವವಿದ್ಯಾನಾಂ - ಎಲ್ಲಾ ವಿದ್ಯೆಗಳಿಗೂ, ಆಧಾರಂ - ಆಶ್ರಯನಾದ, ಹಯಗ್ರೀವಂ - ಹಯಗ್ರೀವನನ್ನು, ಉಪಾಸ್ಮಹೇ - ಧ್ಯಾನಿಸುತ್ತೇವೆ.

## ತ್ಯಾಗರಾಜಸ್ತುತಿ

**ಸಂಗೀತಶಾಸ್ತ್ರಲೋಲಾಯ ರಾಮಭಕ್ತಿರತಾಯ ಚ**
**ಜ್ಞಾನವೈರಾಗ್ಯನಿಧಯೇ ತ್ಯಾಗರಾಜಾಯ ಮಂಗಳಮ್ ॥ ೬೪ ॥**

**ಅರ್ಥ** : ಸಂಗೀತಶಾಸ್ತ್ರಲೋಲಾಯ - ಸಂಗೀತಶಾಸ್ತ್ರದಲ್ಲಿ ಆನಂದವನ್ನು ಹೊಂದಿರುವ, ರಾಮಭಕ್ತಿರತಾಯ - ಶ್ರೀರಾಮಭಕ್ತಿಸಂಪನ್ನನಾದ, ಜ್ಞಾನವೈರಾಗ್ಯ ನಿಧಯೇ - ಜ್ಞಾನವೈರಾಗ್ಯಗಳಿಂದ ತುಂಬಿರುವ, ತ್ಯಾಗರಾಜಾಯ - ತ್ಯಾಗರಾಜ ನಿಗೆ, ಮಂಗಳಮ್ - ಮಂಗಳವು.

## ಪುರಂದರಸ್ತುತಿ

**ವಿಷ್ಣುಭಕ್ತಿಯುತಂ ಶಾನ್ತಂ ಕೀರ್ತನಾಗ್ರೇಸರಂ ಗುರುಮ್ ।**
**ಪುರಂದರಮಹಂ ವಂದೇ ದಾಸಶ್ರೇಷ್ಠಂ ದಯಾನಿಧಿಮ್ ॥ ೬೫ ॥**

**ಅರ್ಥ** : ವಿಷ್ಣುಭಕ್ತಿಯುತಂ - ವಿಷ್ಣುಭಕ್ತಿಸಂಪನ್ನನಾದ, ಶಾಂತಂ - ಶಾಂತನಾದ, ಕೀರ್ತನಾಗ್ರೇಸರಂ - ಭಗವತ್ಕೀರ್ತನೆಯಲ್ಲಿ ಮುಂದಾಳಾದ, ಗುರುಂ - ಪೂಜ್ಯನಾದ, ದಾಸಶ್ರೇಷ್ಠಂ- ದಾಸರಲ್ಲಿ ಗಣ್ಯನಾದ, ದಯಾನಿಧಿಂ - ಕೃಪಾನಿಧಿ ಯಾದ, ಪುರಂದರಂ - ಪುರಂದರದಾಸರನ್ನು, ಅಹಂ - ನಾನು, ವಂದೇ -ನಮಸ್ಕರಿಸುತ್ತೇನೆ.

## ವಾಲ್ಮೀಕಿ ಸ್ತುತಿ

**ವಾಲ್ಮೀಕೇರ್ಮುನಿಸಿಂಹಸ್ಯ ಕವಿತಾವನಚಾರಿಣಃ ।**
**ಶೃಣ್ವನ್ ರಾಮಕಥಾನಾದಂ ಕೋ ನ ಯಾತಿ ಪರಾಂ ಗತಿಮ್ ॥ ೬೬ ॥**

**ಅರ್ಥ** : ಕವಿತಾವನಚಾರಿಣಃ - ಕಾವ್ಯವೆಂಬ ಅರಣ್ಯದಲ್ಲಿ ಸಂಚರಿಸುತ್ತಿ ರುವ, ಮುನಿಸಿಂಹಸ್ಯ - ಋಷಿಶ್ರೇಷ್ಠನಾದ, ವಾಲ್ಮೀಕೇಃ - ವಾಲ್ಮೀಕಿಯ, ರಾಮಕಥಾನಾದಂ - ರಾಮಕಥೆಯ ಧ್ವನಿಯನ್ನು, ಶೃಣ್ವನ್ - ಕೇಳುತ್ತಿರಲು, ಕಃ- ಯಾವನುತಾನೆ, ಪರಾಂ ಗತಿಂ - ಸದ್ಗತಿಯನ್ನು, ನ ಯಾತಿ - ಹೊಂದುವದಿಲ್ಲ ?

## ವ್ಯಾಸಸ್ತುತಿ

**ಅಚತುರ್ವದನೋ ಬ್ರಹ್ಮಾ ದ್ವಿಬಾಹುರಪರೋ ಹರಿಃ ।**
**ಅಫಾಲಲೋಚನಃ ಶಂಭುಃ ಭಗವಾನ್ ಬಾದರಾಯಣಃ ॥ ೬೭ ॥**

**ಅರ್ಥ** : ಅಚತುರ್ವದನಃ - ನಾಲ್ಕು ಮುಖಗಳಿಲ್ಲದ, ಬ್ರಹ್ಮಾ - ಬ್ರಹ್ಮನು; ದ್ವಿಬಾಹುಃ - ಎರಡು ತೋಳುಳ್ಳ, ಅಪರೋ ಹರಿಃ - ಬೇರೊಬ್ಬ ವಿಷ್ಣುವು ; ಅಫಾಲಲೋಚನಃ - ಹಣೆಗಣ್ಣಿಲ್ಲದ, ಶಂಭುಃ - ಈಶ್ವರನು; ಭಗವಾನ್ - ಪೂಜ್ಯನಾದ, ಬಾದರಾಯಣಃ - ಬಾದರಾಯಣನೆಂಬ ಹೆಸರಿನ ವ್ಯಾಸನು ಹೀಗೆ (ಶೋಭಿಸುತ್ತಿರುವನು).

## ಸತ್ಯದ ಸ್ತುತಿ

**ಸತ್ಯಮೇವೇಶ್ವರೋ ಲೋಕೇ ಸತ್ಯೇ ಪದ್ಮಾ ಪ್ರತಿಷ್ಠಿತಾ ।**
**ಸತ್ಯಮೂಲಾನಿ ಸರ್ವಾಣಿ ಸತ್ಯಾನ್ನಾಸ್ತಿ ಪರಂ ಪದಮ್ ॥ ೬೮ ॥**

**ಅರ್ಥ** : ಲೋಕೇ - ಲೋಕದಲ್ಲಿ, ಸತ್ಯಮೇವ - ಸತ್ಯವೊಂದೇ, ಈಶ್ವರಃ - ಯಜಮಾನನು. ಸತ್ಯೇ - ಸತ್ಯದಲ್ಲಿಯೇ, ಪದ್ಮಾ - ಲಕ್ಷ್ಮಿಯು, ಪ್ರತಿಷ್ಠಿತಾ - ನೆಲೆಸಿರುವಳು, ಸರ್ವಾಣಿ - ಎಲ್ಲಾ ಶ್ರೇಯಸ್ಸುಗಳು, ಸತ್ಯಮೂಲಾನಿ - ಸತ್ಯವನ್ನೇ ಆಧಾರವಾಗಿ ಉಳ್ಳವು. ಸತ್ಯಾತ್ - ಸತ್ಯಕ್ಕಿಂತ, ಪರಂ ಪದಮ್ - ಹೆಚ್ಚಿನ ಸ್ಥಾನವು, ನಾಸ್ತಿ - ಇಲ್ಲ.

## ಧರ್ಮದ ಸ್ತುತಿ

**ಧಾರಣಾದ್ಧರ್ಮಮಿತ್ಯಾಹುಃ ಧರ್ಮೋ ಧಾರಯತೇ ಪ್ರಜಾಃ ।**
**ತಸ್ಮಾದ್ಧರ್ಮಂ ಪ್ರಶಂಸನ್ತಿ ಧರ್ಮೋ ರಕ್ಷತಿ ರಕ್ಷಿತಃ ॥ ೬೯ ॥**

**ಅರ್ಥ** : ಧಾರಣಾತ್ - ಜಗತ್ತನ್ನು ಹೊತ್ತಿರುವದರಿಂದ, ಧರ್ಮಮಿತಿ ಧರ್ಮವೆಂದು, ಆಹುಃ - ಹೇಳುವರು, ಧರ್ಮಃ - ಧರ್ಮವು, ಪ್ರಜಾಃ - ಜನರನ್ನು, ಧಾರಯತೇ - ಧರಿಸುತ್ತದೆ. ತಸ್ಮಾತ್ - ಆದ್ದರಿಂದ, ಧರ್ಮಂ - ಧರ್ಮವನ್ನು, ಪ್ರಶಂಸನ್ತಿ - ಹೊಗಳುವರು. ರಕ್ಷಿತಃ - ಕಾಪಾಡಲ್ಪಟ್ಟ, ಧರ್ಮಃ - ಧರ್ಮವು, ರಕ್ಷತಿ - ನಮ್ಮನ್ನು ಕಾಪಾಡುತ್ತದೆ.

## ವಿದ್ಯೆಯ ಸ್ತುತಿ

**ವಿದ್ಯಾ ದದಾತಿ ವಿನಯಂ ವಿನಯಾದ್ಯಾತಿ ಪಾತ್ರತಾಮ್ ।**
**ಪಾತ್ರತ್ವಾದ್ಧನಮಾಪ್ನೋತಿ ಧನಾದ್ಧರ್ಮಂ ತತಃ ಸುಖಮ್ ॥ ೭೦ ॥**

**ಅರ್ಥ** : ವಿದ್ಯಾ - ವಿದ್ಯೆಯು, ವಿನಯಂ - ವಿನಯವನ್ನು, ದದಾತಿ - ಕೊಡುತ್ತದೆ. ವಿನಯಾದ್ -ವಿನಯದಿಂದ, ಪಾತ್ರತಾಮ್ - ಯೋಗ್ಯತೆಯನ್ನು, ಯಾತಿ - ಹೊಂದುತ್ತಾನೆ. ಪಾತ್ರತ್ವಾತ್ - ಯೋಗ್ಯನಾದುದರಿಂದ, ಧನಮ್ - ಹಣವನ್ನು, ಆಪ್ನೋತಿ - ಪಡೆಯುತ್ತಾನೆ. ಧನಾದ್ - ಹಣದಿಂದ ಧರ್ಮಂ - ಧರ್ಮವು, (ಬೆಳೆಯುತ್ತದೆ). ತತಃ - ಆಮೇಲೆ, ಸುಖಂ - ಸುಖವು (ಸಿಗುತ್ತದೆ).

## ವಿದ್ವಾಂಸನ ಸ್ತುತಿ

**ವಿದ್ವತ್ತ್ವಂ ಚ ನೃಪತ್ವಂ ಚ ನೈವ ತುಲ್ಯಂ ಕದಾಚನ ।**
**ಸ್ವದೇಶೇ ಪೂಜ್ಯತೇ ರಾಜಾ ವಿದ್ವಾನ್ ಸರ್ವತ್ರ ಪೂಜ್ಯತೇ ॥ ೭೧ ॥**

**ಅರ್ಥ** : ವಿದ್ವತ್ತ್ವಂ - ತಿಳಿವಳಿಕೆಯುಳ್ಳವನಾಗಿರುವಿಕೆಯೂ, ನೃಪತ್ವಂ - ರಾಜನಾಗಿರುವಿಕೆಯೂ, ಕದಾಚನ - ಯಾವಾಗಲೂ, ನೈವ ತುಲ್ಯಂ - ಸರಿಸಮಾನವಲ್ಲ. (ಏಕೆಂದರೆ), ರಾಜಾ - ರಾಜನು (ಅಧಿಕಾರಿಯು), ಸ್ವದೇಶೇ - ತನ್ನ ದೇಶದಲ್ಲಿ ಮಾತ್ರ, ಪೂಜ್ಯತೇ, - ಗೌರವಿಸಲ್ಪಡುತ್ತಾನೆ. ವಿದ್ವಾನ್ - ವಿದ್ಯಾವಂತನಾದರೊ, ಸರ್ವತ್ರ - ಎಲ್ಲೆಲ್ಲಿಯೂ, ಪೂಜ್ಯತೇ - ಗೌರವಿಸಲ್ಪಡುತ್ತಾನೆ.

## ಸಜ್ಜನದುರ್ಜನರ ಹವ್ಯಾಸ

**ಕಾವ್ಯ ಶಾಸ್ತ್ರವಿನೋದೇನ ಕಾಲೋ ಗಚ್ಛತಿ ಧೀಮತಾಮ್ ।**
**ವ್ಯಸನೇನ ತು ಮೂರ್ಖಾಣಾಂ ನಿದ್ರಯಾ ಕಲಹೇನ ವಾ ॥ ೭೨ ॥**

**ಅರ್ಥ** : ಧೀಮತಾಂ - ವಿವೇಕಿಗಳಿಗೆ, ಕಾವ್ಯಶಾಸ್ತ್ರವಿನೋದೇನ - ಕಾವ್ಯಪಠನಶಾಸ್ತ್ರಾಭ್ಯಾಸಗಳಿಂದಲೂ, ಮೂರ್ಖಾಣಾಂ ತು - ಅವಿವೇಕಿಗಳಿಗಾದರೊ, ವ್ಯಸನೇನ - ವಿಷಯದ ಚಿಂತನೆಯಿಂದಲೂ, ನಿದ್ರಯಾ - ನಿದ್ರೆಯಿಂದಲೂ ವಾ - ಅಥವಾ, ಕಲಹೇನ - ಜಗಳದಿಂದಲೂ, ಕಾಲಃ - ಕಾಲವು, ಗಚ್ಛತಿ -ಕಳೆಯುತ್ತದೆ.

## ವಿದ್ಯಾದಾನದ ಮಹತ್ತ್ವ

**ಅನ್ನದಾನಾತ್ ಪರಂ ದಾನಂ ವಿದ್ಯಾದಾನಮತಃ ಪರಮ್ ।**
**ಅನ್ನೇನ ಕ್ಷಣಿಕಾ ತೃಪ್ತಿಃ ಯಾವಜ್ಜೀವಂ ತು ವಿದ್ಯಯಾ ॥ ೭೩ ॥**

**ಅರ್ಥ** : ಅನ್ನದಾನಾತ್ - ಅನ್ನದಾನಕ್ಕಿಂತಲೂ, ಪರಂ - ಹೆಚ್ಚಿನ, ದಾನಂ - ದಾನವು, ವಿದ್ಯಾದಾನಂ - ವಿದ್ಯಾದಾನವು. ಅತಃ - ಆದ್ದರಿಂದ, ಪರಂ - ಅದೇ ದೊಡ್ಡದು. ಏಕೆಂದರೆ : ಅನ್ನೇನ - ಅನ್ನದಿಂದ, ಕ್ಷಣಿಕಾ - ಅಲ್ಪವಾದ (ತಾತ್ಕಾಲಿಕವಾದ) ತೃಪ್ತಿಃ - ಸಂತೋಷವು ಆಗುವದು ; ವಿದ್ಯಯಾ ತು - ವಿದ್ಯೆಯಿಂದಲಾದರೋ, ಯಾವಜ್ಜೀವಂ - ಬದುಕಿರುವವರೆಗೂ (ತೃಪ್ತಿಯಾಗುತ್ತದೆ).

## ಪರೋಪಕಾರಸ್ತುತಿ

**ಶ್ಲೋಕಾರ್ಧೇನ ಪ್ರವಕ್ಷ್ಯಾಮಿ ಯದುಕ್ತಂ ಗ್ರಂಥಕೋಟಿಭಿಃ ।**
**ಪರೋಪಕಾರಃ ಪುಣ್ಯಾಯ ಪಾಪಾಯ ಪರಪೀಡನಮ್ ॥ ೭೪ ॥**

**ಅರ್ಥ** : ಗ್ರಂಥಕೋಟಿಭಿಃ - ಕೋಟಿಪುಸ್ತಕಗಳಿಂದ, ಯದುಕ್ತಂ - ಏನು ಹೇಳಲ್ಪಟ್ಟಿದೆಯೋ ಅದನ್ನು, ಶ್ಲೋಕಾರ್ಧೇನ - ಅರ್ಧಶ್ಲೋಕದಿಂದ, ಪ್ರವಕ್ಷ್ಯಾಮಿ - ಹೇಳುತ್ತೇನೆ. (ಏನೆಂದರೆ), ಪರೋಪಕಾರಃ - ಮತ್ತೊಬ್ಬರಿಗೆ ಉಪಕಾರಮಾಡುವದು, ಪುಣ್ಯಾಯ - ಪುಣ್ಯಕ್ಕೆ ಕಾರಣವಾಗಿದೆ. ಪರಪೀಡನಮ್ - ಮತ್ತೊಬ್ಬರನ್ನು ಹಿಂಸಿಸುವದು, ಪಾಪಾಯ - ಪಾಪಕ್ಕೆ ಕಾರಣವಾಗಿದೆ.

## ತಾಯಿ - ದೇಶಗಳ ಸ್ತುತಿ

**ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ ।**
**ತಸ್ಮಾದ್ ವಿದ್ವಾನ್ ಜನ್ಮಭುವಂ ಮಾತರಂ ಪಾಲಯೇತ್ ಸದಾ ॥ ೭೫ ॥**

**ಅರ್ಥ** : ಜನನೀ - ತಾಯಿಯು, ಜನ್ಮಭೂಮಿಶ್ಚ - ಹುಟ್ಟಿದ ದೇಶವೂ ಸಹ, ಸ್ವರ್ಗಾದಪಿ - ಸ್ವರ್ಗಕ್ಕಿಂತಲೂ, ಗರೀಯಸೀ - ಶ್ರೇಷ್ಠವಾದುದು. ತಸ್ಮಾದ್ - ಆದ್ದರಿಂದ, ವಿದ್ವಾನ್ - ಜಾಣನಾದವನು, ಮಾತರಂ - ತಾಯಿಯನ್ನೂ, ತಥಾ - ಹಾಗೆಯೇ, ಜನ್ಮಭುವಂ - ಜನ್ಮಭೂಮಿಯನ್ನೂ, ಸದಾ - ಯಾವಾಗಲೂ, ಪಾಲಯೇತ್ - ಕಾಪಾಡಿಕೊಳ್ಳಬೇಕು

## ಧೈರ್ಯದ ಸ್ತುತಿ

**ಧೀರಾಃ ಶೋಕಂ ತರಿಷ್ಯನ್ತಿ ಲಭನ್ತೇ ಸಿದ್ಧಿಮುತ್ತಮಾಮ್ ।**
**ಧೀರೈಃ ಸಂಪ್ರಾಪ್ಯತೇ ಲಕ್ಷ್ಮೀಃ ಧೈರ್ಯಂ ಸರ್ವತ್ರ ಸಾಧನಮ್ ॥ ೭೬ ॥**

**ಅರ್ಥ** : ಧೀರಾಃ - ಗಟ್ಟಿಗರು, ಶೋಕಂ - ಸಂಕಟವನ್ನು, ತರಿಷ್ಯನ್ತಿ - ದಾಟುವರು. ಉತ್ತಮಾಂ - ಹೆಚ್ಚಿನ, ಸಿದ್ಧಿಂ - (ಕಾರ್ಯ)ಸಿದ್ಧಿಯನ್ನೂ, ಲಭನ್ತೇ - ಪಡೆಯುತ್ತಾರೆ. ಲಕ್ಷ್ಮೀಃ - ಐಶ್ವರ್ಯವು, ಧೀರೈಃ - ಧೀರರಿಂದ, ಸಂಪ್ರಾಪ್ಯತೇ - ಹೊಂದಲ್ಪಡುತ್ತದೆ. ಧೈರ್ಯಂ - ಧೈರ್ಯವೇ, ಸರ್ವತ್ರ - ಎಲ್ಲೆಲ್ಲೂ, ಸಾಧನಮ್ - ಉಪಾಯವು.

## ದಶಗುಣಗಳು

**ಧೃತಿಃ ಕ್ಷಮಾ ದಮೋಽಸ್ತೇಯಂ ಶೌಚಮಿಂದ್ರಿಯನಿಗ್ರಹಃ ।**
**ಧೀರ್ವಿದ್ಯಾ ಸತ್ಯಮಕ್ರೋಧಃ ದಶಕಂ ಧರ್ಮಲಕ್ಷಣಮ್ ॥ ೭೭ ॥**

**ಅರ್ಥ** : ಧೃತಿಃ - ಮನಸ್ಸಿನ ಸ್ಥೈರ್ಯವು, ಕ್ಷಮಾ - ಸಹನೆಯು, ದಮಃ - ಇಂದ್ರಿಯನಿಗ್ರಹವು, ಅಸ್ತೇಯಂ - ಕದಿಯದೆ ಇರುವಿಕೆಯು, ಶೌಚಂ - ಶುಚಿಯಾಗಿರುವಿಕೆಯು, ಇಂದ್ರಿಯನಿಗ್ರಹಃ - ಇಂದ್ರಿಯಗಳ ಮೇಲಿನ ಹಿಡಿತವು, ಧೀಃ - ಬುದ್ಧಿಯು, ವಿದ್ಯಾ - ಜ್ಞಾನವು, ಸತ್ಯಂ - ಸತ್ಯವು, ಅಕ್ರೋಧಃ - ಕೋಪಗೊಳ್ಳದೆ ಇರುವಿಕೆ, ದಶಕಂ - ಈ ಹತ್ತು, ಧರ್ಮಲಕ್ಷಣಮ್ - ಧರ್ಮದ ಗುರುತುಗಳು.

## ತೀರ್ಥಪ್ರಾಶನಕಾಲದಲ್ಲಿ

**ಅಕಾಲಮೃತ್ಯುಹರಣಂ ಸರ್ವವ್ಯಾಧಿನಿವಾರಣಮ್ ।**
**ಸಮಸ್ತಪಾಪಶಮನಂ ವಿಷ್ಣು (ಶಿವ) ಪಾದೋದಕಂ ಶುಭಮ್ ॥ ೭೮ ॥**

**ಅರ್ಥ** : ಅಕಾಲಮೃತ್ಯುಹರಣಂ - ಅಪಮೃತ್ಯುವನ್ನು ಕಳೆಯುವ, ಸರ್ವವ್ಯಾಧಿನಿವಾರಣಮ್ - ಎಲ್ಲಾ ಖಾಯಿಲೆಗಳನ್ನೂ ಹೋಗಲಾಡಿಸುವ, ಸಮಸ್ತಪಾಪಶಮನಮ್ - ಎಲ್ಲಾ ಪಾಪಗಳನ್ನೂ ನಿವಾರಿಸುವ, ಶುಭಂ - ಮಂಗಳಕರವಾದ, ವಿಷ್ಣುಪಾದೋದಕಂ - ವಿಷ್ಣುವಿನ ಪಾದದ ತೀರ್ಥವು (ನನಗೆ ಸುಖವನ್ನುಂಟುಮಾಡಲಿ).

## ರಥಸಪ್ತಮಿಾದಿನ ಸ್ನಾನಕಾಲದಲ್ಲಿ

**ಸಪ್ತ ಸಪ್ತ ಮಹಾಸಪ್ತ ಸಪ್ತದ್ವೀಪಾ ವಸುಂಧರಾ ।**
**ಸಪ್ತಾರ್ಕಪರ್ಣಮಾದಾಯ ಸಪ್ತಮ್ಯಾಂ ಸ್ನಾನಮಾಚರೇತ್ ॥ ೭೯ ॥**

**ಅರ್ಥ** : ಸಪ್ತಸಪ್ತ - ಏಳುಏಳಾಗಿ ವಿಂಗಡಿಸಿಕೊಂಡಿರುವ ಪ್ರಾಣಗಳು ಮತ್ತು ವಿಷಯಗಳ ರೂಪವಾದ, ಮಹಾಸಪ್ತ - ಪೂಜ್ಯನಾದ ಸಪ್ತರೂಪನೆ, (ಏಳು ಕುದುರೆಗಳ ರಥಗಳುಳ್ಳ ಸೂರ್ಯನೆ), ವಸುಂಧರಾ - ಭೂಮಿಯೂ, ಸಪ್ತದ್ವೀಪಾ - ಏಳುದ್ವೀಪಗಳುಳ್ಳದ್ದಾಗಿರುವದಲ್ಲವೆ ? (ನಿನಗೆ ಮಂಗಳವಾಗಲಿ). ಸಪ್ತಮ್ಯಾಂ - ಸಪ್ತಮಿಾದಿನದಲ್ಲಿ, ಸಪ್ತಾರ್ಕಪರ್ಣಮಾದಾಯ - ಏಳು ಎಕ್ಕದ ಎಲೆಗಳನ್ನು ದೇಹದಲ್ಲಿ ಇಟ್ಟುಕೊಂಡು, ಸ್ನಾನಂ - ಸ್ನಾನವನ್ನು, ಆಚರೇತ್ - ಮಾಡತಕ್ಕದ್ದು.

## ಬೇವು - ಬೆಲ್ಲಗಳನ್ನು ತಿನ್ನುವಾಗ

**ಶತಾಯುರ್ವಜ್ರದೇಹಾಯ ಸರ್ವಸಂಪತ್ಕರಾಯ ಚ ।**
**ಸರ್ವಾರಿಷ್ಟವಿನಾಶಾಯ ನಿಂಬಕಂದಳಭಕ್ಷಣಮ್ ॥ ೮೦ ॥**

**ಅರ್ಥ** : ಶತಾಯುಃ - ನೂರುವರ್ಷ ಬದುಕಿರುವದಕ್ಕೂ, ವಜ್ರ ದೇಹಾಯ - ವಜ್ರದಂತೆ ಗಟ್ಟಿಯಾದ ಶರೀರಾರೋಗ್ಯಕ್ಕೂ, ಸರ್ವಸಂಪತ್ಕರಾಯ - ಎಲ್ಲಾ ಸಂಪತ್ತುಗಳನ್ನೂ ಪಡೆಯುವದಕ್ಕಾಗಿ, ಚ - ಮತ್ತು ಸರ್ವಾರಿಷ್ಟ ವಿನಾಶಾಯ - ಎಲ್ಲಾ ಬಗೆಯ ಕಷ್ಟಗಳ ನಾಶಕ್ಕಾಗಿ, ನಿಂಬಕಂದಳಭಕ್ಷಣಮ್ - ಬೇವಿನ ಚಿಗುರನ್ನು ತಿನ್ನಬೇಕು.

## ಪ್ರಾತಃಕಾಲದಲ್ಲಿ ಎದ್ದಾಗ

**ಕರಾಗ್ರೇ ವಸತೇ ಲಕ್ಷ್ಮೀಃ ಕರಮಧ್ಯೇ ಸರಸ್ವತೀ ।**
**ಕರಮೂಲೇ ಸ್ಥಿತಾ ಗೌರೀ ಪ್ರಭಾತೇ ಕರದರ್ಶನಮ್ ॥ ೮೧ ॥**

**ಅರ್ಥ** : ಕರಾಗ್ರೇ - ಕೈಯ ತುದಿಯಲ್ಲಿ, ಲಕ್ಷ್ಮೀಃ - ಲಕ್ಷ್ಮಿಯೂ, ಕರ ಮಧ್ಯೇ - ಕೈಯ ಮಧ್ಯದಲ್ಲಿ, ಸರಸ್ವತೀ - ಸರಸ್ವತಿಯೂ, ಕರಮೂಲೇ - ಕೈಯ

ಬುಡದಲ್ಲಿ, ಗೌರೀ - ಗೌರಿಯೂ, ಸ್ಥಿತಾಃ - ಇದ್ದುಕೊಂಡಿರುತ್ತಾರೆ. ಆದ್ದರಿಂದ ಪ್ರಭಾತೇ - ಬೆಳಗಿನ ಹೊತ್ತು, ಕರದರ್ಶನಂ - ಕೈಯನ್ನು ನೋಡಿಕೊಳ್ಳಬೇಕು.

## ರಾತ್ರೆ ಮಲಗುವಾಗ

**ರಾಮಂ ಸ್ಕಂದಂ ಹನೂಮಂತಂ ವೈನತೇಯಂ ವೃಕೋದರಮ್ ।**
**ಶಯನೇ ಯಃ ಸ್ಮರೇನ್ನಿತ್ಯಂ ದುಸ್ಸ್ವಪ್ನಂ ತಸ್ಯ ನಶ್ಯತಿ ॥ ೮೨ ॥**

**ಅರ್ಥ** : ಯಃ - ಯಾವನು, ಶಯನೇ - ಮಲಗುವಾಗ, ರಾಮಂ - ಶ್ರೀರಾಮನನ್ನು, ಸ್ಕಂದಂ - ಸುಬ್ರಹ್ಮಣ್ಯನನ್ನು, ಹನೂಮನ್ತಂ - ಹನುಮಂತನನ್ನು, ವೈನತೇಯಂ - ಗರುಡನನ್ನು, ವೃಕೋದರಂ - ಭೀಮನನ್ನು ಸಹ, ಸ್ಮರೇತ್ - ನೆನೆಯುತ್ತಾನೋ, ತಸ್ಯ - ಅವನಿಗೆ ದುಃಸ್ವಪ್ನಂ - ಕೆಟ್ಟಕನಸು, ನಶ್ಯತಿ - ನಾಶವಾಗುತ್ತದೆ.

## ಶಮೀ ಪ್ರಾರ್ಥನೆ

**ಶಮೀ ಶಮಯತೇ ಪಾಪಂ ಶಮೀ ಶತ್ರುವಿನಾಶನಮ್ ।**
**ಅರ್ಜುನಸ್ಯ ಧನುರ್ಧಾರೀ ರಾಮಸ್ಯ ಪ್ರಿಯದರ್ಶಿನೀ ॥ ೮೩ ॥**

**ಅರ್ಥ** : ಶಮೀ - ಬನ್ನಿಯ ಮರವು, ಪಾಪಂ - ಪಾಪವನ್ನು, ಶಮಯತೇ - ನಾಶಗೊಳಿಸುವದು. ಅರ್ಜುನಸ್ಯ - ಅರ್ಜುನನ, ಧನುರ್ಧಾರೀ - ಧನುಸ್ಸನ್ನು (ಬಿಲ್ಲನ್ನು), ಹೊತ್ತುಕೊಂಡಿದ್ದ ಮತ್ತು ರಾಮಸ್ಯ - ರಾಮನಿಗೆ, ಪ್ರಿಯದರ್ಶಿನೀ - ಪ್ರಿಯದರ್ಶಿನಿಯೂ ಆದ, ಶಮೀ - ಬನ್ನಿಯು, ಶತ್ರುವಿನಾಶನಮ್ - ಶತ್ರುವನ್ನು ನಾಶಗೊಳಿಸುವದಾಗಿದೆ.

## ಬಿಲ್ವಪತ್ರಸ್ತುತಿ

**ತ್ರಿದಳಂ ತ್ರಿಗುಣಾಕಾರಂ ತ್ರಿನೇತ್ರಂ ಚ ತ್ರ್ಯಾಯುಧಮ್ ।**
**ತ್ರಿಜನ್ಮಪಾಪಸಂಹಾರಂ ಏಕಬಿಲ್ವಂ ಶಿವಾರ್ಪಣಮ್ ॥ ೮೪ ॥**

**ಅರ್ಥ** : ತ್ರಿದಳಂ - ಮೂರು ದಳವುಳ್ಳ, ತ್ರಿಗುಣಾಕಾರಂ - ಮೂರುಗುಣಗಳೆಂಬ ಆಕಾರವುಳ್ಳ, ತ್ರಿನೇತ್ರಂ - ಮೂರು ಕಣ್ಣುಳ್ಳ, ತ್ರ್ಯಾಯುಧಮ್ - ಮೂರು

ಆಯುಧಗಳ ಸ್ವರೂಪವಾಗಿರುವ, ತ್ರಿಜನ್ಮಪಾಪಸಂಹಾರಂ - ಮೂರು ಜನ್ಮಗಳ ಪಾಪವನ್ನು ನಾಶಪಡಿಸುವ, ಏಕಬಿಲ್ವಂ - ಒಂದು ಬಿಲ್ವಪತ್ರೆಯು, ಶಿವಾರ್ಪಣಮ್ - ಶಿವನಿಗೆ ಅರ್ಪಿತವಾಗಲಿ.

## ಅನ್ನಪೂರ್ಣಾಸ್ತುತಿ

**ನಿತ್ಯಾನಂದಕರೀ ವರಾಭಯಕರೀ ಸೌಂದರ್ಯರತ್ನಾಕರೀ ।**
**ನಿರ್ಧೂತಾಖಿಲಘೋರಪಾವನಕರೀ ಪ್ರತ್ಯಕ್ಷಮಾಹೇಶ್ವರೀ ॥**
**ಪ್ರಾಲೇಯಾಚಲವಂಶಪಾವನಕರೀ ಕಾಶೀಪುರಾಧೀಶ್ವರೀ ।**
**ಭಿಕ್ಷಾಂ ದೇಹಿ ಕೃಪಾವಲಂಬನಕರೀ ಮಾತಾನ್ನಪೂರ್ಣೇಶ್ವರೀ ॥ ೮೫ ॥**

**ಅರ್ಥ** : ನಿತ್ಯಾನಂದಕರೀ - ನಿತ್ಯವೂ ಆನಂದವನ್ನುಂಟುಮಾಡುವ, ವರಾಭಯಕರೀ - ವರವನ್ನು ಕೊಡುವ ಹಾಗೂ ಅಭಯಹಸ್ತಗಳನ್ನು ಉಳ್ಳ - ಸೌಂದರ್ಯರತ್ನಾಕರೀ - ಸೌಂದರ್ಯದ ಸಮುದ್ರದಂತಿರುವ, ನಿರ್ಧೂತಾಖಿಲ ಘೋರಪಾವನಕರೀ - ಕೊಡವಿಹಾಕಲ್ಪಟ್ಟ ಸಮಸ್ತಪಾಪಗಳಿಂದ ದೂರಳೂ ಪವಿತ್ರಳೂ ಆಗಿರುವ, ಪ್ರತ್ಯಕ್ಷಮಾಹೇಶ್ವರೀ - ಪ್ರತ್ಯಕ್ಷಮಹೇಶ್ವರಿಯಾದ, ಪ್ರಾಲೇಯಾಚಲವಂಶಪಾವನಕರೀ - ಹಿಮಾಚಲನ ವಂಶವನ್ನು ಪವಿತ್ರವಾಗಿಸುವ, ಕಾಶೀಪುರಾಧೀಶ್ವರೀ - ಕಾಶೀಪಟ್ಟಣಕ್ಕೆ ಒಡೆಯಳಾದ, ಕೃಪಾವಲಂಬನಕರೀ - ಕರುಣಾಹಸ್ತವನ್ನು ನೀಡಿ ಕಾಪಾಡುವ: ಮಾತಾ - ತಾಯಿಯಾದ, ಅನ್ನಪೂರ್ಣೇಶ್ವರೀ - ಅನ್ನಪೂರ್ಣೇಶ್ವರೀ (ತಾಯಿಯೆ), ಭಿಕ್ಷಾಂ ದೇಹಿ - ಭಿಕ್ಷೆಯನ್ನು ಕೊಡು.

**ಅನ್ನಪೂರ್ಣೇ ಸದಾ ಪೂರ್ಣೇ ಶಂಕರಪ್ರಾಣವಲ್ಲಭೇ ।**
**ಜ್ಞಾನವೈರಾಗ್ಯಸಿದ್ಧ್ಯರ್ಥಂ ಭಿಕ್ಷಾಂ ದೇಹಿ ಚ ಪಾರ್ವತಿ ॥ ೮೬ ॥**

**ಅರ್ಥ** : ಅನ್ನಪೂರ್ಣೇ - ಅನ್ನಪೂರ್ಣೆಯೆ, ಸದಾಪೂರ್ಣೇ - ಯಾವಾಗಲೂ ಪರಿಪೂರ್ಣಳೆ, ಶಂಕರಪ್ರಾಣವಲ್ಲಭೇ - ಈಶ್ವರನ ಪ್ರಿಯ ಪತ್ನಿಯೆ, ಪಾರ್ವತಿ - ಪರ್ವತರಾಜನ ಮಗಳೆ, ಜ್ಞಾನವೈರಾಗ್ಯಸಿದ್ಧ್ಯರ್ಥಂ - ಜ್ಞಾನವೈರಾಗ್ಯಗಳ ಸಿದ್ಧಿಗಾಗಿ, ಭಿಕ್ಷಾಂ ದೇಹಿ - ಭಿಕ್ಷೆಯನ್ನು ಕೊಡು.

## ದೀಪಾರತಿಕಾಲದಲ್ಲಿ

**ಸಾಜ್ಯಂ ತ್ರಿವರ್ತಿಸಂಯುಕ್ತಂ ವಹ್ನಿನಾ ಯೋಜಿತಂ ಮಯಾ ।**
**ಗೃಹಾಣ ಮಂಗಳಂ ದೀಪಂ ತ್ರೈಲೋಕ್ಯತಿಮಿರಾಪಹ ॥**
**ಭಕ್ತ್ಯಾ ದೀಪಂ ಪ್ರಯಚ್ಛಾಮಿ ದೇವಾಯ ಪರಮಾತ್ಮನೇ ।**
**ತ್ರಾಹಿ ಮಾಂ ನರಕಾದ್ ಘೋರಾದ್ ದಿವ್ಯಜ್ಯೋತಿ-**
**ರ್ನಮೋಽಸ್ತು ತೇ ॥ ೮೭ ॥**

**ಅರ್ಥ** : ತ್ರೈಲೋಕ್ಯಮಿತಿರಾಪಹ - ಮೂರು ಲೋಕಗಳ ಕತ್ತಲೆಯನ್ನೂ ನಾಶಗೊಳಿಸುವಾತನೆ, ತ್ರಿವರ್ತಿಸಂಯುಕ್ತಂ - ಮೂರು ಬತ್ತಿಗಳಿಂದ ಕೂಡಿದ, ಸಾಜ್ಯಂ - ತುಪ್ಪದಲ್ಲಿ ತೋಯಿಸಿದ, ಮಂಗಳಂ - ಮಂಗಳಕರವಾದ, ವಹ್ನಿನಾ ಯೋಜಿತಂ - ಬೆಂಕಿಯಿಂದ ಕೂಡಿಸಿದ ( ಹೊತ್ತಿಸಿದ), ದೀಪಂ - ದೀಪವನ್ನು, ಮಯಾ - ನನ್ನಿಂದ (ಸಮರ್ಪಿಸಲ್ಪಟ್ಟುದನ್ನು), ಗೃಹಾಣ - ಸ್ವೀಕರಿಸು.

ದೇವಾಯ - ಪ್ರಕಾಶರೂಪನಾದ, ಪರಮಾತ್ಮನೇ - ಪರಮಾತ್ಮನಿಗೆ, ಭಕ್ತ್ಯಾ - ಭಕ್ತಿಯಿಂದ, ದೀಪಂ - ದೀಪವನ್ನು, ಪ್ರಯಚ್ಛಾಮಿ - ಕೊಡುವೆನು. ಮಾಂ - ನನ್ನನ್ನು, ಘೋರಾದ್ - ಭಯಂಕರವಾದ, ನರಕಾದ್ - ದುಃಖದಿಂದ, ತ್ರಾಹಿ - ಕಾಪಾಡು, ದಿವ್ಯಜ್ಯೋತಿಃ - ಪರಮಪ್ರಕಾಶರೂಪವಾದ ಬೆಳಕೆ, ತೇ - ನಿನಗೆ, ನಮಃ - ನಮಸ್ಕಾರವು, ಅಸ್ತು - ಆಗಲಿ.

## ವೈದಿಕಪ್ರಾರ್ಥನೆಗಳು

**ಓಂ ಸಹ ನಾವವತು । ಸಹ ನೌ ಭುನಕ್ತು ।**
**ಸಹ ವೀರ್ಯಂ ಕರವಾವಹೈ । ತೇಜಸ್ವಿನಾವಧೀತಮಸ್ತು**
**ಮಾ ವಿದ್ವಿಷಾವಹೈ । ಓಂ ಶಾಂತಿಃ ಶಾಂತಿಃ ಶಾಂತಿಃ ॥ ೮೮ ॥**

**ಅರ್ಥ** : (ಬ್ರಹ್ಮವು) ನೌ - ನಮ್ಮನ್ನು, ಸಹ - ಒಟ್ಟಿಗೆ, ಅವತು - ಕಾಪಾಡಲಿ, ನೌ - ನಾವುಗಳು, ಸಹ - ಒಟ್ಟಿಗೆ, ಭುನಕ್ತು - ಸುಖವನ್ನು ಅನುಭವಿಸುವಂತಾಗಲಿ ! ವೀರ್ಯಂ - ಸಾಮರ್ಥ್ಯವನ್ನು, ಸಹ - ಒಟ್ಟಿಗೆ,

ಕರವಾವಹೈ - (ಪಡೆದು) ಕೆಲಸಮಾಡೋಣ ! ನೌ - ನಾವು, ಅಧೀತಂ - ಕಲಿತ ವಿದ್ಯೆಯು, ತೇಜಸ್ವಿ ಅಸ್ತು - ಚೆನ್ನಾಗಿ ಅರ್ಥವತ್ತಾಗಲಿ ! ಮಾ ವಿದ್ವಿಷಾವಹೈ - ಒಬ್ಬರನ್ನೊಬ್ಬರು ದ್ವೇಷಮಾಡದೆ ಇರೋಣ ಓಂ - ಮಂಗಳವು, ಶಾಂತಿಃ - ಶಾಂತಿಯು !( ಮೂರು ಸಲ ಹೇಳಿರುವಂತೆ ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ ಹೀಗೆ ಮೂರು ವಿಧವಾದ ತಾಪಗಳೂ ಶಮನವಾಗಲಿ)!

## ಗಾಯತ್ರೀ ಸ್ತುತಿ

**ಓಂ ಭೂರ್ಭುವಸ್ಸುವಃ । ತತ್ಸವಿತುರ್ವರೇಣ್ಯಂ ಭರ್ಗೋ
ದೇವಸ್ಯ ಧೀಮಹಿ । ಧಿಯೋ ಯೋ ನಃ ಪ್ರಚೋದಯಾತ್ ॥ ೮೯ ॥**

**ಅರ್ಥ** : ಓಂ - ಭೂಲೋಕ, ಭುವರ್ಲೋಕ, ಸುವರ್ಲೋಕಗಳು. (ಅಥವಾ ಈ ವ್ಯಾಹೃತಿಗಳು) ಮಂಗಳವನ್ನುಂಟುಮಾಡಲಿ ! ದೇವಸ್ಯ - ಪ್ರಕಾಶಮಯನಾದ, ಸವಿತುಃ - ಸೂರ್ಯನ, ವರೇಣ್ಯಂ - ವರಣೀಯ (ಪೂಜ್ಯ)ವಾದ, ತತ್ - ಆ ಪ್ರಸಿದ್ಧವಾದ, ಭರ್ಗಃ - ತೇಜಸ್ಸನ್ನು, ಧೀಮಹಿ - ಧ್ಯಾನಮಾಡುತ್ತೇವೆ. ಯಃ - ಆ ಯಾವ (ಸೂರ್ಯನು), ನಃ - ನಮ್ಮ. ಧಿಯಃ - ಬುದ್ಧಿವೃತ್ತಿಗಳನ್ನು, ಪ್ರಚೋದಯಾತ್ - ಪ್ರೇರಿಸಲಿ !

## ಮಂಗಳಾರತಿಯ ಕಾಲದಲ್ಲಿ

**ಓಂ ಆಶಾಸ್ತೇಽಯಂ ಯಜಮಾನೋಽಸೌ । ಆಯುರಾಶಾಸ್ತೇ ।
ಸುಪ್ರಜಾಸ್ತ್ವಮಾಶಾಸ್ತೇ । ಸಜಾತವನಸ್ಯಾಮಾಶಾಸ್ತೇ । ಉತ್ತರಾಂ
ದೇವಯಜ್ಯಾಮಾಶಾಸ್ತೇ । ಭೂಯೋ ಹವಿಷ್ಕರಣಮಾಶಾಸ್ತೇ ।
ದಿವ್ಯಂ ಧಾಮಾಶಾಸ್ತೇ । ವಿಶ್ವಂ ಪ್ರಿಯಮಾಶಾಸ್ತೇ ।
ಯದನೇನ ಹವಿಷಾಶಾಸ್ತೇ । ತದಶ್ಯಾತ್ ತದೃಧ್ಯಾತ್ । ತದಸ್ಮೈ
ದೇವಾ ರಾಸನ್ತಾಮ್ । ತದಗ್ನಿರ್ದೇವೋ ದೇವೇಭ್ಯೋ
ವನತೇ । ವಯಮಗ್ನೇರ್ಮಾನುಷಾಃ । ಇಷ್ಟಂ ಚ ವೀತಂ ಚ ।
ಉಭೇ ಚ ನೋ ದ್ಯಾವಾಪೃಥಿವೀ ಅಗ್ಂಹಸಸ್ಪಾತಾಮ್ । ಇಹ
ಗತಿರ್ವಾಮಸ್ಯೇದಂ ಚ । ನಮೋ ದೇವೇಭ್ಯಃ ॥ ೯೦ ॥**

**ಭಾವಾರ್ಥ** : ಈ ಯಜಮಾನನು ನೂರು ವರ್ಷಗಳ ಬಾಳನ್ನು ಇಚ್ಛಿಸುತ್ತಾನೆ. ಉತ್ತಮರಾದ ಪುತ್ರರನ್ನು ಬಯಸುತ್ತಾನೆ. ತನ್ನವರಾದ ಮಾನವರಿಂದ ಗೌರವವನ್ನು ಬಯಸುತ್ತಾನೆ. ಮುಂದಿನ ಕಾಲದಲ್ಲಿಯೂ ವೈದಿಕಕರ್ಮಗಳ ಅನುಷ್ಠಾನ, ಹೆಚ್ಚಿನ ಯಾಗಾದಿಗಳು ಇವುಗಳ ಮೂಲಕ ಸ್ವರ್ಗಸುಖವನ್ನು ಬಯಸುತ್ತಾನೆ. ಇಡಿಯ ಜಗತ್ತಿಗೆಲ್ಲ ಒಳ್ಳೆಯದನ್ನು ಬಯಸುತ್ತಾ ತನಗೆ ಜಗತ್ತೆಲ್ಲ ಪ್ರಿಯವಾಗಲೆಂದು ಆಶಿಸುತ್ತಾನೆ. ಈ ಯಾವ ಶ್ರೇಷ್ಠವಾದ ತುಪ್ಪದ ಹವಿಸ್ಸಿನಿಂದ ಶುಭವನ್ನು ಬಯಸುತ್ತಾನೋ ಅದನ್ನು ಅವನು ಅನುಭವಿಸಲಿ ! ಅದು ಬೆಳೆಯಲಿ ! ಈ ಯಜಮಾನನಿಗೆ ಅಗ್ನಿ ಮುಂತಾದ ದೇವತೆಗಳು ಆ ಸುಖವನ್ನು ಉಂಟುಮಾಡಲಿ ! ಇಂಥ ಫಲವನ್ನು ಅಗ್ನಿಯು ದೇವತೆಗಳ ಕಡೆಯಿಂದ ಕೊಡಿಸಲಿ ! ಯಜ್ಞಗಳು, ತಪಸ್ಸು - ಇವುಗಳ ಫಲವನ್ನು ಮನುಷ್ಯರಾದ ನಾವು ಅಗ್ನಿಯ ಪ್ರಸಾದದಿಂದಲೇ ಆ ಯಜಮಾನನಿಗೆ ಉಂಟಾಗುವಂತೆ ಹರಸೋಣ ! ಅಂತರಿಕ್ಷದೇವತೆಯೂ ಪೃಥ್ವೀದೇವತೆಯೂ ಕರ್ಮಾಪಚಾರನಿಮಿತ್ತವಾದ ಪಾಪಗಳಿಂದ ಇವನನ್ನು ಕಾಪಾಡಲಿ ! ಈ ಹವಿಸ್ಸಿನಿಂದ ಯಜಮಾನನಿಗೆ ಇಷ್ಟವಾದ ಧನವು ಕೈಗೂಡಲಿ ! ಈ ಹವಿಸ್ಸು ದೇವತೆಗಳಿಗೆ ಅನ್ನವಾಗಿ ಪರಿಣಮಿಸಲಿ ! ದೇವತೆಗಳಿಗೆ ನಮಸ್ಕಾರ

**ಓಂ ಐಂದ್ರಾಗ್ನಮುಪಸಾದಿತಮ್ । ಸರ್ವಾಭ್ಯೋ ವಾ ಏಷ**
**ದೇವತಾಭ್ಯೋ ಜುಹೋತಿ । ಯೋಽಗ್ನಿಹೋತ್ರಂ ಜುಹೋತಿ ।**
**ಯಥಾ ಖಲು ವೈ ಧೇನುಂ ತೀರ್ಥೇ ತರ್ಪಯತಿ । ಏವಮಗ್ನಿ-**
**ಹೋತ್ರೀ ಯಜಮಾನಂ ತರ್ಪಯತಿ । ತೃಪ್ಯತಿ ಪ್ರಜಯಾ**
**ಪಶುಭಿಃ । ಪ್ರಸುವರ್ಗಂ ಲೋಕಂ ಜಾನಾತಿ । ಪಶ್ಯತಿ**
**ಪುತ್ರಮ್ । ಪಶ್ಯತಿ ಪೌತ್ರಮ್ । ಪ್ರಪ್ರಜಯಾ ಪಶುಭಿರ್ಮಿಥು-**
**ನೈರ್ಜಾಯತೇ । ಯಸ್ಯೈವಂ ವಿದುಷೋಽಗ್ನಿಹೋತ್ರಂ**
**ಜುಹ್ವತಿ । ಯ ಉ ಚೈನಮೇವಂ ವೇದ**

**ಭಾವಾರ್ಥ** : ಯಾವನು ಅಗ್ನಿಹೋತ್ರವನ್ನು ಮಾಡುತ್ತಾನೋ ಅವನು ಇಂದ್ರ, ಅಗ್ನಿ - ಮೊದಲಾದ ಎಲ್ಲಾ ದೇವತೆಗಳನ್ನೂ ಕುರಿತು ಯಜ್ಞ

ಮಾಡಿದವನಾಗುತ್ತಾನೆ. ಅವನು ಇಂದ್ರಾಗ್ನಿಗಳನ್ನು ಗೌರವಿಸಿದವನಾಗುವನು. ಹೇಗೆ ಪವಿತ್ರವಾದ ಹಸುವನ್ನು ಗೋಪಾಲಕನು ಮೈಯನ್ನು ತುರುಸುವದು, ಹುಲ್ಲು ಹಾಕುವದು, ನೀರಿನ ಬಳಿಗೆ ಕರೆದೊಯ್ಯುವದು. ಹೀಗೆ ಸೇವಿಸುತ್ತಾ ಗೋವನ್ನು ಸಂತೋಷಗೊಳಿಸುತ್ತಾನೋ ಹಾಗೆ ಈ ಅಗ್ನಿಹೋತ್ರಕ್ಕೆ ಅವಶ್ಯವಾದ - ಹಸುವಿನಂತೆ ಇರುವ ಯಾಜಕನು ಯಜಮಾನನನ್ನು ತೃಪ್ತಿಗೊಳಿಸುವನು. ತಾನೂ ಪ್ರಜೆಗಳಿಂದಲೂ ಪಶುಗಳಿಂದಲೂ ಕೂಡಿದವನಾಗಿ ತೃಪ್ತನಾಗುವನು. ಸ್ವರ್ಗಲೋಕವನ್ನು ಬಲ್ಲವನಾಗುವನು. ಪುತ್ರರನ್ನೂ ಪೌತ್ರರನ್ನೂ (ಮೊಮ್ಮಕ್ಕಳನ್ನೂ) ಕಾಣುವನು. ಹೀಗೆ ಪ್ರಜೆ, ಪಶು - ಮುಂತಾದ ಸುಖಗಳಿಂದ ಕೂಡಿ ಬಾಳುವನು. ಹೀಗೆ ಬಲ್ಲವನ ಅಗ್ನಿಹೋತ್ರದಲ್ಲಿ ಯಾವನು ಋತ್ವಿಜನಾಗಿ ಹೋಮಮಾಡುವನೋ ಮತ್ತು ಆ ಅಗ್ನಿಹೋತ್ರಿಯನ್ನೇ ಯಾವನು ಉಪಾಸಿಸುವನೋ ಅವನಿಗೂ ಇಂಥ ಫಲವಾಗುವದು.

**ವೇದಾಹಮೇತಂ ಪುರುಷಂ ಮಹಾನ್ತಮ್ । ಆದಿತ್ಯ**
**ವರ್ಣಂ ತಮಸಸ್ತು ಪಾರೇ । ಸರ್ವಾಣಿ ರೂಪಾಣಿ ವಿಚಿತ್ಯ**
**ಧೀರಃ । ನಾಮಾನಿ ಕೃತ್ವಾಭಿವದನ್ ಯದಾಸ್ತೇ ॥**

**ಭಾವಾರ್ಥ** : ಆದಿತ್ಯನಂತೆ ಪ್ರಕಾಶಮಾನವಾದ ಬಣ್ಣವುಳ್ಳವನೂ ಕತ್ತಲೆಯ ಆಚೆಗೆ ಇರುವವನೂ ಆದ ಆ ಮಹಾಪುರುಷನನ್ನು ನಾನುಬಲ್ಲೆನು ಆ ಮಹಾಮಹಿಮನೂ ಧೀರನೂ ಆದ ಭಗವಂತನು ಎಲ್ಲಾ ಪ್ರಾಣಿಗಳ ರೂಪದಲ್ಲಿಯೂ ಹೊರತೋರಿಕೊಂಡು ಒಂದೊಂದು ಆಕಾರಗಳಿಗೂ ಹೆಸರನ್ನು ಕೊಟ್ಟು ತಾನೂ ಅವುಗಳೊಳಗೆ ಹೊಕ್ಕು ಇದ್ದುಕೊಂಡಿರುವರು.

## ಮಂತ್ರಪುಷ್ಪಕಾಲದಲ್ಲಿ

**ಓಂ ॥ ರಾಜಾಧಿರಾಜಾಯ ಪ್ರಸಹ್ಯ ಸಾಹಿನೇ । ನಮೋ**
**ವಯಂ ವೈಶ್ರವಣಾಯ ಕುರ್ಮಹೇ । ಸ ಮೇ ಕಾಮಾನ್**
**ಕಾಮಕಾಮಾಯ ಮಹ್ಯಮ್ । ಕಾಮೇಶ್ವರೋ ವೈ ಶ್ರವಣೋ**
**ದದಾತು । ಕುಬೇರಾಯ ವೈಶ್ರವಣಾಯ । ಮಹಾರಾಜಾಯ ನಮಃ ॥**

**ಭಾವಾರ್ಥ** : ರಾಜರುಗಳಿಗೆಲ್ಲ ರಾಜನಾದ ಮತ್ತು ಎಲ್ಲಾ ಲಾಭಗಳನ್ನೂ ತನ್ನ ಸ್ವಪ್ರತಿಭೆಯಿಂದ ಬೇರೆಯವರಿಗಿಂತಲೂ ಮಿಗಿಲಾಗಿ ಪಡೆದುಕೊಂಡು ಉಳಿದವರನ್ನು ಹಿಮ್ಮೆಟ್ಟಿಸಿರುವಂಥ ಪ್ರಭಾವಶಾಲಿಯಾದ ವೈಶ್ರವಣನಿಗೆ ನಾವು ನಮಸ್ಕರಿಸುತ್ತೇವೆ. ಇಷ್ಟಾರ್ಥಗಳನ್ನು ಬಯಸುವ ನನಗೆ ಕಾಮೇಶ್ವರನೂ ವೈಶ್ರವಣನೂ ಆದ ಅವನು ಕಾಮಗಳನ್ನು ಕೊಡಲಿ ! ಕುಬೇರರೂಪನಾದ ಮತ್ತು ಮಹಾರಾಜನಾದ ಇಂಥ ವೈಶ್ರವಣನಿಗೆ ನಮಸ್ಕಾರ!!

----------

# ಉಪನಿಷದ್ರತ್ನಗಳು

## ಈಶಾವಾಸ್ಯೋಪನಿಷತ್ತು

**ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್ ।**
**ತೇನ ತ್ಯಕ್ತೇನ ಭುಂಜೀಥಾ ಮಾ ಗೃಧಃ ಕಸ್ಯ ಸ್ವಿದ್ಧನಮ್ ॥೧॥**

**ಅರ್ಥ** : ಜಗತ್ಯಾಂ - ಪ್ರಪಂಚದಲ್ಲಿ, ಯತ್ಕಿಂಚ - ಏನೇನು, ಜಗತ್ - ನಾಮರೂಪಗಳಾಗಿ ಹರಡಿರುವ ವಿಸ್ತಾರವುಂಟೋ, ಇದಂ ಸರ್ವಂ - ಇದೆಲ್ಲವೂ, ಈಶಾ - ಪರಮೇಶ್ವರನಿಂದ, ವಾಸ್ಯಂ - ಮುಚ್ಚಲ್ಪಡತಕ್ಕದ್ದು. ತ್ಯಕ್ತೇನ - ತ್ಯಾಗ ರೂಪವಾದ, ತೇನ - ಆ (ತಿಳಿವಳಿಕೆಯಿಂದ), ಭುಂಜೀಥಾಃ - ನೀನು (ಆನಂದ ವನ್ನು) ಅನುಭವಿಸತಕ್ಕದ್ದು. ಕಸ್ಯಸ್ವಿತ್ - ಯಾರೊಬ್ಬರ, ಧನಮ್ - ಹಣವನ್ನೂ, ಮಾ ಗೃಧಃ - ಬಯಸಬೇಡ.

**ಅಗ್ನೇ ನಯ ಸುಪಥಾ ರಾಯೇ ಅಸ್ಮಾನ್**
**ವಿಶ್ವಾನಿ ದೇವ ವಯುನಾನಿ ವಿದ್ವಾನ್ ।**
**ಯುಯೋಧ್ಯಸ್ಮಜ್ಜುಹುರಾಣಮೇನೋ**
**ಭೂಯಿಷ್ಠಾಂ ತೇ ನಮ ಉಕ್ತಿಂ ವಿಧೇಮ ॥೨॥**

**ಅರ್ಥ** : ದೇವ- ಪ್ರಕಾಶರೂಪನಾದ, ಅಗ್ನೇ - ಅಗ್ನಿಯೆ, ವಿಶ್ವಾನಿ - ಎಲ್ಲಾ, ವಯುನಾನಿ - ಕರ್ಮಗಳನ್ನು, ವಿದ್ವಾನ್ - ತಿಳಿದವನಾಗಿ, ಅಸ್ಮಾನ್ -

ನಮ್ಮಗಳನ್ನು, ಸುಪಥಾ - ಒಳ್ಳೆಯ ಮಾರ್ಗದಿಂದ, ರಾಯೇ - ಐಶ್ವರ್ಯದ ಕಡೆಗೆ, ನಯ - ಕರೆದೊಯ್ಯುವವನಾಗು. ಅಸ್ಮದ್ - ನಮ್ಮ ಕಡೆಯಿಂದ, ಜುಹುರಾಣಂ - ಕುಟಿಲತೆ, ವಂಚನೆಗಳನ್ನು, ಯುಯೋಧಿ - ಬಿಡಿಸುವವನಾಗು. ತೇ - ನಿನಗೆ, ಭೂಯಿಷ್ಠಾಂ - ಅತ್ಯಂತ ಹೆಚ್ಚಿನ, ನಮ ಉಕ್ತಿಂ - ನಮಸ್ಕಾರ ವಚನಗಳನ್ನು, ವಿಧೇಮ - ಹೇಳಿ ಪರಿಚರ್ಯೆಮಾಡುವೆವು.

## ಕೇನೋಪನಿಷತ್ತು

**ಶ್ರೋತ್ರಸ್ಯ ಶ್ರೋತ್ರಂ ಮನಸೋ ಮನೋ ಯದ್ವಾಚೋ**
**ಹ ವಾಚಂ ಸ ಉ ಪ್ರಾಣಸ್ಯ ಪ್ರಾಣಃ ।**
**ಚಕ್ಷುಷಶ್ಚಕ್ಷುರತಿಮುಚ್ಯ ಧೀರಾಃ**
**ಪ್ರೇತ್ಯಾಸ್ಮಾಲ್ಲೋಕಾದಮೃತಾ ಭವಂತಿ ॥ ೧ ॥**

**ಅರ್ಥ** : ಸ ಉ - ಅವನಾದರೋ, ಶ್ರೋತ್ರಸ್ಯ, - ಕಿವಿಗೆ, ಶ್ರೋತ್ರಂ - ಕಿವಿಯು. ಮನಸಃ - ಮನಸ್ಸಿಗೆ, ಮನಃ - ಮನಸ್ಸು, ವಾಚಃ - ಮಾತಿಗೆ, ವಾಕ್ - ಮಾತಾಗಿರುವನು, ಮತ್ತು ಪ್ರಾಣಸ್ಯ - ಮೂಗಿಗೆ, ಪ್ರಾಣಃ - ಮೂಗು, ಚಕ್ಷುಷಃ - ಕಣ್ಣಿಗೆ, ಚಕ್ಷುಃ - ಕಣ್ಣು (ಆಯಾ ಇಂದ್ರಿಯಗಳಿಗೆ ಆಯಾ ಶಕ್ತಿಯನ್ನು ಕೊಡುವವನು) ಧೀರಾಃ - ಧೀರರು, ಅತಿಮುಚ್ಯ - (ಇಂದ್ರಿಯಗಳಲ್ಲಿ ತಾನೆಂಬ ಭಾವವನ್ನು) ಬಿಟ್ಟು, ಅಸ್ಮಾಲ್ಲೋಕಾತ್ - ಈ ಲೋಕದಿಂದ, ಪ್ರೇತ್ಯ - ಹೊರಟವರಾಗಿ, ಅಮೃತಾಃ - ಮರಣವಿಲ್ಲದವರಾಗಿ, ಭವನ್ತಿ - ಆಗುವರು.

## ಕಠೋಪನಿಷತ್ತು

**ಅಣೋರಣೀಯಾನ್ ಮಹತೋ ಮಹೀಯಾನ್**
**ಆತ್ಮಾऽಸ್ಯ ಜಂತೋರ್ನಿಹಿತೋ ಗುಹಾಯಾಮ್ ।**
**ತಮಕ್ರತುಃ ಪಶ್ಯತಿ ವೀತಶೋಕೋ**
**ಧಾತುಃ ಪ್ರಸಾದಾನ್ಮಹಿಮಾನಮಾತ್ಮನಃ ॥ ೧ ॥**

**ಅರ್ಥ** : ಅಣೋಃ - ಚಿಕ್ಕದಕ್ಕಿಂತಲೂ, ಅಣೀಯಾನ್ - ಅತ್ಯಂತ ಚಿಕ್ಕವನಾದ, ಮಹತಃ - ದೊಡ್ಡದಕ್ಕಿಂತಲೂ, ಮಹೀಯಾನ್ - ಹೆಚ್ಚು ದೊಡ್ಡವ

ನಾದ, ಆತ್ಮಾ - ಆತ್ಮನು, ಅಸ್ಯ - ಈ, ಜಂತೋಃ - ಪ್ರಾಣಿಯ, ಗುಹಾಯಾಮ್ - ಹೃದಯಗುಹೆಯಲ್ಲಿ, ನಿಹಿತಃ - ಇದ್ದುಕೊಂಡಿರುವನು. ಅಕ್ರತುಃ - ಕಾಮವಿಲ್ಲದವನು, ಧಾತುಃ - ಮನಆದಿಕರಣಗಳ, ಪ್ರಸಾದಾತ್ - ಸ್ವಚ್ಛತೆಯಿಂದ, ಆತ್ಮನಃ - ತನ್ನ, ಮಹಿಮಾನಂ - ಮಹಿಮಾರೂಪನಾದ, ತಂ - ಆ ಭಗವಂತನನ್ನು, ಪಶ್ಯತಿ - ಕಂಡುಕೊಳ್ಳುತ್ತಾನೆ. (ಅನಂತರ) ವೀತಶೋಕಃ - ಶೋಕವಿಲ್ಲದವನಾಗುತ್ತಾನೆ.

**ಏಕೋ ವಶೀ ಸರ್ವಭೂತಾಂತರಾತ್ಮಾ**
**ಏಕಂ ರೂಪಂ ಬಹುಧಾ ಯಃ ಕರೋತಿ ।**
**ತಮಾತ್ಮಸ್ಥಂ ಯೇಽನುಪಶ್ಯಂತಿ ಧೀರಾಃ**
**ತೇಷಾಂ ಸುಖಂ ಶಾಶ್ವತಂ ನೇತರೇಷಾಮ್ ॥ ೨ ॥**

**ಅರ್ಥ** : ಏಕಃ - ಒಬ್ಬನೇ ಆಗಿರುವ, ವಶೀ - ಎಲ್ಲವನ್ನೂ ತನ್ನ ವಶದಲ್ಲಿಟ್ಟುಕೊಂಡಿರುವ, ಸರ್ವಭೂತಾಂತರಾತ್ಮಾ - ಎಲ್ಲಾ ಪ್ರಾಣಿಗಳ ಒಳಹೊಕ್ಕು ಆತ್ಮನಾಗಿರುವ, ಯಃ - ಯಾವ ಪರಮಾತ್ಮನು, ಏಕಂ ರೂಪಂ - ತನ್ನ ಒಂದೇ ರೂಪವನ್ನೇ, ಬಹುಧಾ - ನಾನಾರೀತಿಯಾಗಿ, ಕರೋತಿ - ಉಂಟು ಮಾಡುತ್ತಾನೋ, ಆತ್ಮಸ್ಥಂ - ನಮ್ಮೊಳಗೇ ಇರುವ, ತಂ - ಅವನನ್ನು, ಯೇ - ಯಾವ, ಧೀರಾಃ - ಗಟ್ಟಿಗರು, ಅನುಪಶ್ಯಂತಿ - ಶಾಸ್ತ್ರಾಚಾರ್ಯೋಪದೇಶಗಳಿಂದ ಕಂಡುಕೊಳ್ಳುವರೋ, ತೇಷಾಂ - ಅವರಿಗೇ, ಸುಖಂ - ಸುಖವು (ದೊರಕುವದು). ಇತರೇಷಾಂ ನ - ಬೇರೆಯವರಿಗಲ್ಲ.

## ಮುಂಡಕೋಪನಿಷತ್ತು

**ಯಸ್ಮಿನ್ ದ್ಯೌಃ ಪೃಥಿವೀ ಚಾಂತರಿಕ್ಷಂ**
**ಓತಂ ಮನಃ ಸಹ ಪ್ರಾಣೈಶ್ಚ ಸರ್ವೈಃ ।**
**ತಮೇವೈಕಂ ಜಾನಥ ಆತ್ಮಾನಮನ್ಯಾ ವಾಚೋ**
**ವಿಮುಂಚಥಾಽಮೃತಸ್ಯೈಷ ಸೇತುಃ ॥ ೧ ॥**

**ಅರ್ಥ** : ಯಸ್ಮಿನ್ - ಯಾವನಲ್ಲಿ, ದ್ಯೌಃ - ದ್ಯುಲೋಕವು, ಪೃಥಿವೀ - ಭೂಮಿಯು, ಚ - ಮತ್ತು, ಅಂತರಿಕ್ಷಂ - ಆಕಾಶವು, ಸರ್ವೈಃ - ಎಲ್ಲಾ, ಪ್ರಾಣೈಶ್ಚ -

ಪ್ರಾಣಗಳೊಡನೆ, ಸಹ - ಕೂಡಿಕೊಂಡಿರುವ, ಮನಃ - ಮನಸ್ಸು, ಓತಂ - ಹೆಣೆಯಲ್ಪಟ್ಟಿರುವದೋ, ಏಕಂ - ಒಬ್ಬನಾದ, ತಮೇವ - ಅವನನ್ನೇ, ಜಾನಥ - ತಿಳಿಯಿರಿ. ಅನ್ಯಾ ವಾಚಃ- ಮಿಕ್ಕ ಮಾತುಗಳನ್ನು, ವಿಮುಂಚಥ - ಬಿಡಿರಿ. ಏಷಃ - ಇದು, ಅಮೃತಸ್ಯ - ಅಮೃತತ್ವಕ್ಕೆ, ಸೇತುಃ - ಸಾಧನವಾಗಿರುವದು.

**ನ ತತ್ರ ಸೂರ್ಯೋ ಭಾತಿ ನ ಚಂದ್ರತಾರಕಂ**
**ನೇಮಾ ವಿದ್ಯುತೋ ಭಾನ್ತಿ ಕುತೋಽಯಮಗ್ನಿಃ ।**
**ತಮೇವ ಭಾನ್ತಮನುಭಾತಿ ಸರ್ವಂ**
**ತಸ್ಯ ಭಾಸಾ ಸರ್ವಮಿದಂ ವಿಭಾತಿ ॥ ೨ ॥**

**ಅರ್ಥ** : ತತ್ರ - ಆ ಬ್ರಹ್ಮರೂಪದ ಸನ್ನಿಧಿಯಲ್ಲಿ, ಸೂರ್ಯಃ - ಸೂರ್ಯನು, ನ ಭಾತಿ - ಬೆಳಗುವದಿಲ್ಲ. ಚಂದ್ರತಾರಕಂ - ಚಂದ್ರ, ನಕ್ಷತ್ರಗಳೂ, ನ ಭಾನ್ತಿ - ಬೆಳಗುವದಿಲ್ಲ. ಅಯಂ - ಈ, ಅಗ್ನಿಃ - ಅಗ್ನಿಯು, ಕುತಃ- ಎಲ್ಲಿಂದ ಬೆಳಗಿಯಾನು ? ಸರ್ವಂ - ಎಲ್ಲವೂ, ಭಾನ್ತಂ - ಬೆಳಗುತ್ತಿರುವ, ತಮೇವ - ಅವನನ್ನೇ, ಅನುಭಾತಿ - ಅನುಸರಿಸಿ ಬೆಳಗುವದು. ತಸ್ಯ - ಅವನ, ಭಾಸಾ- ಬೆಳಕಿನಿಂದಲೇ, ಇದಂ ಸರ್ವಂ - ಇದೆಲ್ಲವೂ, ವಿಭಾತಿ - ಹೊಳೆಯುತ್ತಿದೆ.

## ಪ್ರಶ್ನೋಪನಿಷತ್ತು

**ವಿಜ್ಞಾನಾತ್ಮಾ ಸಹ ದೇವೈಶ್ಚ ಸರ್ವೈಃ**
**ಪ್ರಾಣಾ ಭೂತಾನಿ ಸಂಪ್ರತಿಷ್ಠಂತಿ ಯತ್ರ ।**
**ತದಕ್ಷರಂ ವೇದಯತೇ ಯಸ್ತು ಸೋಮ್ಯ**
**ಸ ಸರ್ವಜ್ಞಃ ಸರ್ವಮೇವಾವಿವೇಶ ॥ ೧ ॥**

**ಅರ್ಥ** : ಸರ್ವೈಃ - ಎಲ್ಲಾ, ದೇವೈಶ್ಚ - ದೇವತೆಗಳೊಡನೆ, ಸಹ - ಕೂಡಿ, ವಿಜ್ಞಾನಾತ್ಮಾ - ಜೀವಾತ್ಮನು, ಪ್ರಾಣಾಃ - ಪ್ರಾಣಗಳು. ಭೂತಾನಿ - ಭೂತಗಳು ಎಲ್ಲವೂ, ಯತ್ರ - ಎಲ್ಲಿ, ಸಂಪ್ರತಿಷ್ಠಂತಿ - ಸೇರಿ ಒಂದಾಗಿರುವವೋ, ತತ್ - ಆ, ಅಕ್ಷರಂ - ನಾಶವಿಲ್ಲದ ಬ್ರಹ್ಮವನ್ನು, ಯಃ - ಯಾವನು, ವೇದಯತೇ ತು-

ತಿಳಿದುಕೊಳ್ಳುವನೋ, ಸರ್ವಜ್ಞಃ - ಎಲ್ಲವನ್ನೂ ಬಲ್ಲ, ಸಃ - ಅವನು, ಸರ್ವಮೇವ - ಎಲ್ಲವನ್ನೂ, ಆವಿವೇಶ - ಪ್ರವೇಶಿಸಿದವನಾಗುವನು.

**ಅರಾ ಇವ ರಥನಾಭೌ ಕಲಾ ಯಸ್ಮಿನ್ ಪ್ರತಿಷ್ಠಿತಾಃ । ತಂ**
**ವೇದ್ಯಂ ಪುರುಷಂ ವೇದ ಯಥಾ ಮಾ ವೋ ಮೃತ್ಯುಃ ಪರಿವ್ಯಥಾ ಇತಿ ॥**

**ಅರ್ಥ** : ರಥನಾಭೌ - ಚಕ್ರದ ಗುಂಬದಲ್ಲಿ, ಅರಾ ಇವ - ಹಾರೆ ಗೋಲುಗಳು ಒಂದಾಗಿರುವಂತೆ, ಯಸ್ಮಿನ್ - ಯಾವನಲ್ಲಿ, ಕಲಾಃ - ಕಲೆಗಳು, ಪ್ರತಿಷ್ಠಿತಾಃ - ನೆಲೆಗೊಂಡಿರುವವೋ, ವೇದ್ಯಂ - ತಿಳಿಯಲು ತಕ್ಕವನಾದ, ತಂ- ಆ, ಪುರುಷಂ - ಪರಮಪುರುಷನನ್ನು, ವೇದ - ಅರಿತುಕೊಳ್ಳುವಿರಿ. ಯಥಾ - ಹೇಗೆ, ವಃ - ನಿಮ್ಮನ್ನು, ಮೃತ್ಯುಃ - ಮೃತ್ಯುರೂಪವಾದ ಸಂಸಾರವು, ಮಾ ಪರಿವ್ಯಥಾಃ ವ್ಯಥೆಗೊಳಿಸಲಾರದೋ (ಹಾಗೆ ತಿಳಿಯುವಿರಿ).

## ಮಾಂಡೂಕ್ಯೋಪನಿಷತ್ತು

**ಓಮಿತ್ಯೇದಕ್ಷರಮಿದಂ ಸರ್ವಂ ತಸ್ಯೋಪವ್ಯಾಖ್ಯಾನಂ**
**ಭೂತಂ ಭವದ್ ಭವಿಷ್ಯದಿತಿ ಸರ್ವಮೋಂಕಾರ ಏವ । ಯಚ್ಚಾ -**
**ನ್ಯತ್ ತ್ರಿಕಾಲಾತೀತಂ ತದಪ್ಯೋಂಕಾರ ಏವ ॥ ೧ ॥**

**ಅರ್ಥ** : ಇದಂ ಸರ್ವಂ - ಇದೆಲ್ಲವೂ, ಓಮಿತ್ಯೇತತ್ - ಓಂ ಎಂಬೀ, ಅಕ್ಷರಮ್ - ಅಕ್ಷರವು. ತಸ್ಯ - ಅದರ, ಉಪವ್ಯಾಖ್ಯಾನಮ್ - ವಿವರಣೆಯಿದು. ಭೂತಂ - ಕಳೆದುಹೋದದ್ದು, ಭವತ್ - ಇದ್ದುಕೊಂಡಿರುವದು, ಭವಿಷ್ಯತ್ - ಮುಂದಿನಕಾಲದಲ್ಲಿರಬಹುದಾದದ್ದು, ಇತಿ - ಹೀಗೆ, ಸರ್ವಂ - ಎಲ್ಲವೂ, ಓಂಕಾರ ಏವ - ಓಂಕಾರವೇ, ಚ- ಮತ್ತು, ಯತ್ - ಯಾವದು, ತ್ರಿಕಾಲಾತೀತಂ - ಮೂರು ಕಾಲವನ್ನೂ ಮೀರಿದೆಯೋ, ತದಪಿ - ಅದೂ ಸಹ, ಓಂಕಾರ ಏವ - ಓಂಕಾರವೇ.

**ಅಮಾತ್ರಶ್ಚತುರ್ಥೋಽವ್ಯವಹಾರ್ಯಃ ಪ್ರಪಂಚೋಪಶಮಃ**
**ಶಿವೋಽದ್ವೈತ ಏವಮೋಂಕಾರ ಆತ್ಮೈವ ಸಂವಿಶತ್ಯಾತ್ಮನಾತ್ಮಾನಂ**
**ಯ ಏವಂ ವೇದ ॥ ॥ ೨ ॥**

**ಅರ್ಥ** : ಅಮಾತ್ರಃ - ಮಾತ್ರೆಗಳಿಲ್ಲದ ,ಚತುರ್ಥಃ - ನಾಲ್ಕನೆಯ, ಅವ್ಯವಹಾರ್ಯಃ - ವ್ಯವಹಾರಗೋಚರವಲ್ಲದ, ಪ್ರಪಂಚೋಪಶಮಃ - ದ್ವೈತ ರಹಿತವಾದ, ಶಿವಃ - ಮಂಗಳವಾದ, ಅದ್ವೈತಃ - ಎರಡನೆಯದಿಲ್ಲದ, ಓಂಕಾರಃ - ಓಂಕಾರವು, ಆತ್ಮೈವ - ಆತ್ಮನೇ, ಯಃ - ಯಾವನು, ಏವಂ - ಈ ರೀತಿಯಾಗಿ ವೇದ - ತಿಳಿಯುವನೋ ಅವನು, ಆತ್ಮಾನಂ - ತನ್ನನ್ನು, ಆತ್ಮನಾ - ತನ್ನಿಂದಲೇ, ಸಂವಿಶತಿ - ಸೇರುತ್ತಾನೆ.

## ಐತರೇಯೋಪನಿಷತ್ತು

**ಏಷ ಬ್ರಹ್ಮ ಏಷ ಇಂದ್ರ ಏಷ ಪ್ರಜಾಪತಿರೇತೇ ಸರ್ವೇ**
**ದೇವಾಃ ಇಮಾನಿ ಪಂಚಮಹಾಭೂತಾನಿ ॥**

**ಅರ್ಥ** : ಏಷಃ - ಇವನೇ, ಬ್ರಹ್ಮ - ಬ್ರಹ್ಮನು, ಏಷಃ - ಇವನೇ, ಇಂದ್ರಃ - ಇಂದ್ರನು, ಏಷಃ - ಇವನೇ, ಪ್ರಜಾಪತಿಃ - ಪ್ರಜಾಪತಿಯು, ಏತೇ ಸರ್ವೇ - ಈ ಎಲ್ಲಾ, ದೇವಾಃ - ದೇವತೆಗಳೂ, ಇಮಾನಿ - ಈ, ಪಂಚಮಹಾಭೂತಾನಿ - ಐದು ಮಹಾಭೂತಗಳೂ, ಏಷಃ- ಇವನೇ (ಆಗಿರುವನು).

**ಸರ್ವಂ ತತ್ಪ್ರಜ್ಞಾನೇತ್ರಂ ಪ್ರಜ್ಞಾನೇ ಪ್ರತಿಷ್ಠಿತಂ ಪ್ರಜ್ಞಾ-**
**ನೇತ್ರೋ ಲೋಕಃ ಪ್ರಜ್ಞಾ ಪ್ರತಿಷ್ಠಾ ಪ್ರಜ್ಞಾನಂ ಬ್ರಹ್ಮ ॥**

**ಅರ್ಥ** : ತತ್ ಸರ್ವಂ - ಅದೆಲ್ಲವೂ, ಪ್ರಜ್ಞಾನೇತ್ರಂ - ಪ್ರಜ್ಞೆಯೇ ಕಣ್ಣಾಗಿ ಉಳ್ಳದ್ದು, ಪ್ರಜ್ಞಾನೇ - ಪ್ರಜ್ಞಾನದಲ್ಲಿ, ಪ್ರತಿಷ್ಠಿತಂ - ಇದ್ದುಕೊಂಡಿರುವದು. ಲೋಕಃ - ಲೋಕವು, ಪ್ರಜ್ಞಾನೇತ್ರಃ - ಪ್ರಜ್ಞಾನವೆಂಬ ಕಣ್ಣುಳ್ಳದ್ದು, ಪ್ರಜ್ಞಾ - ಪ್ರಜ್ಞೆಯೇ, ಪ್ರತಿಷ್ಠಾ - ಎಲ್ಲಕ್ಕೂ ಆಶ್ರಯವು. (ಆದ್ದರಿಂದ) ಪ್ರಜ್ಞಾನಂ - ಪ್ರಜ್ಞಾನವೇ, ಬ್ರಹ್ಮ - ಬ್ರಹ್ಮವು.

## ತೈತ್ತಿರೀಯೋಪನಿಷತ್ತು

**ಅಹಂ ವೃಕ್ಷಸ್ಯ ರೇರಿವಾ । ಕೀರ್ತಿಃ ಪೃಷ್ಠಂ ಗಿರೇರಿವ ।**
**ಊರ್ಧ್ವಪವಿತ್ರೋ ವಾಜಿನೀವ ಸ್ವಮೃತಮಸ್ಮಿ । ದ್ರವಿಣಗ್ಂ ಸವರ್ಚಸಮ್ । ಸುಮೇಧಾ ಅಮೃತೋಕ್ಷಿತಃ । ಇತಿ ತ್ರಿಶಂಕೋ ರ್ವೇದಾನುವಚನಮ್ ॥ ॥೧॥**

**ಅರ್ಥ** : ಅಹಂ - ನಾನು, ವೃಕ್ಷಸ್ಯ - ಸಂಸಾರವೃಕ್ಷದ, ರೇರಿವಾ - ಪ್ರೇರಕನು. (ನನ್ನ) ಕೀರ್ತಿಃ - ಕೀರ್ತಿಯು, ಗಿರೇಃ - ಬೆಟ್ಟದ, ಪೃಷ್ಠಮಿವ - ಶಿಖರದಂತೆ ಇದೆ. ಊರ್ಧ್ವಪವಿತ್ರಃ - ಕಾರಣವಾಗಿರುವ ಬ್ರಹ್ಮವು, ವಾಜಿನೀವ. ಸೂರ್ಯನಂತೆ (ನನ್ನಲ್ಲಿದೆ.) ಸು ಅಮೃತಮ್ - ಶೋಭನವಾದ ಆತ್ಮತತ್ತ್ವವು, ಅಸ್ಮಿ - ನಾನಾಗಿರುವೆನು. ಸವರ್ಚಸಮ್ - ಪ್ರಕಾಶದಿಂದ ಕೂಡಿರುವ, ದ್ರವಿಣಂ - ಧನವು (ನಾನಾಗಿದ್ದೇನೆ). ಸುಮೇಧಾಃ -ಮಂಗಳಕರವಾದ ಮೇಧಾಶಕ್ತಿಯು (ನನ್ನಲ್ಲಿದೆ), ಅಹಂ - ನಾನು, ಅಮೃತೋಕ್ಷಿತಃ - ಅಮೃತದಿಂದ ಚಿಮುಕಿಸಲ್ಪಟ್ಟವನು. ಇತಿ - ಹೀಗೆಂದು ತ್ರಿಶಂಕೋಃ - ತ್ರಿಶಂಕುವೆಂಬ ಋಷಿಯ, ವೇದಾನುವಚನಮ್ - ವೇದಾನುಸಾರಿಯಾದ ಅನುಭವದ ಮಾತಾಗಿದೆ.

**ಬ್ರಹ್ಮವಿದಾಪ್ನೋತಿ ಪರಮ್ । ತದೇಷಾಽಭ್ಯುಕ್ತಾ । ಸತ್ಯಂ ಜ್ಞಾನಮನಂತಂ ಬ್ರಹ್ಮ । ಯೋ ವೇದ ನಿಹಿತಂ ಗುಹಾಯಾಂ ಪರಮೇ ವ್ಯೋಮನ್ । ಸೋಽಶ್ನುತೇ ಸರ್ವಾನ್ ಕಾಮಾನ್ ಸಹ । ಬ್ರಹ್ಮಣಾ ವಿಪಶ್ಚಿತೇತಿ ॥ ॥ ೨ ॥**

**ಅರ್ಥ** : ಬ್ರಹ್ಮವಿತ್ - ಬ್ರಹ್ಮಜ್ಞಾನಿಯು, ಪರಂ - ಹೆಚ್ಚಿನ (ಮೋಕ್ಷವನ್ನು), ಆಪ್ನೋತಿ - ಪಡೆಯುತ್ತಾನೆ, ತತ್ - ಅದು, ಏಷಾ - ಈ ಋಕ್ಕಿನಿಂದ, ಅಭ್ಯುಕ್ತಾ - ಹೇಳಲ್ಪಟ್ಟಿದೆ. ಬ್ರಹ್ಮ - ಬ್ರಹ್ಮವು, ಸತ್ಯಂ - ಸತ್ಯವೂ, ಜ್ಞಾನಂ - ಜ್ಞಾನಸ್ವರೂಪವೂ, ಅನಂತಂ - ತುದಿಯಿಲ್ಲದ್ದೂ ಆಗಿರುವದು. ಗುಹಾಯಾಂ - ಹೃದಯದ ಗುಹೆಯಲ್ಲಿ, ಪರಮೇ - ಪರಮವಾದ, ವ್ಯೋಮನ್ - ಆಕಾಶದಲ್ಲಿ, ನಿಹಿತಂ - (ಬ್ರಹ್ಮವು) ಇರುವದನ್ನು, ಯಃ - ಯಾವನು, ವೇದ - ಅರಿತುಕೊಂಡಿರುವನೋ, ಸಃ - ಅವನು, ಸರ್ವಾನ್ - ಎಲ್ಲಾ, ಕಾಮಾನ್ - ಕಾಮಗಳನ್ನೂ, ಸಹ - ಬ್ರಹ್ಮದೊಡನೆ, ಅಶ್ನುತೇ - ಪಡೆದುಕೊಳ್ಳುವನು.

**ಆನಂದೋ ಬ್ರಹ್ಮೇತಿ ವ್ಯಜಾನಾತ್ । ಆನಂದಾದ್ಧ್ಯೇವ ಖಲ್ವಿಮಾನಿ ಭೂತಾನಿ ಜಾಯಂತೇ । ಆನಂದೇನ ಜಾತಾನಿ ಜೀವನ್ತಿ । ಆನಂದಂ ಪ್ರಯಂತ್ಯಭಿಸಂವಿಶನ್ತೀತಿ । ಸೈಷಾ ಭಾರ್ಗವೀ ವಾರುಣೀ ವಿದ್ಯಾ ॥ ೩ ॥**

**ಅರ್ಥ** : (ಭೃಗುವೆಂಬಾತನು) ಆನಂದಃ - ಆನಂದವು, ಬ್ರಹ್ಮ ಇತಿ - ಬ್ರಹ್ಮವೆಂದು, ವ್ಯಜಾನಾತ್ - ಅರಿತುಕೊಂಡನು. ಆನಂದಾದ್ ಹಿ ಖಲು - ಆನಂದದಿಂದಲೇ ಅಲ್ಲವೆ, ಇಮಾನಿ - ಈ, ಭೂತಾನಿ - ಪ್ರಾಣಿಗಳು, ಜಾಯಂತೇ - ಹುಟ್ಟುತ್ತವೆ. ಜಾತಾನಿ - ಹುಟ್ಟಿದವುಗಳು, ಆನಂದೇನ - ಆನಂದದಿಂದ, ಜೀವಂತಿ - ಬದುಕಿರುತ್ತವೆ. ಆನಂದಂ - ಆನಂದವನ್ನು ಕುರಿತು, ಪ್ರಯಂತಿ - ಹೋಗುತ್ತವೆ. ಅಭಿಸಂವಿಶಂತಿ - ಅದರಲ್ಲೇ ಒಂದಾಗುತ್ತವೆ. ಇತಿ - ಹೀಗೆಂಬುದೇ ಅವನ ತಿಳಿವಳಿಕೆ. ಸಾ ಏಷಾ - ಆ ಇದೇ, ಭಾರ್ಗವೀ - ಭೃಗುವಿನಿಂದ ತಿಳಿಯಲ್ಪಟ್ಟ, ವಾರುಣೀ - ವರುಣನಿಂದ ಉಪದೇಶಿಸಲ್ಪಟ್ಟ, ವಿದ್ಯಾ - ವಿದ್ಯೆಯು.

## ಛಾಂದೋಗ್ಯೋಪನಿಷತ್ತು

**ಮನೋಮಯಃ ಪ್ರಾಣಶರೀರೋ ಭಾರೂಪಃ ಸತ್ಯಸಂಕಲ್ಪ ಆಕಾಶಾತ್ಮಾ ಸರ್ವಕರ್ಮಾ ಸರ್ವಕಾಮಃ ಸರ್ವಗಂಧಃ ಸರ್ವರಸಃ ಸರ್ವಮಿದಮಭ್ಯಾತ್ತೋಽವಾಕ್ಯನಾದರಃ ಏಷ ಮ ಆತ್ಮಾ ॥೧॥**

**ಅರ್ಥ** : ಮನೋಮಯಃ - ಮನಸ್ಸಿನಲ್ಲಿದ್ದುಕೊಂಡು ತೋರುವವನು ಪ್ರಾಣಶರೀರಃ - ಪ್ರಾಣವೆಂಬ ಶರೀರವುಳ್ಳವನು, ಭಾರೂಪಃ - ಬೆಳಕಿನ ಆಕಾರನು, ಸತ್ಯಸಂಕಲ್ಪಃ - ಹುಸಿಯಲ್ಲದ ಸಂಕಲ್ಪವುಳ್ಳವನು. ಆಕಾಶಾತ್ಮಾ - ಆಕಾಶದಂತೆ ಸ್ವರೂಪವುಳ್ಳವನು. ಸರ್ವಕರ್ಮಾ - ಎಲ್ಲಾ ಕರ್ಮಗಳುಳ್ಳವನು, ಸರ್ವಕಾಮಃ - ಎಲ್ಲಾ ಆಶೆಗಳನ್ನೂ ಪಡೆದುಕೊಂಡವನು, ಸರ್ವಗಂಧಃ - ಎಲ್ಲಾ ಗಂಧಗಳುಳ್ಳವನು, ಸರ್ವರಸಃ - ಎಲ್ಲಾ ರಸಗಳುಳ್ಳವನು, ಇದಂ ಸರ್ವಂ - ಇದೆಲ್ಲವನ್ನೂ ಅಭ್ಯಾತ್ತಃ - ವ್ಯಾಪಿಸಿಕೊಂಡಿರುವವನು, ಅವಾಕೀ - ಮಾತಿಗೆ ನಿಲುಕದವನು, ಅನಾದರಃ - ಸಂಭ್ರಮವಿಲ್ಲದವನು, ಏಷಃ - ಈ ಗುಣಗಳಿಂದ ಕೂಡಿದವನೇ, ಮೇ - ನನ್ನ, ಆತ್ಮಾ - ಆತ್ಮನು.

**ಸ ಯ ಏಷೋಽಣಿಮೈತದಾತ್ಮ್ಯಮಿದಂ ಸರ್ವಂ ತತ್ಸತ್ಯಂ ಸ ಆತ್ಮಾ ತತ್ತ್ವಮಸಿ ಶ್ವೇತಕೇತೋ ಇತಿ ತದ್ಧಾಸ್ಯ ವಿಜಜ್ಞೌ ॥೨॥**

**ಅರ್ಥ** : ಶ್ವೇತಕೇತೋ - ಎಲೈ ಶ್ವೇತಕೇತುವೆ, ಯಃ - ಯಾವ, ಸ ಏಷಃ - ಆ ಈ, ಅಣಿಮಾ - ಸೂಕ್ಷ್ಮನಾದ ಆತ್ಮನು. ಇದಂ ಸರ್ವಂ - ಇದೆಲ್ಲವೂ, ಐತದಾತ್ಮ್ಯಂ - ಈತನನ್ನೇ ಆತ್ಮನಾಗುಳ್ಳದ್ದು, ತತ್ಸತ್ಯಂ - ಅದು ಸತ್ಯವು, ಸ ಆತ್ಮಾ - ಅವನು ಆತ್ಮನು, ತತ್ - ಅದು, ತ್ವಮ್ - ನೀನು, ಅಸಿ - ಆಗಿದ್ದೀಯೆ, ಇತಿ - ಹೀಗೆಂದು ತಿಳಿಸಲಾಗಿ, ತತ್ ಹ - ಅದನ್ನು, ಅಸ್ಯ - ಇವನು, ವಿಜಜ್ಞೌ - ಅರಿತುಕೊಂಡನು.

## ಬೃಹದಾರಣ್ಯಕೋಪನಿಷತ್ತು

**ತದೇತದ್ ಬ್ರಹ್ಮ ಅಪೂರ್ವಮನಪರಮನಂತರಮಬಾಹ್ಯ-**
**ಮಯಮಾತ್ಮಾ ಬ್ರಹ್ಮ ಸರ್ವಾನುಭೂರಿತ್ಯನುಶಾಸನಮ್ ॥೧॥**

**ಅರ್ಥ** : ತದೇತತ್ - ಆ ಇದು, ಬ್ರಹ್ಮ - ಬ್ರಹ್ಮವು, ಅಪೂರ್ವಂ - ಹಿಂದಿಲ್ಲದ್ದು, ಅನಪರಮ್ - ಮುಂದಿಲ್ಲದ್ದು, ಅನಂತರಂ - ನಡುವಿಲ್ಲದ್ದು, ಅಬಾಹ್ಯಮ್ - ಹೊರಗಿಲ್ಲದ್ದು, ಅಯಮಾತ್ಮಾ - ಈ ಆತ್ಮನೇ, ಸರ್ವಾನುಭೂಃ - ಎಲ್ಲರ ಅನುಭವಸ್ವರೂಪನಾದ, ಬ್ರಹ್ಮ - ಬ್ರಹ್ಮವು, ಇತಿ - ಹೀಗೆಂದು, ಅನುಶಾಸನಮ್ - ಅನುಶಾಸನವು.

**ಸ ವಾ ಏಷ ಮಹಾನಜ ಆತ್ಮಾಽಜರೋಽಮರೋಽಮೃತೋಽಭಯೋ ಬ್ರಹ್ಮಾಽಭಯಂ ವೈ ಬ್ರಹ್ಮಾಽಭಯಂ ಹಿ ವೈ ಬ್ರಹ್ಮ ಭವತಿ ಯ ಏವಂ ವೇದ ॥೨॥**

**ಅರ್ಥ** : ಸ ವಾ - ಅವನೇ, ಏಷಃ - ಈ, ಮಹಾನ್ - ದೊಡ್ಡವನಾದ, ಅಜಃ - ಹುಟ್ಟಿಲ್ಲದ, ಆತ್ಮಾ - ಆತ್ಮನು. ಅಜರಃ - ಮುಪ್ಪಿಲ್ಲದವನು, ಅಮರಃ - ಮರಣವಿಲ್ಲದವನು, ಅಮೃತಃ - ಸಾವಿಲ್ಲದವನು, ಅಭಯಃ - ಹೆದರಿಕೆಯಿಲ್ಲದವನೂ ಆದ, ಬ್ರಹ್ಮಾ - ಬ್ರಹ್ಮನು, ಬ್ರಹ್ಮ - ಬ್ರಹ್ಮವು, ಅಭಯಂ ವೈ - ಅಭಯವಷ್ಟೆ ! ಯಃ - ಯಾವನು, ಏವಂ - ಈ ರೀತಿಯಾಗಿ, ವೇದ - ಅರಿಯುವನೋ ಅವನು, ಅಭಯಂ - ಭಯರಹಿತವಾದ, ಬ್ರಹ್ಮ - ಬ್ರಹ್ಮವು, ಭವತಿ ಹಿ - ಆಗುತ್ತಾನೆ.

**ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣಮುದಚ್ಯತೇ ।**
**ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ ॥**

**ಅರ್ಥ** : ಅದಃ - ಅದು, ಪೂರ್ಣಂ - ಪೂರ್ಣವು. ಇದಂ - ಇದು, ಪೂರ್ಣಂ - ಪೂರ್ಣವು, ಪೂರ್ಣಾತ್ - ಪೂರ್ಣದಿಂದಲೇ, ಪೂರ್ಣಮ್ - ಪೂರ್ಣವು, ಉದಚ್ಯತೇ - ಹೊರಬರುತ್ತದೆ. ಪೂರ್ಣಸ್ಯ - ಪೂರ್ಣದ, ಪೂರ್ಣಂ - ಪೂರ್ಣತ್ವವನ್ನು, ಆದಾಯ - ತೆಗೆದುಕೊಂಡ ಅನಂತರವೂ, ಪೂರ್ಣಮೇವ - ಪೂರ್ಣವೇ, ಅವಶಿಷ್ಯತೇ - ಉಳಿದುಕೊಳ್ಳುತ್ತದೆ.

ಓಂ ಶಾಂತಿಃ ಶಾಂತಿಃ ಶಾಂತಿಃ

## ಗಾಯತ್ರೀರಾಮಾಯಣ

ಶ್ರೀಮದ್ರಾಮಾಯಣವೆಂಬ ಮಹಾಕಾವ್ಯವನ್ನು ಸಂಸ್ಕೃತಭಾಷೆಯಲ್ಲಿ ಆದಿಕವಿಗಳಾದ ವಾಲ್ಮೀಕಿಮಹರ್ಷಿಗಳು ಬರೆದಿದ್ದಾರೆ. ಇದರಲ್ಲಿ ೨೪ಸಾವಿರ ಶ್ಲೋಕಗಳಿವೆ. ಪ್ರತಿಯೊಂದು ಸಾವಿರದ ಕೊನೆಯ ಶ್ಲೋಕವು ಪೂರೈಸಿ ಮುಂದಿನ ಸಾವಿರದ ಮೊದಲನೆಯ ಶ್ಲೋಕವು ಆರಂಭವಾಗುವಾಗ ಅದರ ಮೊದಲನೆಯ ಅಕ್ಷರವು ಕ್ರಮವಾಗಿ ಗಾಯತ್ರೀಮಂತ್ರದ ಒಂದೊಂದು ಅಕ್ಷರವಾಗಿರುತ್ತದೆ. ಆದ್ದರಿಂದ ೨೪ ಸಾವಿರ ಶ್ಲೋಕಗಳಲ್ಲಿ ಪ್ರತಿಯೊಂದು ಸಾವಿರದ ಮೊದಲನೆಯ ಶ್ಲೋಕವನ್ನು ಜೋಡಿಸಿ ಈ ಗಾಯತ್ರೀರಾಮಾಯಣವನ್ನು ಬಲ್ಲವರು ರಚಿಸಿದ್ದಾರೆ. ಈ ೨೪ ಶ್ಲೋಕಗಳ ಪ್ರಾರಂಭದ ಅಕ್ಷರಗಳನ್ನು ಒಟ್ಟಿಗೆ ಕೂಡಿಸಿದರೆ ಗಾಯತ್ರೀಮಂತ್ರವಾಗುತ್ತದೆ. ಆದ್ದರಿಂದ ಶ್ರೀಮದ್ರಾಮಾಯಣ ಪಾರಾಯಣ ವನ್ನು ಮಾಡಿದರೆ ಗಾಯತ್ರೀಪುರಶ್ಚರಣದ ಫಲವು ಲಭಿಸುವದೆಂದು ಹಿರಿಯರು ತಿಳಿಸಿದ್ದಾರೆ.

ಗಾಯತ್ರೀಮಂತ್ರವು ಹೀಗಿದೆ :

**ತ ತ್ಸ ವಿ ತು ರ್ವ ರೇ ಣ್ಯಂ ( ಣಿ - ಯಂ ) ಭ ಗೋ ೯ ದೇ ವ ಸ್ಯ ಧೀ ಮ ಹಿ । ಧಿ ಯೋ ಯೋ ನಃ ಪ್ರ ಚೋ ದ ಯಾ ತ್ ॥**

(ಒಟ್ಟು ೨೪ ಅಕ್ಷರಗಳು)

ಸೂಚನೆ : (ಣ್ಯಂ - ಎಂಬಲ್ಲಿ, ನಿ, ಯಂ - ಎಂದು ಎರಡುಬೇರೆಬೇರೆಯ ಅಕ್ಷರಗಳು, ತ್ ಎಂಬ ಅರ್ಧಾಕ್ಷರವು ಲೆಕ್ಕಕ್ಕಿಲ್ಲ.)

ಈಗ ಗಾಯತ್ರೀರಾಮಾಯಣವನ್ನು ಇಲ್ಲಿ ಕೊಡಲಾಗಿದೆ.

" ತ "

**ತಪಃಸ್ವಾಧ್ಯಾಯನಿರತಂ ತಪಸ್ವೀ ವಾಗ್ವಿದಾಂ ವರಮ್ ।**
**ನಾರದಂ ಪರಿಪಪ್ರಚ್ಛ ವಾಲ್ಮೀಕಿರ್ಮುನಿಪುಂಗವಮ್ ॥೧॥**

**ಅರ್ಥ** : ತಪಸ್ವೀ - ತಪೋನಿಷ್ಠನಾದ, ವಾಲ್ಮೀಕಿಃ - ವಾಲ್ಮೀಕಿಯು, ತಪಃಸ್ವಾಧ್ಯಾಯನಿರತಂ - ತಪಸ್ಸು, ವೇದಾಧ್ಯಯನಗಳಲ್ಲಿ ನಿರತನಾದ, ವಾಗ್ವಿದಾಂ - ಮಾತುಬಲ್ಲವರಲ್ಲಿ, ವರಂ - ಶ್ರೇಷ್ಠನಾದ, ಮುನಿಪುಂಗವಮ್ - ಋಷಿಗಳಲ್ಲಿ ಉತ್ತಮನಾದ, ನಾರದಂ - ನಾರದನನ್ನು, ಪರಿಪಪ್ರಚ್ಛ - ಕೇಳಿದನು.

"ಸ "

**ಸ ಹತ್ವಾ ರಾಕ್ಷಸಾನ್ ಸರ್ವಾನ್ ಯಜ್ಞಘ್ನಾನ್ ರಘುನಂದನಃ ।**
**ಋಷಿಭಿಃ ಪೂಜಿತಃ ತತ್ರ ಯಥೇಂದ್ರೋ ವಿಜಯೇ ಪುರಾ ॥೨॥**

**ಅರ್ಥ** : ತತ್ರ - ಅಲ್ಲಿ, ಸಃ - ಆ, ರಘುನಂದನಃ - ರಾಮನು, ಯಜ್ಞಘ್ನಾನ್ - ಯಜ್ಞಕ್ಕೆ ಅಡ್ಡಿ ಮಾಡುತ್ತಿದ್ದ, ಸರ್ವಾನ್ - ಎಲ್ಲಾ, ರಾಕ್ಷಸಾನ್ - ರಾಕ್ಷಸರನ್ನು, ಹತ್ವಾ - ಕೊಂದುಹಾಕಿ, ಪುರಾ - ಹಿಂದೆ, ಯಥಾ - ಹೇಗೆ, ಇಂದ್ರಃ - ದೇವೇಂದ್ರನು, ವಿಜಯೇ - ಗೆದ್ದಾಗ, ಋಷಿಭಿಃ - ಮುನಿಗಳಿಂದ, ಸಮ್ಯಕ್ ಪೂಜಿತಃ - ಚೆನ್ನಾಗಿ ಗೌರವಿಸಲ್ಪಟ್ಟನೋ ಹಾಗೆ ಪೂಜಿಸಲ್ಪಟ್ಟನು.

" ವಿ "

**ವಿಶ್ವಾಮಿತ್ರಸ್ತು ಧರ್ಮಾತ್ಮಾ ಶ್ರುತ್ವಾ ಜನಕಭಾಷಿತಮ್ ।**
**ವತ್ಸ ರಾಮ ಧನುಃ ಪಶ್ಯ ಇತಿ ರಾಘವಮಬ್ರವೀತ್ ॥೩॥**

**ಅರ್ಥ** : ಧರ್ಮಾತ್ಮಾ - ಧರ್ಮತತ್ಪರನಾದ, ವಿಶ್ವಾಮಿತ್ರಸ್ತು - ವಿಶ್ವಾಮಿತ್ರನಾದರೋ, ಜನಕಭಾಷಿತಂ - ಜನಕನು ಹೇಳಿದ ಮಾತನ್ನು, ಶ್ರುತ್ವಾ - ಕೇಳಿ,

ವತ್ಸ - ಮಗು, ರಾಮ - ಎಲೈ ರಾಮನೆ, ಧನುಃ - ಶೈವಧನುಸ್ಸನ್ನು (ಬಿಲ್ಲನ್ನು), ಪಶ್ಯ - ನೋಡು, ಇತಿ - ಹೀಗೆಂದು, ರಾಘವಮ್ - ರಾಮನನ್ನು ಕುರಿತು, ಅಬ್ರವೀತ್ - ಹೇಳಿದನು.

" ತು "

**ತುಷ್ಟಾವಾಸ್ಯ ತದಾ ವಂಶಂ ಪ್ರವಿಶ್ಯ ಚ ವಿಶಾಂ ಪತೇಃ ।**
**ಶಯನೀಯಂ ನರೇಂದ್ರಸ್ಯ ತದಾಸಾದ್ಯ ವ್ಯತಿಷ್ಠತ ॥ ೪ ॥**

**ಅರ್ಥ** : ನರೇಂದ್ರಸ್ಯ - ರಾಜನ, ತತ್ - ಆ, ಶಯನೀಯಂ - ಶಯನಗೃಹವನ್ನು, ಆಸಾದ್ಯ - ಸಮೀಪಿಸಿ, ಪ್ರವಿಶ್ಯ - ಪ್ರವೇಶಿಸಿ, ವ್ಯತಿಷ್ಠತ - (ಸುಮಂತ್ರನು) ನಿಂತುಕೊಂಡನು. ಚ - ಮತ್ತು, ತದಾ - ಆಗ, ವಿಶಾಂ ಪತೇಃ - ಚಕ್ರವರ್ತಿಯಾದ, ಅಸ್ಯ - ಇವನ, ವಂಶಂ - ವಂಶವನ್ನು (ಸೂರ್ಯಕುಲವನ್ನು) ತುಷ್ಟಾವ - ಸ್ತೋತ್ರಮಾಡಿದನು.

" ವ "

**ವನವಾಸಂ ಹಿ ಸಂಖ್ಯಾಯ ವಾಸಾಂಸ್ಯಾಭರಣಾನಿ ಚ ।**
**ಭರ್ತಾರಮನುಗಚ್ಛನ್ತ್ಯೈ ಸೀತಾಯೈ ಶ್ವಶುರೋ ದದೌ ॥ ೫ ॥**

**ಅರ್ಥ** : ಶ್ವಶುರಃ - ಮಾವನಾದ (ದಶರಥನು) ಭರ್ತಾರಂ - ಗಂಡನನ್ನು, ಅನುಗಚ್ಛಂತ್ಯೈ - ಅನುಸರಿಸಿಹೋಗುತ್ತಿರುವ, ಸೀತಾಯೈ - ಸೀತಾದೇವಿಗೆ, ವನವಾಸಂ - ಕಾಡಿನಲ್ಲಿ ವಾಸಮಾಡುವಷ್ಟು (ವರ್ಷಗಳನ್ನು), ಸಂಖ್ಯಾಯ ಹಿ-ಎಣಿಸಿ, (ಅದಕ್ಕೆ ಸಾಕಷ್ಟು), ವಾಸಾಂಸಿ - ಬಟ್ಟೆಗಳನ್ನು, ಚ- ಮತ್ತು, ಆಭರಣಾನಿ - ಒಡವೆಗಳನ್ನೂ, ದದೌ - ಕೊಟ್ಟನು.

" ರೇ "

**ರಾಜಾ ಸತ್ಯಂ ಚ ಧರ್ಮಶ್ಚ ರಾಜಾ ಕುಲವತಾಂ ಕುಲಮ್ ।**
**ರಾಜಾ ಮಾತಾ ಪಿತಾ ಚೈವ ರಾಜಾ ಹಿತಕರೋ ನೃಣಾಮ್ ॥ ೬ ॥**

**ಅರ್ಥ** : ರಾಜಾ - ರಾಜನು, ಸತ್ಯಂ - ಸತ್ಯವು, ಚ - ಮತ್ತು, ಧರ್ಮಃ - ಧರ್ಮವು. ಕುಲವತಾಂ - ಸತ್ಕುಲವಂತರಿಗೆ, ಕುಲಂ - ವಂಶವು (ರಾಜನೇ), ರಾಜಾ

- ರಾಜನು, ನೃಣಾಮ್ - ಮನುಷ್ಯರಿಗೆ, ಮಾತಾ - ತಾಯಿಯು, ಪಿತಾ - ತಂದೆಯು, ಚ - ಮತ್ತು, ಹಿತಕರಃ - ಹಿತವನ್ನುಂಟುಮಾಡುವವನು.

" ನಿ "

**ನಿರೀಕ್ಷ್ಯ ಸ ಮುಹೂರ್ತಂ ತು ದದರ್ಶ ಭರತೋ ಗುರುಮ್ ।**
**ಉಟಜೇ ರಾಮಮಾಸೀನಂ ಜಟಾಮಂಡಲಧಾರಿಣಮ್ ॥ ೭ ॥**

**ಅರ್ಥ** : ಸಃ - ಆ, ಭರತಃ ತು- ಭರತನಾದರೋ, ಮುಹೂರ್ತಂ - ಸುಸಮಯವನ್ನು, ನಿರೀಕ್ಷ್ಯ - ಕಾದು, ಉಟಜೇ - ಕುಟೀರದಲ್ಲಿ, ಆಸೀನಂ - ಕುಳಿತಿರುವ, ಜಟಾಮಂಡಲಧಾರಿಣಮ್ - ಜಟೆಗಳ ಸಮೂಹವನ್ನು ಧರಿಸಿರುವ, ಗುರುಮ್ - ಪೂಜ್ಯನಾದ, ರಾಮಂ - ರಾಮನನ್ನು, ದದರ್ಶ - ನೋಡಿದನು.

" ಯ "

**ಯದಿ ಬುದ್ಧಿಃ ಕೃತಾ ದ್ರಷ್ಟುಮಗಸ್ತ್ಯಂ ತಂ ಮಹಾಮುನಿಮ್ ।**
**ಅದ್ಯೈವ ಗಮನೇ ಬುದ್ಧಿಂ ರೋಚಯಸ್ವ ಮಹಾಯಶಃ ॥ ೮॥**

**ಅರ್ಥ** : ಮಹಾಯಶಃ - ಹೆಚ್ಚಿನ ಕೀರ್ತಿಶಾಲಿಯಾದ (ರಾಮನೆ), ಮಹಾಮುನಿಂ - ಮಹಾತಪಸ್ವಿಯಾದ, ತಂ - ಆ, ಅಗಸ್ತ್ಯಂ - ಅಗಸ್ತ್ಯನನ್ನು, ದ್ರಷ್ಟುಂ - ನೋಡಲು, ಯದಿ - ಒಂದು ವೇಳೆ, ಬುದ್ಧಿಃ - ಬುದ್ಧಿಯು, ಕೃತಾ - ಮಾಡಲ್ಪಟ್ಟಿದ್ದರೆ (ಅಗಸ್ತ್ಯನನ್ನು ನೋಡಬೇಕೆಂದಿದ್ದರೆ), ಅದ್ಯೈವ - ಈಗಲೇ, ಗಮನೇ - ಹೊರಡುವದಕ್ಕೆ, ಬುದ್ಧಿಂ - ಬುದ್ದಿಯನ್ನು, ರೋಚಯಸ್ವ - ರುಚಿಸುವಂತೆ ಮಾಡು -(ಮನಸ್ಸುಮಾಡು)

" ಭ "

**ಭರತಸ್ಯಾರ್ಯಪುತ್ರಸ್ಯ ಶ್ವಶ್ರೂಣಾಂ ಚ ಮಮ ಪ್ರಭೋ ।**
**ಮೃಗರೂಪಮಿದಂ ವ್ಯಕ್ತಂ ವಿಸ್ಮಯಂ ಜನಯಿಷ್ಯತಿ ॥ ೯ ॥**

**ಅರ್ಥ** : ಆರ್ಯಪುತ್ರಸ್ಯ - ಆರ್ಯಪುತ್ರನಾದ, ಭರತಸ್ಯ - ಭರತನಿಗೆ, ಚ - ಮತ್ತು, ಶ್ವಶ್ರೂಣಾಂ - ಅತ್ತೆಯವರಿಗೆ, ಮಮ - ನನಗೆಕೂಡ, ಪ್ರಭೋ - ಎಲೈ

ರಾಮನೆ, ಇದಂ - ಈ, ಮೃಗರೂಪಂ - ಜಿಂಕೆಯ ರೂಪವು, ವ್ಯಕ್ತಂ - ಸ್ಪಷ್ಟವಾಗಿ, ವಿಸ್ಮಯಂ - ಆಶ್ಚರ್ಯವನ್ನು, ಜನಯಿಷ್ಯತಿ - ಉಂಟುಮಾಡಲಿದೆ.

" ಗ "

**ಗಚ್ಛ ಶೀಘ್ರಮಿತೋ ರಾಮ ಸುಗ್ರೀವಂ ತಂ ಮಹಾಬಲಮ್ ।**
**ವಯಸ್ಯಂ ತಂ ಕುರು ಕ್ಷಿಪ್ರಂ ಇತೋ ಗತ್ವಾದ್ಯ ರಾಘವ ॥೧೦॥**

**ಅರ್ಥ** : ರಾಘವ - ರಘುವಂಶೋತ್ಪನ್ನನಾದ, ರಾಮ - ಎಲೈ ರಾಮನೆ, ಇತಃ - ಇಲ್ಲಿಂದ, ಶೀಘ್ರಂ - ಜಾಗ್ರತೆಯಾಗಿ, ಗಚ್ಛ - ಹೊರಡು. ಇತಃ -ಇಲ್ಲಿಂದ, ಗತ್ವಾ - ಹೋಗಿ, ಮಹಾಬಲಂ - ಮಹಾಬಲಶಾಲಿಯಾದ. ತಂ - ಆ, ಸುಗ್ರೀವಂ - ಸುಗ್ರೀವನನ್ನು, ವಯಸ್ಯಂ - ಸ್ನೇಹಿತನನ್ನಾಗಿ, ಕುರು - ಮಾಡಿಕೊ.

" ದೇ "

**ದೇಶಕಾಲೌ ಭಜಸ್ವಾದ್ಯ ಕ್ಷಮಮಾಣಃ ಪ್ರಿಯಾಪ್ರಿಯೇ ।**
**ಸುಖದುಃಖಸಹಃ ಕಾಲೇ ಸುಗ್ರೀವವಶಗೋ ಭವ ॥೧೧॥**

**ಅರ್ಥ** : ಪ್ರಿಯಾಪ್ರಿಯೇ - ಇಷ್ಟಾನಿಷ್ಟಗಳನ್ನು, ಕ್ಷಮಮಾಣಃ - ತಡೆದುಕೊಳ್ಳುವವನಾಗಿ, ದೇಶಕಾಲೌ - ದೇಶಕಾಲಗಳನ್ನು (ಅರಿತು), ಭಜಸ್ವ- (ಸುಗ್ರೀವನನ್ನು) ಸೇವಿಸು. ಕಾಲೇ - ಸಮಯದಲ್ಲಿ, ಸುಖದುಃಖಸಹಃ - ಸುಖದುಃಖಗಳನ್ನು ಸಹಿಸಿಕೊಂಡು, ಸುಗ್ರೀವವಶಗಃ - ಸುಗ್ರೀವನಿಗೆ ಅಧೀನನಾಗಿ, ಭವ -ಇದ್ದುಕೊಂಡಿರು.

" ವ "

**ವಂದ್ಯಾಸ್ತೇ ತು ತಪಸ್ಸಿದ್ಧಾಸ್ತಪಸಾ ವೀತಕಲ್ಮಷಾಃ ।**
**ಪ್ರಷ್ಟವ್ಯಾ ಚಾಪಿ ಸೀತಾಯಾಃ ಪ್ರವೃತ್ತಿರ್ವಿನಯಾನ್ವಿತೈಃ ॥೧೨॥**

**ಅರ್ಥ** : ತಪಸಾ - ತಪಸ್ಸಿನಿಂದ, ವೀತಕಲ್ಮಷಾಃ - ಹೋಗಲಾಡಿಸಲ್ಪಟ್ಟ ದೋಷವುಳ್ಳ, ತಪಸ್ಸಿದ್ಧಾಃ - ತಪಸ್ಸಿನಿಂದ ಸಿದ್ಧಿಗಳನ್ನು ಪಡೆದುಕೊಂಡಿರುವ, ತೇ ತು - ಅವರಾದರೋ, ವಂದ್ಯಾಃ - ನಮಸ್ಕರಿಸಲ್ಪಡಬೇಕು. ವಿನಯಾನ್ವಿತೈಃ -

ವಿನಯದಿಂದ ಕೂಡಿದ ನಿಮ್ಮಗಳಿಂದ ಸೀತಾಯಾಃ - ಸೀತಾದೇವಿಯ, ಪ್ರವೃತ್ತಿಃ - ಮಾರ್ಗವು, ಪ್ರಷ್ಟವ್ಯಾ - ಕೇಳಲ್ಪಡಬೇಕು.

" ಸ"

**ಸ ನಿರ್ಜಿತ್ಯ ಪುರೀಂ ಶ್ರೇಷ್ಠಾಂ ಲಂಕಾಂ ತಾಂ ಕಾಮರೂಪಿಣೀಮ್ ।**
**ವಿಕ್ರಮೇಣ ಮಹಾತೇಜಾ ಹನೂಮಾನ್ ಕಪಿಸತ್ತಮಃ ॥ ೧೩ ॥**

**ಅರ್ಥ** : ಕಾಮರೂಪಿಣೀಂ - ಇಚ್ಛಾರೂಪವುಳ್ಳ, ಶ್ರೇಷ್ಠಾಂ - ಶ್ರೇಷ್ಠಳಾದ, ತಾಂ - ಆ, ಲಂಕಾಂ ಪುರೀಂ - ಲಂಕಾಪಟ್ಟಣದ ದೇವತೆಯನ್ನು, ಮಹಾತೇಜಾಃ - ಮಹಾತೇಜಸ್ವಿಯಾದ, ಕಪಿಸತ್ತಮಃ - ಕಪಿಶ್ರೇಷ್ಠನಾದ, ಸಃ - ಆ, ಹನುಮಾನ್ - ಹನುಮಂತನು, ವಿಕ್ರಮೇಣ - ಪರಾಕ್ರಮದಿಂದ, ನಿರ್ಜಿತ್ಯ - ಗೆದ್ದು (ಪ್ರವೇಶಿಸಿದನು)

" ಧಿ "

**ಧನ್ಯಾ ದೇವಾಸ್ಸಗಂಧರ್ವಾಃ ಸಿದ್ಧಾಶ್ಚ ಪರಮರ್ಷಯಃ ।**
**ಮಮ ಪಶ್ಯಂತಿ ಯೇ ನಾಥಂ ರಾಮಂ ರಾಜೀವಲೋಚನಮ್ ॥ ೧೪ ॥**

**ಅರ್ಥ** : ಯೇ - ಯಾರು, ಮಮ - ನನ್ನ, ನಾಥಂ - ಒಡೆಯನಾದ, ರಾಜೀವಲೋಚನಮ್ - ಕಮಲದಂತೆ ಕಣ್ಣುಗಳುಳ್ಳ, ರಾಮಂ - ರಾಮನನ್ನು, ಪಶ್ಯಂತಿ - ನೋಡುತ್ತಿರುವರೋ ಅಂಥ ಸಗಂಧರ್ವಾಃ - ಗಂಧರ್ವರಿಂದ ಕೂಡಿದ, ದೇವಾಃ - ದೇವತೆಗಳೂ, ಸಿದ್ಧಾಃ - ಸಿದ್ಧರುಗಳು, ಪರಮರ್ಷಯಃ - ಮಹಾತ್ಮರಾದ ಋಷಿಗಳೂ, ಧನ್ಯಾಃ - ಧನ್ಯರು.

" ಮ "

**ಮಂಗಲಾಭಿಮುಖೀ ತಸ್ಯ ಸಾ ತದಾಸೀನ್ಮಹಾಕಪೇಃ ।**
**ಉಪತಸ್ಥೇ ವಿಶಾಲಾಕ್ಷೀ ಪ್ರಯತಾ ಹವ್ಯವಾಹನಮ್ ॥ ೧೫ ॥**

**ಅರ್ಥ** : ಸಾ- ಆ (ಸೀತೆಯು), ತಸ್ಯ - ಆ, ಮಹಾಕಪೇಃ - ಮಹಾಕಪಿಯಾದ ಹನುಮಂತನ (ವಿಷಯಕ್ಕೆ), ತದಾ - ಆಗ, ಮಂಗಲಾಭಿಮುಖೀ

- ಮಂಗಳವನ್ನು ಬಯಸುವವಳಾಗಿ, ಆಸೀತ್ - ಆದಳು. ವಿಶಾಲಾಕ್ಷೀ - ಅಗಲವಾದ ಕಣ್ಣುಗಳುಳ್ಳ ಆಕೆಯು, ಪ್ರಯತಾ - ಪರಿಶುದ್ಧಳಾಗಿ, ಹವ್ಯವಾಹನಮ್ - ಅಗ್ನಿದೇವನನ್ನು, ಉಪತಸ್ಥೇ - ಬಳಿಸಾರಿದಳು.

" ಹಿ "

**ಹಿತಂ ಮಹಾರ್ಥಂ ಮೃದು ಹೇತುಸಂಹಿತಂ**
**ವ್ಯತೀತಕಾಲಾಯತಿಸಂಪ್ರತಿಕ್ಷಮಮ್ ।**
**ನಿಶಮ್ಯ ತದ್ವಾಕ್ಯಮುಪಸ್ಥಿತಜ್ವರಃ**
**ಪ್ರಸಂಗವಾನುತ್ತರಮೇತದಬ್ರವೀತ್ ॥೧೬॥**

**ಅರ್ಥ** : ಹಿತಂ - ಹಿತವಾದ, ಮಹಾರ್ಥಂ - ಹೆಚ್ಚಿನ ಪ್ರಯೋಜನಕಾರಿಯಾದ, ಮೃದು - ಮೆತ್ತನೆಯ, ಹೇತುಸಂಹಿತಂ - ಕಾರಣಗಳಿಂದ ಕೂಡಿದ, ವ್ಯತೀತ ....ಕ್ಷಮಮ್ - ಹಿಂದಿನ, ಮುಂದಿನ ಮತ್ತು ಈಗಿನ ಕಾಲಕ್ಕೆ ತಕ್ಕದ್ದಾದ, ತದ್ವಾಕ್ಯಂ - ಆ ವಿಭೀಷಣನ ಹಿತವಚನವನ್ನು, ನಿಶಮ್ಯ - ಕೇಳಿ, ಉಪಸ್ಥಿತಜ್ವರಃ - ಕೋಪಯುಕ್ತನಾದ, ಪ್ರಸಂಗವಾನ್ - ಹಿಡಿದದ್ದನ್ನು ಸಾಧಿಸುವ ಹಟಗಾರನಾದ ರಾವಣನು, ಏತತ್ - ಈ, ಉತ್ತರಂ - ಪ್ರತ್ಯುತ್ತರವನ್ನು, ಅಬ್ರವೀತ್ - ಹೇಳಿದನು.

" ಧ "

**ಧರ್ಮಾತ್ಮಾ ರಕ್ಷಸಾಂ ಶ್ರೇಷ್ಠಃ ಸಂಪ್ರಾಪ್ತೋಽಯಂ ವಿಭೀಷಣಃ ।**
**ಲಂಕೈಶ್ವರ್ಯಂ ಧ್ರುವಂ ಶ್ರೀಮಾನ್ ಅಯಂ ಪ್ರಾಪ್ನೋತ್ಯಕಂಟಕಮ್ ॥**

**ಅರ್ಥ** : ಧರ್ಮಾತ್ಮಾ - ಧರ್ಮಾತ್ಮನಾದ, ರಕ್ಷಸಾಂ ಶ್ರೇಷ್ಠಃ - ರಾಕ್ಷಸರುಗಳಲ್ಲಿ ಪೂಜ್ಯನಾದ, ಅಯಂ - ಈ, ವಿಭೀಷಣಃ - ವಿಭೀಷಣನು, ಸಂಪ್ರಾಪ್ತಃ - ಬಂದಿರುತ್ತಾನೆ. ಶ್ರೀಮಾನ್ - ಶ್ರೀಮಂತನಾದ, ಅಯಂ - ಇವನು, ಅಕಂಟಕಮ್ - ಅಡ್ಡಿಯಿಲ್ಲದೆ, ಲಂಕೈಶ್ವರ್ಯಂ - ಲಂಕಾರಾಜ್ಯವನ್ನು, ಧ್ರುವಂ - ಖಂಡಿತವಾಗಿ, ಪ್ರಾಪ್ನೋತಿ - ಪಡೆದುಕೊಳ್ಳುತ್ತಾನೆ.

" ಯೋ "

ಯೋ ವಜ್ರಪಾತಾಶನಿಸಂನಿಪಾತಾತ್
ನ ಚುಕ್ಷುಭೇ ನಾಪಿ ಚಚಾಲ ರಾಜಾ ।
ಸ ರಾಮಬಾಣಾಭಿಹತೋ ಭೃಶಾರ್ತಃ
ಚಚಾಲ ಚಾಪಂ ಚ ಮುಮೋಚ ವೀರಃ ॥ ೧೮॥

**ಅರ್ಥ** : ಯಃ - ಯಾವ, ರಾಜಾ - ರಾಜನು, ವಜ್ರ......ಪಾತಾತ್ - ಸಿಡಿಲಿನಂಥ ವಜ್ರಾಯುಧದ ಹೊಡೆತದಿಂದಲೂ, ನ ಚುಕ್ಷುಭೇ - ಕ್ಷೋಭಗೊಳ್ಳಲಿಲ್ಲವೋ, ಅಪಿ - ಮತ್ತು, ನ ಚಚಾಲ - ಅಳ್ಳಾಡಲಿಲ್ಲವೋ, ಸಃ - ಆ, ವೀರಃ - ವೀರನಾದ ( ರಾವಣನು), ರಾಮಬಾಣಾಭಿಹತಃ - ರಾಮನ ಬಾಣದಿಂದ ಹೊಡೆಯಲ್ಪಟ್ಟವನಾಗಿ, ಭೃಶಾರ್ತಃ - ಹೆಚ್ಚಾಗಿ ಬಳಲಿದವನಾಗಿ, ಚಚಾಲ - ಅಳ್ಳಾಡಿದನು. ಚ - ಮತ್ತು, ಚಾಪಂ - ಬಿಲ್ಲನ್ನು, ಮುಮೋಚ - ಕೈಬಿಟ್ಟನು.

" ಯೋ "

ಯಸ್ಯ ವಿಕ್ರಮಮಾಸಾದ್ಯ ರಾಕ್ಷಸಾ ನಿಧನಂ ಗತಾಃ ।
ತಂ ಮನ್ಯೇ ರಾಘವಂ ವೀರಂ ನಾರಾಯಣಮನಾಮಯಮ್ ॥ ೧೯ ॥

**ಅರ್ಥ** : ಯಸ್ಯ - ಯಾವನ, ವಿಕ್ರಮಮ್ - ಪರಾಕ್ರಮವನ್ನು, ಆಸಾದ್ಯ - ಹೊಂದಿ (ಎದುರಿಸಲಾರದೆ), ರಾಕ್ಷಸಾಃ - ರಾಕ್ಷಸರು, ನಿಧನಂ - ಮರಣವನ್ನು, ಗತಾಃ - ಹೊಂದಿದರೋ, ತಂ - ಆ, ವೀರಂ - ವೀರನಾದ, ರಾಘವಂ - ರಾಮನನ್ನು, ಅನಾಮಯಂ - ದೋಷರಹಿತನಾದ, ನಾರಾಯಣಂ - ನಾರಾಯಣನು - ಎಂದು, ಮನ್ಯೇ - ತಿಳಿದಿರುತ್ತೇನೆ.

" ನಃ "

ನ ತೇ ದದೃಶಿರೇ ರಾಮಂ ದಹನ್ತಮರಿವಾಹಿನೀಮ್ ।
ಮೋಹಿತಾಃ ಪರಮಾಸ್ತ್ರೇಣ ಗಾಂಧರ್ವೇಣ ಮಹಾತ್ಮನಾ ॥ ೨೦ ॥

**ಅರ್ಥ** : ಮಹಾತ್ಮನಾ - ಮಹಿಮೆಯಿಂದಕೂಡಿದ, ಪರಮಾಸ್ತ್ರೇಣ, ಹೆಚ್ಚಿನ ಅಸ್ತ್ರವಾದ, ಗಾಂಧರ್ವೇಣ - ಗಾಂಧರ್ವಾಸ್ತ್ರದಿಂದ, ಮೋಹಿತಾಃ - ಮೋಹ ಗೊಂಡ, ತೇ - ಆ ( ರಾಕ್ಷಸರು), ಅರಿವಾಹಿನೀಂ - ಶತ್ರುಸೈನ್ಯವನ್ನು, ದಹಂತಂ - ಸುಡುತ್ತಿರುವ, ರಾಮಂ - ರಾಮನನ್ನು, ನ ದದೃಶಿರೇ - ನೋಡಲಿಲ್ಲ.

" ಪ್ರ "

**ಪ್ರಣಮ್ಯ ದೇವತಾಭ್ಯಶ್ಚ ಬ್ರಾಹ್ಮಣೇಭ್ಯಶ್ಚ ಮೈಥಿಲೀ ।**
**ಬದ್ಧಾಂಜಲಿಪುಟಾ ಚೇದಮುವಾಚಾಗ್ನಿಸಮೀಪತಃ ॥ ೨೦ ॥**

**ಅರ್ಥ** : ಮೈಥಿಲೀ - ಸೀತೆಯು, ದೇವತಾಭ್ಯಃ - ದೇವತೆಗಳಿಗೆ, ಚ-ಮತ್ತು, ಬ್ರಾಹ್ಮಣೇಭ್ಯಃ - ಬ್ರಾಹ್ಮಣರಿಗೆ, ಪ್ರಣಮ್ಯ - ನಮಸ್ಕರಿಸಿ, ಬದ್ಧಾಂಜಲಿಪುಟಾ - ಕೈಗಳನ್ನು ಮುಗಿದುಕೊಂಡು, ಅಗ್ನಿಸಮೀಪತಃ - ಬೆಂಕಿಯ ಬಳಿಯಲ್ಲಿ ನಿಂತು, ಇದಂ - ಈ ಮಾತನ್ನು, ಉವಾಚ - ಹೇಳಿದಳು.

" ಚ "

**ಚಾಲನಾತ್ ಪರ್ವತಸ್ಯೈವ ಗಣಾ ದೇವಸ್ಯ ಕಂಪಿತಾಃ ।**
**ಚಚಾಲ ಪಾರ್ವತೀ ಚಾಪಿ ತದಾಶ್ಲಿಷ್ಟಾ ಮಹೇಶ್ವರಮ್ ॥ ೨೨॥**

**ಅರ್ಥ** : ಪರ್ವತಸ್ಯ - ಕೈಲಾಸಪರ್ವತದ, ಚಾಲನಾತ್ - ಅಲುಗಾಟದಿಂದ, ದೇವಸ್ಯ - ಪರಮೇಶ್ವರನ, ಗಣಾಃ - ಪ್ರಮಥಗಣಗಳು, ಕಂಪಿತಾಃ -ಅಳ್ಳಾಡಿದರು. ಪಾರ್ವತೀ ಚಾಪಿ - ಪಾರ್ವತಿಯೂ ಕೂಡ, ಚಚಾಲ - ನಡುಗಿದಳು. ತದಾ - ಆಗ, ಮಹೇಶ್ವರಮ್ - ಮಹಾದೇವನನ್ನು, ಆಶ್ಲಿಷ್ಟಾ - ತಬ್ಬಿಕೊಂಡಳು.

" ದ "

**ದಾರಾಃ ಪುತ್ರಾಃ ಪುರಂ ರಾಷ್ಟ್ರಂ ಭೋಗಾಚ್ಛಾದನಭೋಜನಮ್ ।**
**ಸರ್ವಮೇವಾವಿಭಕ್ತಂ ನೌ ಭವಿಷ್ಯತಿ ಹರೀಶ್ವರ ॥ ೨೩ ॥**

**ಅರ್ಥ** : ಹರೀಶ್ವರ - ಎಲೈ ಕಪಿರಾಜನೆ, ದಾರಾಃ- ಹೆಂಡತಿ, ಪುತ್ರಾಃ - ಮಕ್ಕಳು, ಪುರಂ - ರಾಜಧಾನಿ, ರಾಷ್ಟ್ರಂ - ದೇಶ, ಭೋಗಾಚ್ಛಾದನಭೋಜನಮ್ - ವಿಷಯಭೋಗಗಳು, ಉಡುಪುಗಳು, ಉಟೋಪಚಾರಗಳು,ಸರ್ವಮೇವ - ಇದೆಲ್ಲವೂ, ನೌ - ನಮ್ಮಿಬ್ಬರ ನಡುವೆ, ಅವಿಭಕ್ತಂ - ಪಾಲುಮಾಡದೆ ಇರುವವಾಗಿ, ಭವಿಷ್ಯತಿ - ಆಗಲಿದೆ.

"ಯಾ "

**ಯಾಮೇವ ರಾತ್ರಿಂ ಶತ್ರುಘ್ನಃ ಪರ್ಣಶಾಲಾಮುಪಾವಿಶತ್ ।**
**ತಾಮೇವ ರಾತ್ರಿಂ ಸೀತಾಪಿ ಪ್ರಸೂತಾ ದಾರಕದ್ವಯಮ್ ॥ ೨೪॥**

**ಅರ್ಥ** : ಶತ್ರುಘ್ನಃ - ಶತ್ರುಘ್ನನು, ಯಾಂ - ಯಾವ, ರಾತ್ರಿಂ -ರಾತ್ರಿಯಲ್ಲಿ, ಪರ್ಣಶಾಲಾಂ - ಕುಟೀರವನ್ನು, ಉಪಾವಿಶತ್ - ಪ್ರವೇಶಿಸಿದನೋ, ತಾಮೇವ - ಅದೇ, ರಾತ್ರಿಂ - ರಾತ್ರಿಯಲ್ಲಿಯೇ, ಸೀತಾಪಿ - ಸೀತೆಯೂ ಕೂಡ, ದಾರಕದ್ವಯಮ್ - ಎರಡು ಮಕ್ಕಳನ್ನು, ಪ್ರಸೂತಾ - ಹಡೆದಳು.

॥ ಇತಿ ಗಾಯತ್ರೀರಾಮಾಯಣಮ್ ॥

---------------

## ವಿದುರನೀತಿ

(ಮಹಾಭಾರತದಿಂದ)

**ನೀಷೇವತೇ ಪ್ರಶಸ್ತಾನಿ ನಿಂದಿತಾನಿ ನ ಸೇವತೇ ।**
**ಅನಾಸ್ತಿಕಃ ಶ್ರದ್ದಧಾನಃ ಏತತ್ ಪಂಡಿತಲಕ್ಷಣಮ್ ॥ ೨೫ ॥**

**ಅರ್ಥ** : ಪ್ರಶಸ್ತಾನಿ - ಉತ್ತಮವಾದವುಗಳನ್ನು, ನಿಷೇವತೇ- ಸೇವಿಸುತ್ತಾನೆ. ನಿಂದಿತಾನಿ - ನೀಚವಾದವುಗಳನ್ನು, ನ ಸೇವತೇ-ಸೇವಿಸುವದಿಲ್ಲ. ಅನಾಸ್ತಿಕಃ- ನಾಸ್ತಿಕನಲ್ಲದವನೂ, ಶ್ರದ್ಧಧಾನಃ-ಶ್ರದ್ಧೆಯುಳ್ಳವನೂ (ಆಗಿರುವನು). ಏತತ್-ಇದೇ,ಪಂಡಿತಲಕ್ಷಣಮ್ - ಪಂಡಿತನ ಲಕ್ಷಣವು.

**ಕ್ಷಿಪ್ರಂ ವಿಜಾನಾತಿ ಚಿರಂ ಶೃಣೋತಿ**
**ವಿಜ್ಞಾಯ ಚಾರ್ಥಂ ಭಜತೇ ನ ಕಾಮಾತ್ ।**
**ನಾಸಂಪೃಷ್ಟೋ ವ್ಯುಪಯುಂಕ್ತೇ ಪರಾರ್ಥೇ**
**ತತ್ ಪ್ರಜ್ಞಾನಂ ಪ್ರಥಮಂ ಪಂಡಿತಸ್ಯ ॥**

**ಅರ್ಥ** : ಕ್ಷಿಪ್ರಂ - ಬೇಗನೆ, ವಿಜಾನಾತಿ - ತಿಳಿಯುತ್ತಾನೆ. ಚಿರಂ- ಬಹಳಕಾಲ, ಶೃಣೋತಿ- ಕೇಳುತ್ತಾನೆ. ಅರ್ಥಂ - ಅಭಿಪ್ರಾಯವನ್ನು, ವಿಜ್ಞಾಯ - ಅರಿತವನಾಗಿ, ಭಜತೇ - ಸೇವಿಸುತ್ತಾನೆ. ನ ಕಾಮಾತ್ - ಕಾಮದಿಂದಲ್ಲ. ಪರಾರ್ಥೇ - ಮತ್ತೊಬ್ಬರ ವಿಷಯದಲ್ಲಿ, ಅಸಂಪೃಷ್ಟಃ - ಕೇಳಲ್ಪಡದೆ ಇದ್ದಾಗ, ನ ವ್ಯುಪಯುಂಕ್ತೇ - ಪ್ರವೇಶಿಸುವದಿಲ್ಲ. ಪಂಡಿತಸ್ಯ - ಪಂಡಿತನ, ಪ್ರಥಮಂ - ಮೊದಲನೆಯ, ಪ್ರಜ್ಞಾನಂ - ತಿಳಿವಳಿಕೆಯು, ತತ್ - ಅದು.

**ಏಕಃ ಪಾಪಾನಿ ಕುರುತೇ ಫಲಂ ಭುಂಕ್ತೇ ಮಹಾಜನಃ ।**
**ಭೋಕ್ತಾರೋ ವಿಪ್ರಮುಚ್ಯಂತೇ ಕರ್ತಾ ದೋಷೇಣ ಲಿಪ್ಯತೇ ॥**

**ಅರ್ಥ** : ಏಕಃ - ಒಬ್ಬನು, ಪಾಪಾನಿ - ಕೆಟ್ಟಕರ್ಮಗಳನ್ನು, ಕುರುತೇ - ಮಾಡುತ್ತಾನೆ. ಮಹಾಜನಃ - ಸಾಮಾನ್ಯರೆಲ್ಲರೂ, ಫಲಂ - ಫಲ ವನ್ನು, ಭುಂಕ್ತೇ- ಉಣ್ಣುತ್ತಾರೆ. ಭೋಕ್ತಾರಃ - ಫಲವನ್ನು ಅನುಭವಿಸುವವರು, ವಿಪ್ರಮುಚ್ಯಂತೇ - ಬಿಡಲ್ಪಡುವರು. ಕರ್ತಾ- ಮಾಡಿದವನು, ದೋಷೇಣ - ಪಾಪದೊಡನೆ, ಲಿಪ್ಯತೇ - ಅಂಟಿಕೊಳ್ಳುತ್ತಾನೆ.

**ಏಕಯಾ ದ್ವೇ ವಿನಿಶ್ಚಿತ್ಯ ತ್ರೀನ್ ಚತುರ್ಭಿರ್ವಶೇ ಕುರು ।**
**ಪಂಚ ಜಿತ್ವಾ ವಿದಿತ್ವಾ ಷಟ್ ಸಪ್ತ ಹಿತ್ವಾ ಸುಖೀ ಭವ ॥**

**ಅರ್ಥ** : (1) ಏಕಯಾ - ಒಂದು ಬುದ್ಧಿಯಿಂದ, ದ್ವೇ - ಕಾರ್ಯಾಕಾರ್ಯಗಳನ್ನು, ವಿನಿಶ್ಚಿತ್ಯ - ಗೊತ್ತುಪಡಿಸಿ, ತ್ರೀನ್ - ಶತ್ರು, ಮಿತ್ರ, ಉದಾಸೀನರೆಂಬ ಮೂವರನ್ನು, ಚತುರ್ಭಿಃ - ಸಾಮ, ದಾನ, ಭೇದ, ದಂಡಗಳೆಂಬ ನಾಲ್ಕು ಉಪಾಯಗಳಿಂದ, ವಶೇ ಕುರು - ಸ್ವಾಧೀನದಲ್ಲಿರಿಸಿಕೊ. ಪಂಚ- ಐದು ಇಂದ್ರಿಯಗಳನ್ನು, ಜಿತ್ವಾ- ಗೆದ್ದು, ಷಟ್ - ಸಂಧಿ, ವಿಗ್ರಹ, ಯಾನ, ಆಸನ, ಸಂಶ್ರಯ, ದ್ವೈಧೀಭಾವಗಳೆಂಬ ಆರು ಉಪಾಯಗಳನ್ನು, ವಿದಿತ್ವಾ -

ತಿಳಿದುಕೊಂಡು, ಸಪ್ತ - ಹೆಂಗಸು, ಜೂಜು, ಬೇಟೆ, ಕುಡಿತ, ಕ್ರೂರವಾದ ಮಾತು, ಕಠಿನವಾದ ಶಿಕ್ಷೆ, ಬೈಗಳು - ಇವುಗಳನ್ನು, ಹಿತ್ವಾ - ಬಿಟ್ಟು, ಸುಖೀ ಭವ - ಸುಖಿಯಾಗಿರು.

**(2) ಎರಡನೆಯ ಅರ್ಥ :** ಏಕಯಾ - ನಿಶ್ಚಿತವಾದ ಸದ್ಬುದ್ಧಿಯಿಂದ, ದ್ವೇ - ನಿತ್ಯಾನಿತ್ಯವಸ್ತುಗಳನ್ನು, ವಿನಿಶ್ಚಿತ್ಯ - ನಿರ್ಧರಿಸಿ, ತ್ರೀನ್ - ಕಾಮಕ್ರೋಧ ಲೋಭಗಳನ್ನು, ಚತುರ್ಭಿಃ -ಶಮ, ದಮ, ಉಪರಮೆ, ಶ್ರದ್ಧೆ ಎಂಬ ನಾಲ್ಕು ಗುಣಗಳಿಂದ, ವಶೇ ಕುರು - ಸ್ವಾಧೀನದಲ್ಲಿಟ್ಟುಕೊ. ಪಂಚ - ಪಂಚೇಂದ್ರಿಯ ಗಳನ್ನು, ಜಿತ್ವಾ- ಗೆದ್ದು, ಷಟ್ - ಹಸಿವು, ಬಾಯಾರಿಕೆ, ಶೋಕ, ಮೋಹ, ಜರಾ, ಮೃತ್ಯುಗಳೆಂಬಆರು ದೋಷಗಳನ್ನು ಅರಿತು, ಸಪ್ತ - ಐದು ಇಂದ್ರಿಯಗಳು ಬುದ್ಧಿ ಮತ್ತು ಮನಸ್ಸು - ಈ ಏಳನ್ನು ಕೈಬಿಟ್ಟು (ಎಂದರೆ ಅವುಗಳನ್ನು ಉದಾಸೀನ ಮಾಡಿ), ಸುಖೀ ಭವ - ಸುಖಿಯಾಗಿರು.

**ಪಂಚೇಂದ್ರಿಯಸ್ಯ ಮರ್ತ್ಯಸ್ಯ ಛಿದ್ರಂ ಚೇದೇಕಮಿಂದ್ರಿಯಮ್ ।**
**ತತೋಽಸ್ಯ ಸ್ರವತೇ ಪ್ರಜ್ಞಾ ದೃತೇಃ ಪಾತ್ರಾದಿವೋದಕಮ್ ॥**

**ಅರ್ಥ** : ಪಂಚೇಂದ್ರಿಯಸ್ಯ - ಐದು ಇಂದ್ರಿಯಗಳುಳ್ಳ, ಮರ್ತ್ಯಸ್ಯ - ಮನುಷ್ಯನಿಗೆ, ಏಕಂ - ಒಂದು, ಇಂದ್ರಿಯಮ್ - ಇಂದ್ರಿಯವು, ಛಿದ್ರಂ ಚೇತ್ - ತೂತುಬಿದ್ದದ್ದೇ ಆದರೆ (ದಾರಿಬಿಟ್ಟು ಹೋದರೆ), ತತಃ - ಅನಂತರ, ಅಸ್ಯ - ಇವನ, ಪ್ರಜ್ಞಾ- ಬುದ್ಧಿಯು, ದೃತೇಃ ಪಾತ್ರಾತ್ - ತೂತು ಬಿದ್ದಿರುವ ಚರ್ಮದ ಚೀಲದಿಂದ, ಉದಕಮಿವ - ನೀರು ಹೇಗೋ ಹಾಗೆ, ಸ್ರವತೇ -ಸೋರಿ ಹೋಗುತ್ತದೆ.

**ಯಥಾ ಮಧು ಸಮಾದತ್ತೇ ರಕ್ಷನ್ ಪುಷ್ಪಾಣಿ ಷಟ್ಪದಃ ।**
**ತದ್ವದರ್ಥಾನ್ ಮನುಷ್ಯೇಭ್ಯ ಆದದ್ಯಾದವಿಹಿಂಸಯಾ ॥**

**ಅರ್ಥ** : ಷಟ್ಪದಃ - ದುಂಬಿಯು, ಪುಷ್ಪಾಣಿ - ಹೂಗಳನ್ನು, ರಕ್ಷನ್ - ಕಾಪಾಡಿಕೊಂಡೇ, ಮಧು - ಜೇನುರಸವನ್ನು, ಯಥಾ - ಹೇಗೆ, ಸಮಾದತ್ತೇ - ಸ್ವೀಕರಿಸುತ್ತದೆಯೋ, ತದ್ವತ್ - ಅದರಂತೆ, ಮನುಷ್ಯೇಭ್ಯಃ - ಪ್ರಜೆಗಳಿಂದ,

ಅರ್ಥಾನ್ - ಧನ (ಕನಕಾದಿ)ಗಳನ್ನು, ಅವಿಹಿಂಸಯಾ - ಹಿಂಸೆಯಾಗದಂತೆ, ಆದದ್ಯಾತ್ - ಸ್ವೀಕರಿಸಬೇಕು.

**ಪುಷ್ಪಂ ಪುಷ್ಪಂ ವಿಚಿನ್ವೀತ ಮೂಲಚ್ಛೇದಂ ನ ಕಾರಯೇತ್ ।**
**ಮಾಲಾಕಾರ ಇವಾರಾಮೇ ನ ಯಥಾಂಗಾರಕಾರಕಃ ॥**

**ಅರ್ಥ** : ಆರಾಮೇ - ಉದ್ಯಾನವನದಲ್ಲಿ, ಮಾಲಾಕಾರ ಇವ - ಹೂವಾಡಿಗನಂತೆ, ಪುಷ್ಪಂ ಪುಷ್ಪಂ - ಒಂದೊಂದು ಹೂವನ್ನೂ, ವಿಚಿನ್ವೀತ - ಹುಡುಕಬೇಕು. ಯಥಾ - ಹೇಗೆ, ಅಂಗಾರಕಾರಕಃ - ಇದ್ದಿಲುಮಾಡುವವನು (ಬುಡಸಹಿತ ಮರಗಳನ್ನೇ ಕಡಿಯುತ್ತಾನೋ ಹಾಗೆ), ಮೂಲಚ್ಛೇದಂ - ಬುಡವನ್ನೇ ಕತ್ತರಿಸುವಿಕೆಯನ್ನು, ನ ಕಾರಯೇತ್ - ಮಾಡಬಾರದು.

**ವಶ್ಯೇಂದ್ರಿಯಂ ಜಿತಾತ್ಮಾನಂ ಧೃತದಂಡಂ ವಿಕಾರಿಷು ।**
**ಪರೀಕ್ಷ್ಯಕಾರಿಣಂ ಧೀರಂ ಅತ್ಯಂತಂ ಶ್ರೀರ್ನಿಷೇವತೇ॥**

**ಅರ್ಥ** : ವಶ್ಯೇಂದ್ರಿಯಂ -ಇಂದ್ರಿಯಗಳು ಹಿಡಿತದಲ್ಲಿರುವಂಥ, ಜಿತಾತ್ಮಾನಂ - ಮನಸ್ಸನ್ನು ಗೆದ್ದಿರುವ, ವಿಕಾರಿಷು - ಅಪರಾಧಿಗಳಲ್ಲಿ. ಧೃತದಂಡಂ- ಶಿಕ್ಷೆಯನ್ನು ವಿಧಿಸುವ, ಪರೀಕ್ಷ್ಯ ಕಾರಿಣಂ - ಪರೀಕ್ಷಿಸಿ ಕೆಲಸ ಮಾಡುವ, ಧೀರಂ - ಧೀರನನ್ನು ಶ್ರೀಃ - ಸಂಪತ್ತು, ಅತ್ಯಂತಂ - ಪೂರ್ಣರೂಪ ದಿಂದ, ನಿಷೇವತೇ - ಸೇವಿಸುತ್ತದೆ.

**ಅರ್ಥಾನಾಮೀಶ್ವರೋ ಯಃ ಸ್ಯಾದ್ ಇಂದ್ರಿಯಾಣಾಮನೀಶ್ವರಃ ।**
**ಇಂದ್ರಿಯಾಣಾಮನೈಶ್ವರ್ಯಾದ್ ಐಶ್ವರ್ಯಾದ್ ಭ್ರಶ್ಯತೇ ಹಿ ಸಃ ॥**

**ಅರ್ಥ** : ಯಃ - ಯಾವನು, ಅರ್ಥಾನಾಂ - ಧನಾದಿಗಳಿಗೆ, ಈಶ್ವರಃ - ಒಡೆಯನು, ಸ್ಯಾತ್ - ಆಗಿರುವನೋ, (ಆದರೆ) ಇಂದ್ರಿಯಾಣಾಂ - ಇಂದ್ರಿಯ ಗಳಿಗೆ, ಅನೀಶ್ವರಃ - ಒಡೆಯನಾಗಿಲ್ಲವೋ (ಎಂದರೆ ದಾಸನಾಗಿರುವನೋ) ಅವನು, ಇಂದ್ರಿಯಾಣಾಂ - ಇಂದ್ರಿಯಗಳ, ಅನೈಶ್ವರ್ಯಾತ್ - ಒಡೆತನವಿಲ್ಲದ್ದ ರಿಂದ, ಐಶ್ವರ್ಯಾದ್ - ಸಂಪತ್ತಿನಕಡೆಯಿಂದ, ಭ್ರಶ್ಯತೇ ಹಿ-ಖಂಡಿತವಾಗಿ ಜಾರಿಬೀಳುತ್ತಾನೆ.

**ಸರ್ವತೀರ್ಥೇಷು ವಾ ಸ್ನಾನಂ ಸರ್ವಭೂತೇಷು ಚಾರ್ಜವಮ್ ।**
**ಉಭೇ ತ್ವೇತೇ ಸಮೇ ಸ್ಯಾತಾಮಾರ್ಜವಂ ವಾ ವಿಶಿಷ್ಯತೇ ॥**

**ಅರ್ಥ** : ಸರ್ವತೀರ್ಥೇಷು - ಎಲ್ಲಾ ಪುಣ್ಯ ತೀರ್ಥಗಳಲ್ಲಿಯೂ, ಸ್ನಾನಂ - ಸ್ನಾನವು, ವಾ - ಅಥವಾ, ಸರ್ವಭೂತೇಷು - ಎಲ್ಲಾ ಪ್ರಾಣಿಗಳಲ್ಲಿಯೂ, ಆರ್ಜವಮ್ - ಸರಳತನದಿಂದಿರುವಿಕೆಯು (ಮಾತು, ಮನಸ್ಸು, ಕರ್ಮಗಳಲ್ಲಿ ಏಕರೂಪವಾಗಿರುವಿಕೆಯು) ಉಭೇ - ಇವೆರಡೂ, ಸಮೇ - ಸರಿಸಮವಾಗಿ, ಸ್ಯಾತಾಮ್ - ಆದಾವು. ವಾ- ಅಥವಾ, ಆರ್ಜವಂ- ಸರಳತನವೇ, ವಿಶಿಷ್ಯತೇ - ಹೆಚ್ಚಿನದಾಗಿರುತ್ತದೆ.

**ದಿವಸೇನೈವ ತತ್ ಕುರ್ಯಾತ್ ಯೇನ ರಾತ್ರೌ ಸುಖಂ ವಸೇತ್ ।**
**ಅಷ್ಟಮಾಸೇನ ತತ್ ಕುರ್ಯಾತ್ ಯೇನ ವರ್ಷಾಃ ಸುಖಂ ವಸೇತ್ ॥**

**ಅರ್ಥ** : ಯೇನ- ಯಾವ ಕಾರ್ಯವನ್ನು ಮಾಡುವದರಿಂದ, ರಾತ್ರೌ - ರಾತ್ರಿಯಲ್ಲಿ, ಸುಖಂ - ಸುಖವಾಗಿ. ವಸೇತ್ - ಇದ್ದುಕೊಂಡಿರಬಹುದೋ, ತತ್ - ಅದನ್ನು, ದಿವಸೇನೈವ - ಹಗಲಿನಲ್ಲಿಯೇ, ಕುರ್ಯಾತ್ - ಮಾಡಿಬಿಡಬೇಕು. ಹಾಗೆಯೇ, ಯೇನ - ಯಾವ ಕೆಲಸದಿಂದ, ವರ್ಷಾಃ - ವರ್ಷಗಟ್ಟಳೆಕಾಲವೂ, ಸುಖಂ - ಸುಖವಾಗಿ, ವಸೇತ್ - ಇದ್ದುಕೊಂಡಿರಬಹುದೋ, ತತ್ - ಅಂಥ ಕೆಲಸವನ್ನು, ಅಷ್ಟಮಾಸೇನ - ಎಂಟೇ ತಿಂಗಳಲ್ಲಿ, ಕುರ್ಯಾತ್ - ಮಾಡಿರಬೇಕು.

**ಪೂರ್ವೇ ವಯಸಿ ತತ್ ಕುರ್ಯಾದ್ ಯೇನ ವೃದ್ಧಃ ಸುಖಂ ವಸೇತ್ ।**
**ಯಾವಜ್ಜೀವೇನ ತತ್ ಕುರ್ಯಾತ್ ಯೇನ ಪ್ರೇತ್ಯ ಸುಖಂ ವಸೇತ್ ॥**

**ಅರ್ಥ** : ಯೇನ - ಯಾವ ಕೆಲಸದಿಂದ, ವೃದ್ಧಃ - ಮುದುಕನಾದ ಮೇಲೆ, ಸುಖಂ - ಸುಖವಾಗಿ, ವಸೇದ್ - ಇದ್ದುಕೊಂಡಿರಬಲ್ಲನೋ, ತತ್ - ಆ ಕೆಲಸವನ್ನು, ಪೂರ್ವೇ ವಯಸಿ - ಮುಂಚಿನ ವಯಸ್ಸಿನಲ್ಲಿಯೇ, ಕುರ್ಯಾತ್ - ಮಾಡತಕ್ಕದ್ದು, ಯೇನ- ಯಾವ ಕೆಲಸದಿಂದ, ಪ್ರೇತ್ಯ - ಶರೀರವನ್ನು ಬಿಟ್ಟ ಅನಂತರವೂ, ಸುಖಂ - ಸುಖವಾಗಿ, ವಸೇತ್ - ಇದ್ದುಕೊಂಡಿರಬಲ್ಲನೋ, ತತ್

- ಆ ಕೆಲಸವನ್ನು ಯಾವಜ್ಜೀವೇನ - ಬದುಕಿರುವವರೆಗೂ ಕುರ್ಯಾತ್ - ಮಾಡಬೇಕು.

**ಗುರುರಾತ್ಮವತಾಂ ಶಾಸ್ತಾ ಶಾಸ್ತಾ ರಾಜಾ ದುರಾತ್ಮನಾಮ್ ।**
**ಅಥ ಪ್ರಚ್ಛನ್ನಪಾಪಾನಾಂ ಶಾಸ್ತಾ ವೈವಸ್ವತೋ ಯಮಃ ॥**

**ಅರ್ಥ** : ಆತ್ಮವತಾಂ - ವಿವೇಕಿಗಳಿಗೆ, ಶಾಸ್ತಾ - ಶಿಕ್ಷಕನು, ಗುರುಃ - ಗುರುವು, ದುರಾತ್ಮನಾಂ - ದುಷ್ಟರಿಗೆ, ಶಾಸ್ತಾ - ಶಿಕ್ಷಕನು, ರಾಜಾ - ರಾಜನು. ಅಥ - ಇನ್ನು ಪ್ರಚ್ಛನ್ನಪಾಪಾನಾಂ - ಮರೆಯಲ್ಲಿ ಪಾಪಮಾಡಿದವರಿಗೆ (ಪಾಪವನ್ನು ಮುಚ್ಚಿಡುವವರಿಗೆ) ವೈವಸ್ವತಃ - ಸೂರ್ಯನ ಮಗನಾದ, ಯಮಃ - ಯಮರಾಜನು, ಶಾಸ್ತಾ - ಶಿಕ್ಷಕನು.

**ಅಪ್ರಾಪ್ತಕಾಲಂ ವಚನಂ ಬೃಹಸ್ಪತಿರಪಿ ಬ್ರುವನ್ ।**
**ಲಭತೇ ಬುಧ್ಯವಜ್ಞಾನಮಪಮಾನಂ ಚ ಭಾರತ ॥**

**ಅರ್ಥ** : ಅಪ್ರಾಪ್ತಕಾಲಂ - ಸಮಯವು ಒದಗದೆ ಇರುವಲ್ಲಿ, ವಚನಂ - ಮಾತನ್ನು, ಬೃಹಸ್ಪತಿರಪಿ - ದೇವಾಚಾರ್ಯನಾದ ಬೃಹಸ್ಪತಿಯೇ ಆಗಲಿ, ಬ್ರುವನ್ - ಹೇಳುತ್ತಾನಾದರೆ, ಬುದ್ಧ್ಯವಜ್ಞಾನಂ - ಜ್ಞಾನಕ್ಕೆ ತಿರಸ್ಕಾರವನ್ನೂ ಅಪಮಾನಂ ಚ - ಅವಮಾನವನ್ನೂ, ಲಭತೇ - ಹೊಂದುವನು.

**ಸಮೃದ್ಧಾ ಗುಣತಃ ಕೇಚಿತ್ ಭವನ್ತಿ ಧನತೋಽಪರೇ ।**
**ಧನವೃದ್ಧಾನ್ ಗುಣೈರ್ಹೀನಾನ್ ಧೃತರಾಷ್ಟ್ರ ವಿಸರ್ಜಯ ॥**

**ಅರ್ಥ** : ಕೇಚಿತ್ - ಕೆಲವರು, ಗುಣತಃ - ಗುಣಗಳಿಂದ, ಸಮೃದ್ಧಾಃ - ತುಂಬಿರುತ್ತಾರೆ. ಅಪರೇ - ಮತ್ತೆ ಕೆಲವರು, ಧನತಃ - ಹಣದಿಂದ ಹಿರಿಯರಾಗಿರುತ್ತಾರೆ. ಧೃತರಾಷ್ಟ್ರ - ಎಲೈ ಧೃತರಾಷ್ಟ್ರನೆ, ಗುಣೈಃ - ಗುಣಗಳಿಂದ, ಹೀನಾನ್ - ಕೀಳಾದ, ಧನವೃದ್ಧಾನ್ - ಸಾಹುಕಾರರನ್ನು, ವಿಸರ್ಜಯ - ಕೈಬಿಡು.

**ಯಸ್ತು ಪೂರ್ವಕೃತಂ ಪಾಪಮವಿಮೃಶ್ಯಾನುವರ್ತತೇ ।**
**ಅಗಾಧಪಂಕೇ ದುರ್ಮೇಧಾ ವಿಷಮೇ ವಿನಿಪಾತ್ಯತೇ ॥**

**ಅರ್ಥ** : ಯಃ - ಯಾವನು, ಪೂರ್ವಕೃತಂ - ಹಿಂದೆ ಮಾಡಿದ, ಪಾಪಂ - ಪಾಪವನ್ನು, ಅವಿಮೃಶ್ಯ - ವಿಚಾರಮಾಡದೆ, ಅನುವರ್ತತೇ - ಮತ್ತೆ ಮಾಡುವನೋ, ದುರ್ಮೇಧಾಃ - ದುರ್ಬುದ್ಧಿಯವನಾದ ಅವನು, ವಿಷಮೇ - ದುರ್ಗಮವಾದ, ಅಗಾಧಪಂಕೇ - ಆಳವಾದ ಕೆಸರಿನಲ್ಲಿ, ವಿನಿಪಾತ್ಯತೇ - ಕೆಡವಲ್ಪಡುತ್ತಾನೆ.

**ಅಭಿವಾದನಶೀಲಸ್ಯ ನಿತ್ಯಂ ವೃದ್ಧೋಪಸೇವಿನಃ ।**
**ಚತ್ವಾರಿ ತಸ್ಯ ವರ್ಧಂತೇ ಕೀರ್ತಿರಾಯುರ್ಯಶೋ ಬಲಮ್ ॥**

**ಅರ್ಥ** : ನಿತ್ಯಂ - ಯಾವಾಗಲೂ, ಅಭಿವಾದನಶೀಲಸ್ಯ - ನಮಸ್ಕಾರ ಮಾಡುವ ಅಭ್ಯಾಸವುಳ್ಳ, ವೃದ್ಧೋಪಸೇವಿನಃ - ಹಿರಿಯರಾದ ಅನುಭವಿಗಳನ್ನು ಸೇವೆಮಾಡುತ್ತಿರುವ, ತಸ್ಯ - ಅಂಥವನಿಗೆ, ಕೀರ್ತಿಃ - ಕೀರ್ತಿಯು, ಆಯುಃ - ಆಯುಷ್ಯವು, ಯಶಃ - ಯಶಸ್ಸು, ಬಲಂ - ಶಕ್ತಿಯು, ಚತ್ವಾರಿ - ಈ ನಾಲ್ಕೂ, ವರ್ಧಂತೇ - ಬೆಳೆಯುವವು.

**ಅತಿಕ್ಲೇಶೇನ ಯೇಽರ್ಥಾಃ ಸ್ಯುಃ ಧರ್ಮಸ್ಯಾತಿಕ್ರಮೇಣ ವಾ ।**
**ಅರೇರ್ವಾ ಪ್ರಣಿಪಾತೇನ ಮಾ ಸ್ಮ ತೇಷು ಮನಃ ಕೃಥಾಃ ॥**

**ಅರ್ಥ** : ಯೇ - ಯಾವ, ಅರ್ಥಾಃ - ಹಣದ ಸಮೂಹವು, ಅತಿಕ್ಲೇಶೇನ - ಮಿತಿಮೀರಿದ ದುಡಿಮೆಯಿಂದಲೂ, ವಾ - ಅಥವಾ, ಧರ್ಮಸ್ಯ - ಧರ್ಮವನ್ನು, ಅತಿಕ್ರಮೇಣ - ಮೀರುವದರಿಂದಲೂ, ವಾ - ಅಥವಾ, ಅರೇಃ - ಶತ್ರುವಿನ (ಕಾಲಿಗೆ), ಪ್ರಣಿಪಾತೇನ - ಬೀಳುವದರಿಂದಲೂ, ಸ್ಯುಃ - ಉಂಟಾಗಬಲ್ಲವೋ ತೇಷು - ಅಂಥವುಗಳಲ್ಲಿ, ಮನಃ - ಮನಸ್ಸನ್ನು, ಮಾ ಸ್ಮ ಕೃಥಾಃ - ಎಂದೆಂದಿಗೂ ಮಾಡಬೇಡ.

**ಪಂಚಾಗ್ನಯೋ ಮನುಷ್ಯೇಣ ಪರಿಚರ್ಯಾಃ ಪ್ರಯತ್ನತಃ ।**
**ಪಿತಾ ಮಾತಾಗ್ನಿರಾತ್ಮಾ ಚ ಗುರುಶ್ಚ ಭರತರ್ಷಭ ॥**

**ಅರ್ಥ** : ಭರತರ್ಷಭ - ಎಲೈ ಭರತಶ್ರೇಷ್ಠನೆ, ಮನುಷ್ಯೇಣ - ಮನುಷ್ಯನಿಂದ, ಪಿತಾ - ತಂದೆ, ಮಾತಾ - ತಾಯಿ, ಅಗ್ನಿಃ - ಅಗ್ನಿಯು, ಆತ್ಮಾ -

ತಾನು, ಗುರುಃ - ಗುರುವು ಈ, ಪಂಚಾಗ್ನಯಃ - ಐದು ಅಗ್ನಿಗಳು, ಪರಿಚರ್ಯಾಃ - ಸೇವಿಸಲ್ಪಡತಕ್ಕವು.

**ಯಾವತ್ ಕೀರ್ತಿರ್ಮನುಷ್ಯಸ್ಯ ಪುಣ್ಯಾ ಲೋಕೇ ಪ್ರಗೀಯತೇ ।**
**ತಾವತ್ ಸ ಪುರುಷವ್ಯಾಘ್ರ ಸ್ವರ್ಗಲೋಕೇ ಮಹೀಯತೇ ॥**

**ಅರ್ಥ** : ಪುರುಷವ್ಯಾಘ್ರ - ಎಲೈ ಪುರುಷಶ್ರೇಷ್ಠನೆ, ಮನುಷ್ಯಸ್ಯ - ಮನುಷ್ಯನ, ಪುಣ್ಯಾ - ಪುಣ್ಯತಮವಾದ, ಕೀರ್ತಿಃ - ಖ್ಯಾತಿಯು, ಯಾವತ್ - ಎಲ್ಲಿಯವರೆಗೆ, ಲೋಕೇ - ಈ ಮರ್ತ್ಯಲೋಕದಲ್ಲಿ, ಪ್ರಗೀಯತೇ - ಹಾಡಲ್ಪಡುತ್ತಿರುವದೋ, ತಾವತ್ - ಅಲ್ಲಿಯವರೆಗೂ, ಸಃ - ಅವನು, ಸ್ವರ್ಗಲೋಕೇ - ಸ್ವರ್ಗಲೋಕದಲ್ಲಿ, ಮಹೀಯತೇ - ಬೆಳಗುತ್ತಿರುವನು.

# ಶಾಂತಿ ಮಂತ್ರಗಳು

## "ಪ್ರಜ್ಞಾನಂ ಬ್ರಹ್ಮ"

### [ಋಗ್ವೇದ - ಐತರೇಯೋಪನಿಷತ್ತು ]

**ಓಂ. ವಾಙ್ಮೇ ಮನಸಿ ಪ್ರತಿಷ್ಠಿತಾ ಮನೋ ಮೇ ವಾಚಿ ಪ್ರತಿಷ್ಠಿತಮಾವಿರಾವೀರ್ಮ ಏಧಿ; ವೇದಸ್ಯ ಮ ಆಣೀಸ್ಥಃ ಶ್ರುತಂ ಮೇ ಮಾ ಪ್ರಹಾಸೀರನೇನಾಧೀತೇನಾಹೋರಾತ್ರಾನ್ ಸಂದಧಾಮಿ ; ಋತಂ ವದಿಷ್ಯಾಮಿ ಸತ್ಯಂ ವದಿಷ್ಯಾಮಿ ; ತನ್ಮಾಮವತು, ತದ್ವಕ್ತಾರಮವತು; ಅವತು ಮಾಮವತು ವಕ್ತಾರಮ್, ಅವತು ವಕ್ತಾರಮ್ ॥**

**ಓಂ ಶಾಂತಿಃ ಶಾಂತಿಃ ಶಾಂತಿಃ ।**

ನನ್ನ ವಾಕ್ಕು ಮನಸ್ಸಿನಲ್ಲಿಪ್ರತಿಷ್ಠಿತವಾಗಲಿ, ನನ್ನ ಮನಸ್ಸು ವಾಕ್ಕಿನಲ್ಲಿ ಪ್ರತಿಷ್ಠಿತವಾಗಲಿ. ಹೇ ಸ್ವಪ್ರಕಾಶವಾದ ಬ್ರಹ್ಮವೆ, ನನಗೆ ಪ್ರತ್ಯಕ್ಷವಾಗು. (ಹೇ ವಾಙ್ಮನಸ್ಸುಗಳೆ) ನನಗೆ ವೇದಾರ್ಥವನ್ನು ತರಲು ಸಮರ್ಥರಾಗಿರಿ. ನಾನು ಕಲಿತ ವೇದವು ನನ್ನನ್ನು ಬಿಡದಿರಲಿ. ಈ ಅಧ್ಯಯನದಿಂದ ಅಹೋರಾತ್ರಿಗಳನ್ನು ಸಂಯೋಜಿಸುತ್ತೇನೆ. ಋತವನ್ನು ಹೇಳುತ್ತೇನೆ, ಸತ್ಯವನ್ನು ಹೇಳುತ್ತೇನೆ. ಬ್ರಹ್ಮವು ನನ್ನನ್ನು ಕಾಪಾಡಲಿ ; ಅದು ಆಚಾರ್ಯನನ್ನು ಕಾಪಾಡಲಿ.

## "ಅಹಂ ಬ್ರಹ್ಮಾಸ್ಮಿ"

### [ಶುಕ್ಲ ಯಜುರ್ವೇದ - ಬೃಹದಾರಣ್ಯಕೋಪನಿಷತ್ತು ]

**ಓಂ ಸಹ ನಾವವತು । ಸಹ ನೌ ಭುನಕ್ತು ।**
**ಸಹ ವೀರ್ಯಂ ಕರವಾವಹೈ ।**
**ತೇಜಸ್ವಿನಾವಧೀತಮಸ್ತು ಮಾ ವಿದ್ವಿಷಾವಹೈ ॥**

ಓಂ ಪರಬ್ರಹ್ಮವು (ಗುರುಶಿಷ್ಯರಾದ) ನಮ್ಮಿಬ್ಬರನ್ನೂ ಜೊತೆಯಲ್ಲಿ ರಕ್ಷಿಸಲಿ, ನಮ್ಮಿಬ್ಬರನ್ನೂ ಜೊತೆಯಲ್ಲಿ ಪೋಷಿಸಲಿ, ಜೊತೆಯಲ್ಲಿಯೇ ನಾವಿಬ್ಬರೂ ತೇಜಸ್ವಿಗಳಾಗಲಿ, ನಾವು ದ್ವೇಷಿಸದೆ ಇರುವಂತಾಗಲಿ.

**ಓಂ ಶಾಂತಿಃ ಶಾಂತಿಃ ಶಾಂತಿಃ ।**

## "ತತ್ತ್ವಮಸಿ"

### [ಸಾಮವೇದ - ಛಾಂದೋಗ್ಯೋಪನಿಷತ್ತು ]

**ಓಂ ಆಪ್ಯಾಯಂತು ಮಮಾಂಗಾನಿ ವಾಕ್ ಪ್ರಾಣಶ್ಚಕ್ಷುಃ**
**ಶ್ರೋತ್ರಮಥೋ ಬಲಮಿಂದ್ರಿಯಾಣಿ ಚ ಸರ್ವಾಣಿ ।**
**ಸರ್ವಂ ಬ್ರಹ್ಮೌಪನಿಷದಂ ಮಾಽಹಂ ಬ್ರಹ್ಮ ನಿರಾಕುರ್ಯಾಮ್।**
**ಮಾ ಮಾ ಬ್ರಹ್ಮ ನಿರಾಕರೋತು ।**
**ಅನಿರಾಕರಣಮಸ್ತ್ವ ನಿರಾಕರಣಂ ಮೇಽಸ್ತು ।**
**ತದಾತ್ಮನಿ ನಿರತೇ ಯ ಉಪನಿಷತ್ಸು ಧರ್ಮಾಸ್ತೇ**
**ಮಯಿ ಸಂತು ತೇ ಮಯಿ ಸಂತು ॥**

**ಓಂ ಶಾಂತಿಃ ಶಾಂತಿಃ ಶಾಂತಿಃ ।**

ಓಂ. ನನ್ನ ಅಂಗಗಳೂ, ಮಾತೂ, ಪ್ರಾಣವೂ, ಕಣ್ಣು, ಕಿವಿಗಳೂ, ಬಲವೂ ಮತ್ತು ಎಲ್ಲಾ ಇಂದ್ರಿಯಗಳೂ ಪುಷ್ಟಿಯನ್ನು ಹೊಂದಲಿ. ಎಲ್ಲವೂ ಉಪನಿಷತ್ತುಗಳಲ್ಲಿ ಉಕ್ತವಾಗಿರುವ ಬ್ರಹ್ಮವೇ. ಆ ಪರಬ್ರಹ್ಮ ವಸ್ತುವನ್ನು ನಾನು ಎಂದಿಗೂ ನಿರಾಕರಿಸದಂತಿರಲಿ. ನನ್ನನ್ನು ಬ್ರಹ್ಮವು ನಿರಾಕರಿಸದಿರಲಿ. ನಿರಾಕರಣ ವೆಂಬುದೇ ಇಲ್ಲದಿರಲಿ. ಕೊನೆಗೆ ನನ್ನಿಂದಾದರೂ ನಿರಾಕಣೆಯಿಲ್ಲ ದಿರಲಿ. ಉಪನಿಷತ್ತುಗಳಲ್ಲಿ ಉಕ್ತವಾಗಿರುವ ಧರ್ಮಗಳೂ ಆತ್ಮನಿರತನಾದ ನನ್ನಲ್ಲಿ ನೆಲಸಿರಲಿ.

## "ಅಯಂ ಆತ್ಮಾ ಬ್ರಹ್ಮ"

### [ ಸಾಮವೇದ - ಮಾಂಡೂಕ್ಯೋಪನಿಷತ್ತು ]

ಓಂ ಭದ್ರಂ ಕರ್ಣೇಭಿಃ ಶೃಣುಯಾಮ ದೇವಾಃ
ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾಃ ।
ಸ್ಥಿರೈರಂಗೈಸ್ತುಷ್ಟುವಾಂಸಸ್ತನೂಭಿಃ
ವ್ಯಶೇಮ ದೇವಹಿತಂ ಯದಾಯುಃ ॥
ಸ್ವಸ್ತಿ ನ ಇಂದ್ರೋ ವೃದ್ಧಶ್ರವಾಃ
ಸ್ವಸ್ತಿ ನಃ ಪೂಷಾ ವಿಶ್ವವೇದಾಃ ॥
ಸ್ವಸ್ತಿ ನಸ್ತಾರ್ಕ್ಷ್ಯೋ ಅರಿಷ್ಟನೇಮಿಃ
ಸ್ವಸ್ತಿ ನೋ ಬೃಹಸ್ಪತಿರ್ದಧಾತು ॥
ಓಂ ಶಾಂತಿಃ ಶಾಂತಿಃ ಶಾಂತಿಃ ।

ಓಂ. ಹೇ ಜ್ಯೋತಿಸ್ವರೂಪಿಗಳಾದ ದೇವತೆಗಳೇ, ಮಂಗಳಕರವಾದುದನ್ನು ನಮ್ಮ ಕಿವಿಗಳು ಕೇಳಲಿ. ಹೇ ಪೂಜಾರ್ಹರೇ, ಪವಿತ್ರವಾದುದನ್ನು ನಮ್ಮ ಕಣ್ಣುಗಳು ನೋಡಲಿ ; ನಿಮ್ಮನ್ನು ನಾವು ಸ್ತುತಿಸುತ್ತ ದೇವರು ನಮಗೆ ಕೊಟ್ಟಿರುವ ಆಯುಸ್ಸನ್ನು ಆರೋಗ್ಯದೃಢಕಾಯರಾಗಿ ಕಳೆಯುವಂತಾಗಲಿ.

ವೃದ್ಧಶ್ರವನೆನಿಸಿದ ಇಂದ್ರನು ನಮಗೆ ಸ್ವಸ್ತಿ (ಮಂಗಳವನ್ನು) ಉಂಟು ಮಾಡಲಿ; ವಿಶ್ವವನ್ನು ಬಲ್ಲ ಪೂಷಾ - ದೇವನು ಸ್ವಸ್ತಿಯನ್ನು ಉಂಟುಮಾಡಲಿ. ಅರಿಷ್ಟನೇಮಿ-ಎಂಬ ಹೆಸರಿನ ಗರುಡನು ನಮಗೆ ಸ್ವಸ್ತಿಯನ್ನು ಉಂಟುಮಾಡಲಿ ; ಹಾಗೆಯೇ ಬೃಹಸ್ಪತಿಯು ಸಹ ಮಂಗಳವನ್ನು ದಯಪಾಲಿಸಲಿ.

ಓಂ ಶಾಂತಿಃ ಶಾಂತಿಃ ಶಾಂತಿಃ ।

## ಮೃತ್ಯುಂಜಯಮಹಾಮಂತ್ರ

ಓಂ ॥ ತ್ರ್ಯಂಬಕಂ ಯಜಾಮಹೇ ಸುಗಂಧಿಂ ಪುಷ್ಟಿವರ್ಧನಮ್ ।
ಉರ್ವಾರುಕಮಿವ ಬಂಧನಾನ್ಮೃತ್ಯೋರ್ಮುಕ್ಷೀಯ
ಮಾಮೃತಾತ್ ॥

**ಅರ್ಥ**: ಸುಗಂಧಿಮ್- ಒಳ್ಳೆಯ ಶರೀರಗಂಧವುಳ್ಳ (ಎಲ್ಲೆಲ್ಲೂ ಹರಡಲ್ಪಟ್ಟ ಕೀರ್ತಿಯುಳ್ಳ), ಪುಷ್ಟಿವರ್ಧನಮ್ - ಶರೀರವನ್ನೂ ಧನಾಧಿಗಳನ್ನೂ ಬೆಳೆಯಿಸುವ (ಜಗದ್ಬೀಜನಾದ), ತ್ರ್ಯಂಬಕಂ - ಮೂರು ಕಣ್ಣುಗಳುಳ್ಳವನಾದ (ಶಿವನನ್ನು) (ಅಥವಾ ಬ್ರಹ್ಮವಿಷ್ಣುರುದ್ರರಿಗೆ ತಂದೆಯಾದ ಮಹಾದೇವನನ್ನು) ಯಜಾಮಹೇ - ಪೂಜಿಸುವೆವು. ಎಲೈ ದೇವನೆ, ಉರ್ವಾರುಕಮಿವ - ಸೌತೆಕಾಯಿ ನಂತೆ, ಮೃತ್ಯೋಃ - (ಅಪಮೃತ್ಯುವಿನ) ಸಾವಿನ, ಬಂಧನಾತ್ - ಬಂಧನದಿಂದ, ಮುಕ್ಷೀಯ- ಬಿಡುಗಡೆ ಮಾಡುವವನಾಗು. ಅಮೃತಾತ್ - ಅಮೃತರೂಪದಿಂದ (ಅಥವಾ ದೀರ್ಘಾಯುಷ್ಯದಿಂದ) ಮಾ ಮುಕ್ಷೀಯ - ನಾನು ಬಿಡಲ್ಪಡದವ ನಾಗಲಿ. (ಅಮೃತತ್ವವನ್ನು ನಾನು ಪಡೆಯುವಂತಾಗಲಿ.)

**ಸ್ವಸ್ತಿ ಪ್ರಜಾಭ್ಯಃ ಪರಿಪಾಲಯಂತಾಂ**
**ನ್ಯಾಯ್ಯೇನ ಮಾರ್ಗೇಣ ಮಹೀಂ ಮಹೀಶಾಃ ।**
**ಗೋಬ್ರಾಹ್ಮಣೇಭ್ಯಃ ಶುಭಮಸ್ತು ನಿತ್ಯಂ ।**
**ಲೋಕಾಃ ಸಮಸ್ತಾಃ ಸುಖಿನೋ ಭವಂತು ॥**

**ಅರ್ಥ** : ಪ್ರಜಾಭ್ಯಃ - ಪ್ರಜೆಗಳಿಗೆ, ಸ್ವಸ್ತಿ - ಮಂಗಳವಾಗಲಿ ! ಮಹೀಶಾಃ -ಶಾಸಕರು, ಮಹೀಂ - ಭೂಮಿಯನ್ನು, ನ್ಯಾಯೇನ ಮಾರ್ಗೇಣ - ನ್ಯಾಯ ಮಾರ್ಗದಿಂದ (ಸರಿಯಾದ ರೀತಿಯಿಂದ) ಪರಿಪಾಲಯಂತಾಂ - ಆಳಲಿ ! ಗೋಬ್ರಾಹ್ಮಣೇಭ್ಯಃ - ಗೋವು ಮುಂತಾದ ಎಲ್ಲಾ ನಾಲ್ಕು ಕಾಲಿನ ಹಾಗೂ ಬ್ರಾಹ್ಮಣನೇ ಮುಂತಾದ ಎರಡುಕಾಲಿನ ಪ್ರಾಣಿಗಳಿಗೂ, ನಿತ್ಯಂ - ಯಾವಾಗಲೂ, ಶುಭಮಸ್ತು -ಶುಭವಾಗಲಿ ! ಸಮಸ್ತಾಃ - ಎಲ್ಲಾ, ಲೋಕಾಃ - ಲೋಕಗಳೂ, ಸುಖಿನಃ - ಸುಖಿಗಳಾಗಿ, ಭವಂತು - ಆಗಲಿ.

**ಕಾಲೇ ವರ್ಷತು ಪರ್ಜನ್ಯಃ ಪೃಥವೀ ಸಸ್ಯಶಾಲಿನೀ ।**
**ದೇಶೋಽಯಂ ಕ್ಷೋಭರಹಿತಃ ಸಾತ್ವಿಕಾಃ ಸನ್ತು ನಿರ್ಭಯಾಃ ।**

**ಅರ್ಥ** : ಪರ್ಜನ್ಯಃ -ಮಳೆಯು, ಕಾಲೇ - ಸಕಾಲದಲ್ಲಿ, ವರ್ಷತು -ಸುರಿಯಲಿ. ಪೃಥಿವೀ -ಭೂಮಿಯು, ಸಸ್ಯಶಾಲಿನೀ - ಪೈರುಗಳಿಂದ ಕೂಡಿರುವ ದಾಗಲಿ! ಅಯಂ -ಈ, ದೇಶಃ -ದೇಶವು, ಕ್ಷೋಭರಹಿತಃ -ಬಾಧೆಗಳಿಲ್ಲದ್ದಾಗಲಿ. ಸಾತ್ವಿಕಾಃ -ಒಳ್ಳೆಯವರು, ನಿರ್ಭಯಾಃ - ಭಯವಿಲ್ಲದವರಾಗಿ, ಸಂತು -ಆಗಲಿ.

**ಕಾಯೇನ ವಾಚಾ ಮನಸೇಂದ್ರಿಯೈರ್ವಾ**
**ಬುದ್ಧ್ಯಾತ್ಮನಾ ವಾ ಪ್ರಕೃತೇಃ ಸ್ವಭಾವಾತ್ ।**
**ಕರೋಮಿ ಯದ್ಯತ್ ಸಕಲಂ ಪರಸ್ಮೈ**
**ನಾರಾಯಣಾಯೇತಿ ಸಮರ್ಪಯಾಮಿ.**

ದೇಹ, ಮಾತು, ಮನಸ್ಸು, ಇಂದ್ರಿಯ, ಬುದ್ಧಿ, ಆತ್ಮ, ಅಥವಾ ಪ್ರಕೃತಿ ಸ್ವಭಾವ- ಇವುಗಳ ಮೂಲಕ ಮಾಡುವದೆಲ್ಲವನ್ನೂ ಶ್ರೀಮನ್ನಾರಾಯಣನಿಗೆ ಅರ್ಪಿಸುತ್ತೇನೆ.

------o------

# ರಾಮ ಭಜನೆ

## ಬಾಲಕಾಂಡ

ಶುದ್ಧಬ್ರಹ್ಮ ಪರಾತ್ಪರ ರಾಮ । ಕಾಲಾತ್ಮಕ ಪರಮೇಶ್ವರ ರಾಮ
ಶೇಷತಲ್ಪಸುಖನಿದ್ರಿತ ರಾಮ । ಬ್ರಹ್ಮಾದ್ಯಮರ ಪ್ರಾರ್ಥಿತ ರಾಮ
ಚಂಡಕಿರಣಕುಲಮಂಡನ ರಾಮ । ಶ್ರೀಮದ್ದಶರಥನಂದನ ರಾಮ
ಕೌಸಲ್ಯಾಸುಖವರ್ಧನ ರಾಮ । ವಿಶ್ವಾಮಿತ್ರಪ್ರಿಯಧನ ರಾಮ
ಘೋರತಾಟಕಾಘಾತಕ ರಾಮ । ಮಾರೀಚಾದಿನಿಪಾತಕ ರಾಮ
ಕೌಶಿಕಮಖಸಂರಕ್ಷಕ ರಾಮ । ಶ್ರೀಮದಹಲ್ಯೋದ್ಧಾರಕ ರಾಮ
ಗೌತಮಮುನಿಸಂಪೂಜಿತ ರಾಮ । ಸುರಮುನಿವರಗಣ ಸಂಸ್ತುತ ರಾಮ
ನಾವಿಕಧಾವಿತ ಮೃದುಪದ ರಾಮ । ಮಿಥಿಲಾಪುರಜನ ಮೋದದ ರಾಮ
ವಿದೇಹಮಾನಸ ರಂಜಕ ರಾಮ । ತ್ರ್ಯಂಬಕ ಕಾರ್ಮುಕ ಭಂಜಕ ರಾಮ
ಸೀತಾರ್ಪಿತವರಮಾಲಿಕ ರಾಮ । ಕೃತವೈವಾಹಿಕಕೌತುಕ ರಾಮ
ಭಾರ್ಗವದರ್ಪವಿನಾಶಕ ರಾಮ । ಶ್ರೀಮದಯೋಧ್ಯಾನಂದಕ ರಾಮ

## ಅಯೋಧ್ಯಾಕಾಂಡ

ಅಗಣಿತಗುಣಗಣ ಭೂಷಿತ ರಾಮ । ಅವನೀಕಾಮಿನಿ ಕಾಮಿತ ರಾಮ
ರಾಕಾಚಂದ್ರ ಸಮಾನನ ರಾಮ । ಪಿತೃವಾಕ್ಯಾಶ್ರಿತ ಕಾನನ ರಾಮ
ಪ್ರಿಯಗುಹ ವಿನಿವೇದಿತಪದ ರಾಮ । ತತ್‌ಕ್ಷಾಳಿತ ನಿಜಮೃದುಪದ ರಾಮ
ಭರದ್ವಾಜದೃಗಾನಂದನ ರಾಮ । ಚಿತ್ರಕೂಟಾದ್ರಿನಿಕೇತನ ರಾಮ
ದಶರಥ ಸಂತತಚಿಂತಿತ ರಾಮ । ಕೈಕೇಯಿಸುತ ಪ್ರಾರ್ಥಿತ ರಾಮ
ವಿರಚಿತ ನಿಜ ಪಿತೃ ಕರ್ಮಕ ರಾಮ । ಭರತಾರ್ಪಿತ ನಿಜಪಾದುಕ ರಾಮ
ದಂಡಕಾವನಜನ ಪಾವನ ರಾಮ ।

## ಅರಣ್ಯಕಾಂಡ

ದುಷ್ಟವಿರಾಧ ವಿನಾಶಕ ರಾಮ । ಶರಭಂಗ ಸುತೀಕ್ಷ್ಣಾರ್ಚಿತ ರಾಮ
ಅಗಸ್ತ್ಯಾನುಗ್ರಹವರ್ಧಿತ ರಾಮ । ಗೃಧ್ರಾಧಿಪ ಸಂಸೇವಿತ ರಾಮ
ಪಂಚವಟೀ ತಟ ಸುಸ್ಥಿತ ರಾಮ । ಶೂರ್ಪನಖಾರ್ತಿ ವಿಧಾಯಕ ರಾಮ
ಖರದೂಷಣ ಮುಖಭಂಜಕ ರಾಮ । ಸೀತಾಪ್ರಿಯ ಹರಿಣಾನುಗ ರಾಮ
ಮಾರೀಚಾರ್ತಿಕೃದಾಶುಗ ರಾಮ । ವಿನಷ್ಟ ಸೀತಾನ್ವೇಷಕ ರಾಮ
ಗೃಧ್ರಾಧಿಪ ಗತಿದಾಯಕ ರಾಮ । ಶಬರೀ ದತ್ತಫಲಾಶನ ರಾಮ
ಕಬಂಧ ಬಾಹುಚ್ಛೇದಕ ರಾಮ ।

## ಕಿಷ್ಕಿಂಧಾಕಾಂಡ

ಹನುಮತ್ಸೇವಿತ ನಿಜಪದ ರಾಮ । ನತಸುಗ್ರೀವಾಭೀಷ್ಟದ ರಾಮ
ಗರ್ವಿತ ವಾಲಿಸಂಹಾರಕ ರಾಮ । ವಾನರದೂತ ಪ್ರೇಷಕ ರಾಮ
ಹಿತಕರ ಲಕ್ಷ್ಮಣ ಸಂಯುತ ರಾಮ ।

## ಸುಂದರಕಾಂಡ

ಕಪಿವರ ಸಂತತ ಸಂಸ್ಮೃತ ರಾಮ । ತದ್ಗತಿ ವಿಘ್ನಧ್ವಂಸಕ ರಾಮ
ಸೀತಾಪ್ರಾಣಾಧಾರಕ ರಾಮ । ದುಷ್ಟದಶಾನನ ದೂಷಿತ ರಾಮ
ಶಿಷ್ಟ ಹನುಮದ್ಭೂಷಿತ ರಾಮ । ಸೀತೋದಿತ ಕಾಕಾವನ ರಾಮ
ಕೃತ ಚೂಡಾಮಣಿ ದರ್ಶನ ರಾಮ । ಕಪಿವರ ವಚನಾಶ್ವಾಸಿತ ರಾಮ

## ಯುದ್ಧಕಾಂಡ

ರಾವಣ ನಿಧನಪ್ರಸ್ಥಿತ ರಾಮ । ವಾನರಸೈನ್ಯ ಸಮಾವೃತ ರಾಮ
ಶೋಷಿತ ಶರಧೀಶಾರ್ಚಿತ ರಾಮ । ವಿಭೀಷಣಾಭಯದಾಯಕ ರಾಮ
ಪರ್ವತಸೇತು ನಿಬಂಧಕ ರಾಮ । ಘಟಕರ್ಣ ಶಿರಚ್ಛೇದಕ ರಾಮ
ರಾಕ್ಷಸಕೋಟಿ ವಿಮರ್ದಕ ರಾಮ । ಅಹಿಮಹಿರಾವಣ ಮಾರಣ ರಾಮ
ಸಂಹೃತ ದಶಮುಖ ರಾವಣ ರಾಮ । ವಿಧಿ ಭವ ಮುಖ ಸುರಸಂಸ್ತುತ ರಾಮ
ಖಸ್ಥಿತ ದಶರಥ ವೀಕ್ಷಿತ ರಾಮ । ಸೀತಾದರ್ಶನ ಮೋದಿತ ರಾಮ

ಅಭಿಷಕ್ತ ವಿಭೀಷಣನುತ ರಾಮ । ಪುಷ್ಪಕಯಾನಾರೋಹಣ ರಾಮ
ಭರದ್ವಾಜಾದಿ ನಿಷೇವಿತ ರಾಮ । ಭರತಪ್ರಾಣನವಿತರಣ ರಾಮ
ಸಾಕೇತಪುರೀ ಭೂಷಣ ರಾಮ । ಸಕಲಸ್ವೀಯ ಸಮಾವೃತ ರಾಮ
ರತ್ನಲಸತ್ಪೀಠಸ್ಥಿತ ರಾಮ । ಪಟ್ಟಾಭಿಷೇಕಾಲಂಕೃತ ರಾಮ
ಪಾಥಿದವಕುಲ ಸನ್ಮಾನಿತ ರಾಮ । ವಿಭೀಷಣಾರ್ಪಿತರಂಗಕ ರಾಮ
ಕೀಶಕುಲಾನುಗ್ರಾಹಕ ರಾಮ । ಸಕಲಜೀವ ಸಂರಕ್ಷಕ ರಾಮ
ಸಮಸ್ತ ಲೋಕೋದ್ಧಾರಕ ರಾಮ । ರಾಮ ರಾಮ ಜಯ ರಾಜಾರಾಮ
ರಾಮ ರಾಮ ಜಯ ಸೀತಾರಾಮ । ಆನಂದಾಮೃತ ವರ್ಷಜ ರಾಮ
ಆಶ್ರಿತವತ್ಸಲ ಜಯ ಜಯ ರಾಮ । ಭಯಹರ ಮಂಗಳ ದಶರಥ ರಾಮ
ಜಯ ಜಯ ಮಂಗಳ ಸೀತಾರಾಮ ।

## ಉತ್ತರ ಕಾಂಡ

ರಜಕಕಟೂಕ್ತ್ಯುದ್ದೀಪಿತ ರಾಮ । ವಿಪಿನಪ್ರೇಷಿತ ಸೀತಾರಾಮ
ಕಾಂತಾವಿರಹ ಸುದುಃಖಿತ ರಾಮ । ಸೋದರ ಸಂವರ್ಧಿತ ಮತಿ ರಾಮ
ಶಂಬೂಕಾಖ್ಯ ವಿಮರ್ದಕ ರಾಮ । ಸಾಹಸ ತೋಷಿತ ಭೂಸುರ ರಾಮ
ಅಶ್ವಮೇಧಕೃತ ದೀಕ್ಷಾ ರಾಮ । ಅನುಪಮ ಬಲ ಬಹು ದುರ್ಜಯ ರಾಮ
ಲವಕುಶ ಜನನಾನಂದಿತ ರಾಮ । ತನುಭವಸುವಿನುತ ನಿಜಕಥ ರಾಮ
ಸರಸಿಜ ಭವಮುಖ ಬೋಧಿತ ರಾಮ । ಸಕಲ ಸುರಸ್ತುತ ದಶರಥ ರಾಮ
ಭಜಕಾಭೀಷ್ಟದ ಸುರನುತ ರಾಮ । ಭುವನತ್ರಯ ಸಂಪೂಜಿತ ರಾಮ
ಅಕಳಂಕಿತಜನ ಪೋಷಕ ರಾಮ । ವಿನಯ ವಿಸೇಷ ಸುಶೋಭಿತ ರಾಮ
ನೀಲಮೇಘನಿಭ ವಿಗ್ರಹ ರಾಮ । ನಿರ್ವಿಕಾರ ಸದನುಗ್ರಹ ರಾಮ

ಜಯ ಜಯ ರಘುಕುಲ ಮೌಕ್ತಿಕ ರಾಮ ।
ಜಯ ಜಯ ರಮ್ಯ ಗುಣಾನ್ವಿತ ರಾಮ
ರಾಮ ರಾಮ ಜಯ ರಾಜಾರಾಮ
ರಾಮ ರಾಮ ಜಯ ಸೀತಾರಾಮ ॥
ರಘುಪತಿರಾಘವ ರಾಜಾರಾಮ । ಪತಿತಪಾವನ ಸೀತಾರಾಮ ।

***

# ಸೂರ್ಯಸ್ತೋತ್ರ

ಸ್ವಾಮಿದೇವನೆ ಲೋಕಪಾಲನೆ ತೇ ನಮೋऽಸ್ತು ನಮೋऽಸ್ತು ತೇ ।
ಪ್ರೇಮದಿಂದಲಿ ನೋಡು ನಮ್ಮನು ತೇ ನಮೋऽಸ್ತು ನಮೋऽಸ್ತುತೇ ॥ ಪ ॥

ನೇಮಿಸೆಮ್ಮೊಳು ಧರ್ಮಕಾರ್ಯವ ತೇ ನಮೋऽಸ್ತು ನಮೋऽಸ್ತುತೇ ।
ಕ್ಷೇಮದಿಂದಲಿ ಪಾಲಿಸೆಮ್ಮನು ತೇ ನಮೋऽಸ್ತು ನಮೋऽಸ್ತುತೇ ॥ ೧ ॥

ದೇವದೇವನೆ ಹಸ್ತಪಾದಗಳಿಂದಲೂ ಮನದಿಂದಲೂ ।
ನಾವು ಮಾಡಿದ ಪಾಪವೆಲ್ಲವ ಹೋಗಲಾಡಿಸು ಬೇಗನೆ ॥ ೨ ॥

ಕಾವರಿಲ್ಲವು ನಿನ್ನ ಬಿಟ್ಟರೆ ಸೂರ್ಯನೆ ಜಗದೀಶನೆ ।
ಜೀವಕೋಟಿಯು ನಿನ್ನ ಈ ಬೆಳಕಿಂದ ಜೀವಿಪುದಲ್ಲವೆ ॥ ೩ ॥

ರಾತ್ರಿನಿದ್ದೆಯ ಗೈವಕಾಲದಿ ನೀನೆ ನಮ್ಮನು ಕಾಯ್ದೆಯೈ ।
ಮಿತ್ರನೆಂಬುವ ನಾಮಧೇಯವು ಸತ್ಯವಾಯಿತು ನಿನ್ನೊಳು ॥ ೪ ॥

ಸ್ತೋತ್ರ ಮಾಡುವ ಹಾಗೆ ನಿನ್ನನು ಪಕ್ಷಿಗಳ್ ಧ್ವನಿ ಗೈವವೈ ।
ಚಿತ್ರಭಾನುವೆ ನೋಡಿ ನಿನ್ನನು ಎಲ್ಲಿ ಪೋದುದು ಕತ್ತಲೆ ॥ ೫ ॥

ಉತ್ತಮೋತ್ತಮ ನಿನ್ನ ಪಾದದ ಭಕ್ತಿಯೇ ಸ್ಥಿರವಲ್ಲವೇ ।
ಚಿತ್ತವೆಂಬುದು ಗಾಳಿಯಲ್ಲಿಹ ದೀಪದಂದಲಿ ಚಂಚಲ ॥ ೬ ॥

ಮತ್ತರಾಗುತ ಬಿಟ್ಟು ನಿನ್ನನು ಕೆಟ್ಟಯೋಚನೆ ಗೈಯದ ।
ಚಿತ್ತವಂ ನಮಗಿತ್ತು ರಕ್ಷಿಸು ಪದ್ಮನಾಭ ಸುರೇಶನೇ ॥ ೭ ॥

ಆಡುವಾಗಲು ನಾವು ಭೋಜನ ಮಾಡುವಾಗಲು ಸರ್ವದಾ ।
ನೋಡಿ ನೀ ದಯದಿಂದಲೆಮ್ಮನು ಪಾಲಿಸೈ ಭಗವಂತನೇ ॥ ೮ ॥

ಬೇಡಿಕೊಂಬೆವು ನಮ್ಮ ದೇಹಕೆ ಸೌಖ್ಯವಂ ಬಲುಪುಷ್ಟಿಯಂ ।
ನೀಡು ನಿನ್ನಯ ಪಾದ ಭಜನೆಯ ಎಂದಿಗೂ ಬಿಡಲಾರೆವೈ ॥ ೯ ॥

***

15. ಪ್ರಬೋಧ ಸುಧಾಕರ : (ಪ್ರಕರಣಗಳು ಸಂಪುಟ 8) :
ಪ್ರಬೋಧ ಸುಧಾಕರ, ಪ್ರಶ್ನೋತ್ತರ ರತ್ನಮಾಲಿಕಾ,
ಶ್ರೀರಾಮಭುಜಂಗ ಪ್ರಯಾತ, ದತ್ತಲಹರೀ ಸಹಿತ) 118

16. ದೇವೀಮಾಹಾತ್ಮ್ಯೆ: (ದುರ್ಗಾಸಪ್ತಶತೀ - ಮೂಲ, ಭಾವಾರ್ಥ ಸಹಿತ) 128

17. ಗೀತಾಮನನ : (101 ಶ್ಲೋಕಗಳಲ್ಲಿ ಗೀತೆಯ ಸಂಗ್ರಹ - ವಿವರಣೆ) 48

18. ಗೃಹಪ್ರವೇಶ : (ಹೊಸದಾಗಿ ಮನೆಯನ್ನು ಕಟ್ಟಿದವರು
ಅನುಸರಿಸಬೇಕಾದ ಕರ್ಮಗಳ ಅರ್ಥ ವಿವರಣೆ, ಗೃಹಸ್ಥಧರ್ಮದ
ಪ್ರಾಶಸ್ತ್ಯದೊಡನೆ - ಅಧ್ಯಾತ್ಮತತ್ತ್ವ ವಿಚಾರ ಸಹಿತ) 46

**19. ಸ್ತುತಿಪುಷ್ಪಾಂಜಲಿ : (ಭಕ್ತರೆಲ್ಲರೂ ಕಂಠಪಾಠಮಾಡಲು ಯೋಗ್ಯವಾದ
ಶ್ಲೋಕಗಳು, ಪ್ರತಿಪದಾರ್ಥಗಳ ಸಹಿತ) ಈಗ ನಿಮ್ಮ ಕೈಯಲ್ಲಿದೆ 72**

## 3. ಅಧ್ಯಾತ್ಮ ಜಿಜ್ಞಾಸುಗಳಿಗೆ (ತತ್ತ್ವಪ್ರಧಾನರಾದ ಮುಮುಕ್ಷುಗಳಿಗೆ)

20. ಮಹಾನಾರಾಯಣೋಪನಿಷತ್ತು :
(ಕನ್ನಡದಲ್ಲಿ ವಿಸ್ತಾರವಾದ - ಅರ್ಥ ವಿವರಣೆ) 220

21. ತೈತ್ತಿರೀಯೋಪನಿಷದ್ಭಾಷ್ಯವಾರ್ತಿಕ : (ಮೂಲ-ಅನುವಾದ ಸಹಿತ) 200

22. ಆತ್ಮಪ್ರತಿಬೋಧ : (ಕೇನೋಪನಿಷತ್ತನ್ನು ಕುರಿತ ಪ್ರಬಂಧ) 48

23. ಸರಸ್ವತೀರಹಸ್ಯೋಪನಿಷಚ್ಚಂದ್ರಿಕೆ:
(ಈ ಹೆಸರಿನ ಉಪನಿಷತ್ತಿನ ಮೇಲೆ ಬರೆದಿರುವ ವಿವರಣೆ) 58

24. ಬೃಹದಾರಣ್ಯಕೋಪನ್ಯಾಸಮಂಜರಿ :
(ಶಾಂಕರಭಾಷ್ಯಾನುಸಾರವಾದ ಲಘು ವಿವರಣೆ) 340

25. ಛಾಂದೋಗ್ಯೋಪನ್ಯಾಸಮಂಜರಿ :
(ಶಾಂಕರ ಭಾಷ್ಯಾನುಸಾರವಾದ ಲಘು ವಿವರಣೆ) 338

26. ಶ್ವೇತಾಶ್ವತರೋಪನ್ಯಾಸಮಂಜರಿ : (ಈ ಉಪನಿಷತ್ತಿನ ಲಘು ವಿವರಣೆ) 354

27. ತೈತ್ತಿರೀಯೋಪನ್ಯಾಸ ಮಂಜರಿ : (ಈ ಉಪನಿಷತ್ತಿನ ಲಘು ವಿವರಣೆ) 83

28. ಐತರೇಯೋಪನ್ಯಾಸಮಂಜರಿ : (ಈ ಉಪನಿಷತ್ತಿನ ಲಘು ವಿವರಣೆ) 28

29. ಗೀತಾಶಾಸ್ತ್ರಾರ್ಥವಿವೇಕ :
(ಶ್ರೀ ಶ್ರೀಗಳವರ ಸಂಸ್ಕೃತ ಗ್ರಂಥದ ಕಿರು ಪರಿಚಯ) 52

*****

# ದಿ. ವೇ|| ಬ್ರ|| ಶ್ರೀ ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿಗಳು
## (1928 - 2007)

ಅಧ್ಯಾತ್ಮ ವಿದ್ಯಾಪ್ರವೀಣ ವೇ|| ಬ್ರ|| ಶ್ರೀ ಹೆಚ್.ಎಸ್. ಲಕ್ಷ್ಮೀನರಸಿಂಹ ಮೂರ್ತಿಗಳು ತಾ|| 2-6-1928ರಂದು ನರಸಿಂಹರಾಜಪುರದಲ್ಲಿ ಜನಿಸಿದರು. ಇವರ ಪೂಜ್ಯ ತಂದೆಯವರು ಶೃಂಗೇರಿಯ ಕೃಷ್ಣಯಜುರ್ವೇದ ಸಲಕ್ಷಣ ಘನಾಂತ ಸ್ಮಾರ್ತಪ್ರಯೋಗ ವಿದ್ವಾಂಸರಾಗಿದ್ದ ವೇ|| ಶ್ರೀಕಂಠ ಘನಪಾಠಿಗಳವರು ಮತ್ತು ತಾಯಿಯವರು ಸೌ|| ಕಮಲಮ್ಮನವರು. ಶ್ರೀ ಮೂರ್ತಿಯವರು ಒಂಬತ್ತನೆಯ ವಯಸ್ಸಿನಲ್ಲಿಯೇ ಬ್ರಹ್ಮಚರ್ಯಾಶ್ರಮವನ್ನು ಸ್ವೀಕರಿಸಿ ತಂದೆಯವರಲ್ಲಿಯೇ ಉಪಯುಕ್ತವಾದ ವೇದಭಾಗವನ್ನು ಅಭ್ಯಾಸ ಮಾಡಿದರು. ಆದರೆ ತಮ್ಮ 14ನೇ ವಯಸ್ಸಿನಲ್ಲಿ ಪಿತೃವಿಯೋಗವಾದ್ದರಿಂದ ಮುಂದೆ ಬೇಲೂರಿನ ಸಂಸ್ಕೃತ ಪಾಠಶಾಲೆಯಲ್ಲಿ 4 ವರ್ಷ ವ್ಯಾಸಂಗ ಮಾಡಿ, ಚಂಪೂ ನಾಟಕ (ಸಾಹಿತ್ಯ) ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ನಂತರ 1947ರಲ್ಲಿ ಹೊಳೆನರಸೀಪುರದಲ್ಲಿ ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀಸ್ವಾಮಿಗಳಿಂದ ಸ್ಥಾಪಿತವಾಗಿದ್ದ ''ಅಧ್ಯಾತ್ಮ ವಿದ್ಯಾನಿಲಯ''ದಲ್ಲಿ ಶ್ರೀಗಳಿಂದಲೇ 5 ವರ್ಷ ಕಾಲ ಶಾಂಕರಭಾಷ್ಯ ಪ್ರಸ್ಥಾನಗಳನ್ನು ಅಧ್ಯಯನ ಮಾಡಿ 1952ರಲ್ಲಿ ''ಅಧ್ಯಾತ್ಮ ವಿದ್ಯಾಪ್ರವೀಣ'' ಎಂಬ ಪ್ರಶಸ್ತಿಯನ್ನು ಪಡೆದರು. ನಂತರ ಕಾರ್ಯಾಲಯದಲ್ಲೇ ಪಂಡಿತರಾಗಿ ನೇಮಕಗೊಂಡು ಪಾಠ, ಪ್ರವಚನ, ವೇದಾಂತಪ್ರಚಾರ, ಗ್ರಂಥಪ್ರಕಾಶನ, ಗ್ರಂಥರಚನೆ ಮುಂತಾದ ಹಲವಾರು ಕಾರ್ಯಗಳನ್ನು ನಡೆಸಿಕೊಡುತ್ತಾ ಜಯಪ್ರಿಯರಾಗಿ ಶ್ರೀ ಶ್ರೀಗಳವರ ಶಿಷ್ಯರಲ್ಲಿ ಗಣ್ಯರಾಗಿದ್ದು ಕಾರ್ಯಾಲಯದ ಪುರೋಭಿವೃದ್ಧಿಗೆ ಬಹುಮುಖವಾಗಿ ಕಾರಣರಾದರು.

ಶ್ರೀ ಶ್ರೀಗಳು 1975ರಲ್ಲಿ ಬ್ರಹ್ಮೀಭೂತರಾದ ಮೇಲೆ ಶ್ರೀ ಮೂರ್ತಿಗಳೇ ಅಧ್ಯಾತ್ಮಪ್ರಕಾಶ ಮಾಸ ಪತ್ರಿಕೆಯ ಸಂಪಾದಕರಾದರು. 1997-98 ಮತ್ತು 2001-02 ಈ ಅವಧಿಯಲ್ಲಿ ಇವರು ನಡೆಸಿಕೊಟ್ಟ ಶಾಂಕರಭಾಷ್ಯಾನುಸಾರ ''ಬ್ರಹ್ಮಸೂತ್ರಭಾಷ್ಯ'' ಮತ್ತು ''ಭಗವದ್ಗೀತಾ ಭಾಷ್ಯ''ಗಳ ವೇದಾಂತ ಶಿಬಿರಗಳು ಚಿರಸ್ಮರಣೀಯವಾಗಿವೆ. ಈ ಶಿಬಿರಗಳಲ್ಲಿನ ಪ್ರವಚನಗಳು ಸಿ.ಡಿ. (MP3) ರೂಪದಲ್ಲಿ ಈಗಲೂ ಕಾರ್ಯಾಲಯ ದಲ್ಲಿ ಲಭ್ಯವಿದೆ. ಇಷ್ಟಲ್ಲದೆ ಶ್ರೀ ಮೂರ್ತಿಗಳು ವೇದ, ವೇದಾಂತ, ಸಂಪ್ರದಾಯ, ಸ್ತೋತ್ರ ಇತ್ಯಾದಿ ವಿಷಯಗಳ ಸುಮಾರು 29 ಗ್ರಂಥಗಳನ್ನೂ ರಚಿಸಿರುತ್ತಾರೆ. ಈ ಗ್ರಂಥಗಳೆಲ್ಲವೂ ಕಾರ್ಯಾಲಯದಲ್ಲಿ ದೊರೆಯುತ್ತವೆ.

ಇಂತಹ ಪುಣ್ಯಜೀವಿಗಳು ತೀವ್ರ ಅನಾರೋಗ್ಯ ನಿಮಿತ್ತ ತಾ|| 4-2-2007 ರಂದು ತಮ್ಮ 79ನೇ ವಯಸ್ಸಿನಲ್ಲಿ ಹೊಳೆನರಸೀಪುರದಲ್ಲಿ ಕೀರ್ತಿಶೇಷರಾದರು. ಪೂಜ್ಯರ ಸುಮಾರು 55 ವರ್ಷಗಳ ಕಾಲದ ನಿಃಸ್ವಾರ್ಥಸೇವೆಯನ್ನು ಕಾರ್ಯಾಲಯವು ಸದಾ ಕಾಲವೂ ಅತ್ಯಂತ ಭಕ್ತಿಯಿಂದ ಸ್ಮರಿಸುತ್ತದೆ.